

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 25 ಬುಧವಾರ 2023

ಸಂಪುಟ: 43 | ಸಂಚಿಕೆ: 278 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com





ಮೇ ಎರಡನೇ ವಾರ



ರಾಜ್ಯ ವಿಧಾನಸಭಾ ಚುನಾವಣೆ

ಮಾರ್ಚ್ ಅಂತ್ಯಕ್ಕೆ ವೇಳಾಪಟ್ಟಿ ಪ್ರಕಟ ಖಚಿತ

ಒಂದೇ ಹಂತದಲ್ಲಿ ಚುನಾವಣೆ ನಡೆಸಲು ಚುನಾವಣಾ ಆಯೋಗ ಚಿಂತನೆ

ಮೇ 10 ಇಲ್ಲವೆ 13ಕ್ಕೆ ಚುನಾವಣೆ, 16ರಂದು ಫಲಿತಾಂಶ, ಮೇ 3ನೇವಾರ ಹೊಸ ಸರ್ಕಾರ ರಚನೆ ಸಾಧ್ಯತೆ



ಬೆಂಗಳೂರು, ಜ.24(ಕೆಎಂಶಿ)– ರಾಜ್ಯ ವಿಧಾನಸಭೆಗೆ ಮೇ ಎರಡನೇ ವಾರದಲ್ಲಿ ಚುನಾವಣೆ ಜರುಗಲಿದೆ. ರಾಜ್ಯದ 224 ಕ್ಷೇತ್ರಗಳಿಗೆ ಮಾರ್ಚ್ ಅಂತ್ಯದ ವೇಳೆಗೆ ಕೇಂದ್ರ ಚುನಾವಣಾ ಆಯೋಗ ವೇಳಾಪಟ್ಟಿ ಪ್ರಕಟಿಸಲಿದೆ. ಕರ್ನಾಟಕದಲ್ಲಿ ಶಾಂತಿ ಸುವ್ಯವಸ್ಥೆ ಚೆನ್ನಾಗಿರುವ ಹಿನ್ನೆಲೆಯಲ್ಲಿ ಒಂದೇ ಹಂತದಲ್ಲಿ ಚುನಾವಣೆ ನಡೆಸಲು ಆಯೋಗ ಆಲೋಚಿಸಿದೆ.

ದಕ್ಷಿಣ ಭಾರತದಲ್ಲಿ ಕರ್ನಾಟಕ ವಿಧಾನ ಸಭೆಗೆ ಮಾತ್ರ ಚುನಾವಣೆ ಜರುಗುತ್ತಿರುವುದರಿಂದ ಶಾಂತಿ ಸುವ್ಯವಸ್ಥೆಗಾಗಿ ನೆರೆ ರಾಜ್ಯಗಳ ಪೊಲೀಸ್ ಸಿಬ್ಬಂದಿಯನ್ನು ಬಳಕೆ ಮಾಡಿಕೊಳ್ಳಬಹುದು. ಎರಡು ಹಂತದ ಬದಲು ಒಂದೇ ಹಂತದಲ್ಲಿ ಚುನಾವಣೆ ನಡೆಸುವುದರಿಂದ ಚುನಾವಣಾ ಅಕ್ರಮಗಳಿಗೆ ಅವಕಾಶವಾಗದಂತೆ ಹಾಗೂ ಸಿಬ್ಬಂದಿಗೆ ಒತ್ತಡವಾಗದಂತೆ ನಿರ್ವಹಿಸಬಹುದೆಂಬ ಉದ್ದೇಶದಿಂದ ಇಂತಹ ತೀರ್ಮಾನಕ್ಕೆ ಬಂದಿದೆ ಎನ್ನಲಾಗಿದೆ. ಕೇಂದ್ರ ಚುನಾವಣಾ ಆಯೋಗ ಕಳೆದ ಆರು ತಿಂಗಳಿಂದ ರಾಜ್ಯ ವಿಧಾನಸಭೆಗೆ ಚುನಾವಣೆ ಸಂಬಂಧ ನಿರಂತರವಾಗಿ ಸಭೆಗಳನ್ನು ನಡೆಸಿರುವುದಲ್ಲದೆ, ಕರ್ನಾಟಕದ ಅಧಿಕಾರಿಗಳ ಜೊತೆ ಸಂಪರ್ಕ ಇಟ್ಟುಕೊಂಡು ಈ ಸಂಬಂಧ ಸಲಹೆ ಸೂಚನೆಗಳನ್ನು ನೀಡುತ್ತಿದೆ. ಮೇ 10 ಇಲ್ಲವೇ 13ರಂದು ಚುನಾವಣೆ ನಡೆಸಿ, 16ರಂದು ಫಲಿತಾಂಶ ಪ್ರಕಟ ಮಾಡುವ ಸಂಬಂಧ ತಾತ್ಕಾಲಿಕ ವೇಳಾಪಟ್ಟಿ ಸಿದ್ಧಗೊಂಡಿದೆ. ಇದೇ ಅಂತಿಮವೇನಲ್ಲ. ಇದರ ಜೊತೆಗೆ ಇನ್ನೂ ಕೆಲ ದಿನಾಂಕಗಳನ್ನು ಆಯೋಗ ಸಿದ್ಧಪಡಿಸಿಕೊಂಡಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಮೇ ಮೂರನೇ ವಾರದೊಳಗೆ ಹೊಸ ಸರ್ಕಾರ ಅಸ್ತಿತ್ವಕ್ಕೆ ತರಲು ಎಲ್ಲಾ ರೀತಿಯ ಸಿದ್ಧತೆಗಳನ್ನು ನಡೆಸಿದೆ. ಈಗಾಗಲೇ ಕೇಂದ್ರ ಚುನಾವಣಾ ಆಯೋಗ ಅಧಿಕಾರಿಗಳು ರಾಜ್ಯದ ಮುಖ್ಯ ಕಾರ್ಯದರ್ಶಿ ಮತ್ತು ರಾಜ್ಯದ ಪೊಲೀಸ್ ಮಹಾ ನಿರ್ದೇಶಕರೊಂದಿಗೆ ಹಲವು ಸುತ್ತಿನ ಸಭೆಗಳನ್ನು ನಡೆಸಿದ್ದಾರೆ. ವೇಳಾಪಟ್ಟಿ ಪ್ರಕಟಣೆಗೂ ಮುನ್ನವೇ ಎಸ್ಎಸ್ಎಲ್‌ಸಿ, ಪಿಯುಸಿ ಸೇರಿದಂತೆ ಎಲ್ಲಾ ಹಂತದ ಪರೀಕ್ಷೆಗಳನ್ನು ಪೂರ್ಣಗೊಳಿಸಲು ಆಯೋಗ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಚುನಾವಣೆಗೆ ಮತಗಟ್ಟೆಗಳೆಷ್ಟು, ಅವುಗಳಲ್ಲಿ ಸೂಕ್ಷ್ಮ, ಅತೀ ಸೂಕ್ಷ್ಮ ಮತಗಟ್ಟೆಗಳ ಗುರುತಿಸುವಿಕೆ, ಸಿಬ್ಬಂದಿಗೆ ತರಬೇತಿ ಬಗ್ಗೆಯೂ ಆಯೋಗ ರಾಜ್ಯದ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದೆ. ▶ 8ನೇ ಪುಟಕ್ಕೆ

ಫೆ.13ರಿಂದ ಬೆಂಗಳೂರಲ್ಲಿ ಏರ್ ಶೋ



ಕಲಬುರಗಿ: ರಾಜಧಾನಿ ಬೆಂಗಳೂರಿನಲ್ಲಿ ಫೆಬ್ರವರಿ 13ರಿಂದ 17ರವರೆಗೆ ನಡೆಯಲಿರುವ ಏರೋ ಇಂಡಿಯಾ ಶೋ 14ನೇ ಆವೃತ್ತಿಯು ಅತೀ ಹೆಚ್ಚು ಜನರ ಭಾಗವಹಿಸುವಿಕೆಯ ಮೂಲಕ "ಅತಿದೊಡ್ಡ ವೈಮಾನಿಕ ಪ್ರದರ್ಶನ' ಎನಿಸಿಕೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಹೇಳಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ 'ಅಪೆಕ್ಸ್ ಕಮಿಟಿ' ಸಭೆಯಲ್ಲಿ ಕಾರ್ಯಕ್ರಮದ ಸಿದ್ಧತೆಗಳನ್ನು ಪರಿಶೀಲಿಸಲು ಮುಖ್ಯಮಂತ್ರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಕಲಬುರಗಿಯಿಂದ ಭಾಗವಹಿಸಿದ್ದರು. ಅತೀ ಹೆಚ್ಚು ಜನರು ಭಾಗವಹಿಸುವಿಕೆಯೊಂದಿಗೆ ಅತೀ ದೊಡ್ಡ ಏರ್ ಶೋ ಆಗಲಿದೆ. ಪ್ರತಿನಿಧಿಗಳು, ಏರೋಸ್ಪೇಸ್ ▶ 6ನೇ ಪುಟಕ್ಕೆ

ಹಾಸನಕ್ಕೆ ನಾನೇ ಜೆಡಿಎಸ್ ಅಭ್ಯರ್ಥಿ



ಹಾಸನ: ತೀವ್ರ ಕುತೂಹಲ ಕೆರಳಿಸಿರುವ ಹಾಸನ ವಿಧಾನ ಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿ ಯಾರು ಎಂಬ ಗೊಂದಲ ಮುಂದುವರಿದಿರುವಾಗಲೇ, ನಾನೇ ಅಭ್ಯರ್ಥಿ ಎಂದು ಜಿ.ಪಂ. ಮಾಜಿ ಸದಸ್ಯೆ ಭವಾನಿ ರೇವಣ್ಣ ಹೇಳಿಕೊಂಡಿದ್ದಾರೆ. ಹಾಸನ ತಾಲೂಕಿನ ಸಾಲಗಾಮೆ ಹೋಬಳಿ ಕಕ್ಕೇಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಅಣ್ಣಪ್ಪ ಸ್ವಾಮಿ ದೇವಾಲಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿರುವ ಅವರು, ಜೆಡಿಎಸ್‌ನಿಂದ ನನ್ನನ್ನು ಅಭ್ಯರ್ಥಿ ಮಾಡಬೇಕು ಎಂದು ಎಲ್ಲರೂ ಮಾತನಾಡಿಕೊಂಡು ನಿರ್ಣಯ ತೆಗೆದುಕೊಂಡಿದ್ದಾರೆ. ಸ್ವಲ್ಪ ದಿನಗಳಲ್ಲೇ ನನ್ನ ಹೆಸರು ಘೋಷಣೆಯಾಗಲಿದೆ ಎಂದರು.

ಕಳೆದ ಬಾರಿ ಹಾಸನ ವಿಧಾನಸಭಾ ಕ್ಷೇತ್ರ ಬಿಜೆಪಿ ಕ್ಷೇತ್ರವಾಗಿ ಕೆಲವು ಕೆಲಸ, ಕಾರ್ಯಗಳು ಉಳಿದುಕೊಂಡಿವೆ. ಚುನಾವಣೆ ಇನ್ನೇನು ▶ 6ನೇ ಪುಟಕ್ಕೆ

ಮುಖ್ಯಮಂತ್ರಿ ಬೊಮ್ಮಾಯಿ ತಂಡ ತೊಲಗಿದ ಮೇಲೆ ಗಂಜಲ ಹಾಕಿ ವಿಧಾನಸೌಧ ಶುದ್ಧ ಮಾಡುತ್ತೇವೆ

- ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ
- 200 ಯೂನಿಟ್ ಉಚಿತ ವಿದ್ಯುತ್, 2 ಸಾವಿರ ಪ್ರೋತ್ಸಾಹ ಧನ ಘೋಷಣೆಯಿಂದ ಬಿಜೆಪಿ ವಲಯದಲ್ಲಿ ತಲ್ಲಣ
- ಈಗ ಸಿದ್ದರಾಮಯ್ಯ ಸರ್ಕಾರದಲ್ಲಿ 35 ಸಾವಿರ ಕೋಟಿ ಅವ್ಯವಹಾರ ಎನ್ನುವವರು ಮೂರೂವರೆ ವರ್ಷ ಕಡಲೇಕಾಯಿ ತಿನ್ನುತ್ತಿದ್ದರಾ...



ಬೆಂಗಳೂರು, ಜ.24(ಕೆಎಂಶಿ)–ಬಿಜೆಪಿ ಸರ್ಕಾರ ಇಡೀ ರಾಜ್ಯಕ್ಕೆ ಕಳಂಕ ತಂದಿದ್ದು, ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಅವರ ಮಂತ್ರಿಗಳು ತಮ್ಮ ಗಂಟು ಮೂಟೆ ಕಟ್ಟಿಕೊಂಡು ಹೊರಡಲಿ, ನಾವು ಗಂಜಲ ತಂದು ವಿಧಾನಸೌಧವನ್ನು ಶುದ್ಧ ಮಾಡುತ್ತೇವೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷ ಪ್ರಜಾಧ್ವನಿ ಯಾತ್ರೆ ಸಂದರ್ಭದಲ್ಲಿ ಎರಡು ಗ್ಯಾರಂಟಿ ಯೋಜನೆಗಳನ್ನು ಪ್ರಕಟಿಸಿದ್ದು, ಆ ಮೂಲಕ 200 ಯುನಿಟ್ ವಿದ್ಯುತ್ ಉಚಿತ, ಗೃಹಿಣಿಯರಿಗೆ 2 ಸಾವಿರ ಪ್ರೋತ್ಸಾಹ ಧನ ನೀಡುವುದು ಖಚಿತ ಎಂದು ಘೋಷಿಸಿದ ನಂತರ ಬಿಜೆಪಿಯವರ ತಲೆ ಕೆಟ್ಟು ಹೋಗಿದೆ ಮಹಿಳೆಯರಿಗೆ ಪ್ರೋತ್ಸಾಹ ಧನದ ಮೂಲಕ ವರ್ಷಕ್ಕೆ 24 ಸಾವಿರ, 200 ಯುನಿಟ್ ಉಚಿತ ವಿದ್ಯುತ್ ಮೂಲಕ ವರ್ಷಕ್ಕೆ 18 ಸಾವಿರ ರೂ. ಉಳಿತಾಯವಾಗುತ್ತದೆ.

ಇಂತಹ ದೊಡ್ಡ ಯೋಜನೆ, ಜನರ ಹೃದಯ ತಲುಪುವ ಯೋಜನೆ ಘೋಷಿಸಿರುವುದರ ಬಗ್ಗೆ ಸಂಕಟದಿಂದ ಅಪಸ್ವರ ಎತ್ತಿದ್ದಾರೆ. ಈ ಸರ್ಕಾರದ ಆಯಸ್ಸು ಇನ್ನು 40 ದಿನ ಇದೆ. ನೀವು ಇನ್ಯಾರಿಂದ ವಸೂಲಿ ಮಾಡುವುದು ▶ 6ನೇ ಪುಟಕ್ಕೆ

ಮದ್ದೂರು ತಾಲೂಕು ಕಚೇರಿಯಲ್ಲಿ ಮಚ್ಚಿನಿಂದ ವ್ಯಕ್ತಿ ಮೇಲೆ ಭೀಕರ ಹಲ್ಲೆ

- ಕಚೇರಿ ಸಿಬ್ಬಂದಿ, ನೂರಾರು ಜನರ ಸಮ್ಮುಖದಲ್ಲೇ ನಡೆದುಹೋಯ್ತು ಭಯಾನಕ ಘಟನೆ
- ಕೊನೆಗೆ ಕಲ್ಲು ತೂರಿ ವ್ಯಕ್ತಿಯ ಪಾರು; ಗಂಭೀರ ಸ್ಥಿತಿಯಲ್ಲಿ ಮಿಮ್ಸ್‌ನಲ್ಲಿ ಚಿಕಿತ್ಸೆ
- ಹಳೇ ದ್ವೇಷ, ಭೂಮಿ ವಿವಾದ ಸಂಬಂಧ ನಡೆದ ಮಾರಣಾಂತಿಕ ಹಲ್ಲೆ



ಮದ್ದೂರು, ಜ.24– ಮನುಷ್ಯ ಹಾಡಹಗಲೇ ಎಲ್ಲೆಂದರಲ್ಲಿ ಕ್ರೌರ್ಯ ಮೆರೆಯುವ ಪ್ರಕರಣಗಳು ದಿನೇ ದಿನೆ ಹೆಚ್ಚಾಗುತ್ತಿದ್ದು, ಇದರಿಂದ ಅಮಾಯಕರು ತತ್ತರಿಸಿ ಹೋಗಿದ್ದಾರೆ. ಮಾತೆತ್ತಿದರೆ ಲಾಂಗು, ಮಚ್ಚು ಬೀಸುವ ಭೀಕರತೆಯೇ ರಾರಾಜಿಸಲಾರಂಭಿಸಿದೆ. ಇಂದು ಮಟ–ಮಟ ಮಧ್ಯಾಹ್ನ ಮದ್ದೂರು ತಾಲೂಕು ಕಚೇರಿಯಲ್ಲಿ ಹಳೇ ವೈಷಮ್ಯದ ಹಿನ್ನೆಲೆಯಲ್ಲಿ ಹಾಡಹಗಲೇ ಮಚ್ಚಿನಿಂದ ವ್ಯಕ್ತಿಯೋರ್ವನ ಮೇಲೆ ಹಲ್ಲೆ ▶ 8ನೇ ಪುಟಕ್ಕೆ

ಹೊರಳಹಳ್ಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ: ಚಿರತೆಗೆ ಬಲಿಯಾದ ಬಾಲಕನ ಕುಟುಂಬಕ್ಕೆ ಸಾಂತ್ವನ

ಮತ್ತೆ ಅನಾಹುತ ನಡೆದರೆ ಅಧಿಕಾರಿಗಳ ತಲೆದಂಡ



ತಿ.ನರಸೀಪುರ, ಜ.24– ತಾಲೂಕಿನಲ್ಲಿ ಚಿರತೆ ಉಪಟಳ ತಡೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದ್ದು, ಮುಂದೆ ಅನಾಹುತ ಸಂಭವಿಸಿದರೆ ಅಧಿಕಾರಿಗಳ ತಲೆದಂಡ ಖಚಿತ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಎಚ್ಚರಿಕೆ ನೀಡಿದ್ದಾರೆ.


ಹೊರಳಹಳ್ಳಿ ಗ್ರಾಮಕ್ಕೆ ಮಂಗಳವಾರ ಭೇಟಿ ನೀಡಿದ್ದ ಅವರು, ಚಿರತೆ ದಾಳಿಗೆ ಬಲಿಯಾದ ಬಾಲಕ ಜಯಂತ್ ಕುಟುಂಬದವರಿಗೆ ಸಾಂತ್ವನ ಹೇಳಿ, ಸರ್ಕಾರದ 10 ಲಕ್ಷ ರೂ. ಪರಿಹಾರದ ಚೆಕ್ ವಿತರಿಸಿ ಮಾಧ್ಯಮಗಳೊಂದಿಗೆ ಮಾತನಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಈಗಾಗಲೇ ಜಿಲ್ಲಾಧಿಕಾರಿಗಳು ತ್ವರಿತವಾಗಿ ಕ್ಯುಬ್ಬ ಕೂಂಬಿಂಗ್ ಮಾಡಲು ಆದೇಶಿಸಿದ್ದಾರೆ. ಅಲ್ಲದೇ ಚಿರತೆ ಕಂಡಲ್ಲಿ ಶೂಟ್ ಮಾಡಲು ಆದೇಶ ನೀಡಿದ್ದಾರೆ. ಪ್ರಾಣಿಗಳು ಹಾಗೂ ಅರಣ್ಯ ವಿಷಯವಾದ ಕಾರಣ ಸಾರ್ವಜನಿಕರ ಹಿತದೃಷ್ಟಿಯಿಂದ ಮುಖ್ಯಮಂತ್ರಿಗಳೇ ಸೂಕ್ತ ಕ್ರಮ ಸೂಚಿಸಲಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳ ನ್ಯೂನತೆ ಇದ್ದರೂ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸಲಿದ್ದಾರೆ ಎಂದರು.

ಅಧಿಕಾರಿಗಳ ವಿರುದ್ಧ ಆರೋಪ: ಸಚಿವರು ಬಾಲಕ ಜಯಂತ್ ಕುಟುಂಬದವರಿಗೆ ಸಾಂತ್ವನ ಹೇಳುವ ಸಂದರ್ಭದಲ್ಲಿ ದಲಿತ ಮುಖಂಡ ಶಿವಕುಮಾರ್, ತಾಲೂಕಿನಲ್ಲಿ ಚಿರತೆ ದಾಳಿಗೆ ನಾಲ್ವರು ಬಲಿಯಾಗಿದ್ದಾರೆ. ಈ ವೇಳೆ ನೀವಾಗಲಿ, ಜಿಲ್ಲಾಧಿಕಾರಿಗಳಾಗಲಿ ಭೇಟಿ ನೀಡಿರಲಿಲ್ಲ. ಜನಾಕ್ರೋಶ ಹೆಚ್ಚಾಗಿದ್ದರಿಂದ ಮೊನ್ನೆಯಷ್ಟೆ ಜಿಲ್ಲಾಧಿಕಾರಿಗಳು ಭೇಟಿ ನೀಡಿದ್ದರು. ಅರಣ್ಯ ಇಲಾಖೆ ಅಧಿಕಾರಿಗಳು ಸಾರ್ವಜನಿಕರ ನೋವಿಗೆ ಸ್ಪಂದಿಸುತ್ತಿಲ್ಲ. ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ. ಈ ಹಿಂದೆ ಚಿರತೆ ಮೇಕೆ ಇನ್ನಿತರ ಸಾಕು ಪ್ರಾಣಿಗಳ ಮೇಲೆ ದಾಳಿ ಮಾಡಿದಾಗಲೇ ಕ್ರಮ ವಹಿಸಿದ್ದರೆ ಮನುಷ್ಯರ ಜೀವಹಾನಿ ತಡೆಯಬಹುದಿತ್ತು ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ, ಮೃತರ ಕುಟುಂಬಗಳಿಗೆ ಹಂತ ಹಂತವಾಗಿ ಪರಿಹಾರ ನೀಡುವುದು ಸರಿಯಲ್ಲ ಎಂದರು.

ಸಿಎಂ ನಿರ್ಧರಿಸುತ್ತಾರೆ: ಶಿವಕುಮಾರ್ ಮಾತಿಗೆ ಪ್ರತಿಕ್ರಿಯಿಸಿದ ಸಚಿವರು, ಚಿರತೆಯಿಂದಾದ ಜೀವಹಾನಿಯ ಬಗ್ಗೆ ಜಿಲ್ಲಾಧಿಕಾರಿಗಳು ಗಮನಕ್ಕೆ ತಂದಿದ್ದಾರೆ. ಕಾರ್ಯಾಚರಣೆ ತೀವ್ರಗೊಳಿಸಲು ನಾನೂ ಸೂಚಿಸಿದ್ದೆ. ಪರಿಹಾರ ಮೊತ್ತವನ್ನು ಒಂದೇ ಕಂತಿನಲ್ಲಿ ನೀಡುವ ಬಗ್ಗೆ ▶ 8ನೇ ಪುಟಕ್ಕೆ

ತಿ.ನರಸೀಪುರದಲ್ಲಿ ಚಿರತೆ ಸೆರೆಗೆ ಟಾಸ್ಕ್‌ಫೋರ್ಸ್ ರಚನೆ: ಸಿಎಂ



ಬೆಂಗಳೂರು, ಜ.24– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೈಸೂರು ಜಿಲ್ಲೆಯ ತಿ.ನರಸೀಪುರದಲ್ಲಿ ಚಿರತೆ ದಾಳಿ ಪ್ರಕರಣಗಳ ಕುರಿತಂತೆ ಅರಣ್ಯ ಇಲಾಖೆ ಹಾಗೂ ಮೈಸೂರು ಜಿಲ್ಲಾಡಳಿತದೊಂದಿಗೆ ಇಂದು ಸಭೆ ನಡೆಸಿ ಚರ್ಚಿಸಿ, ಚಿರತೆ ಸೆರೆಗೆ ಟಾಸ್ಕ್‌ಫೋರ್ಸ್ ರಚಿಸಲು ಸೂಚಿಸಿದರು.

ತಿ.ನರಸೀಪುರ ತಾಲೂಕಿನಲ್ಲಿ ನಿರಂತರವಾಗಿ ನಡೆಯುತ್ತಿರುವ ಚಿರತೆ ದಾಳಿ ಪ್ರಕರಣಗಳ ಕುರಿತು ಕಳವಳ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು, ಈ ಚಿರತೆಯನ್ನು ಕೂಡಲೇ ಸೆರೆ ಹಿಡಿಯಲು ಎಲ್ಲ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಪ್ರಸ್ತುತ ಚಿರತೆ ಸೆರೆಗೆ 158 ಮಂದಿ ಕೆಲಸ ಮಾಡುತ್ತಿದ್ದಾರೆ. ಕೋಂಬಿಂಗ್ ಆಪರೇಷನ್ ಪ್ರಾರಂಭವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಪ್ರಕರಣ ಸಂಭವಿಸಿದ 3–4 ಕಿ.ಮೀ. ಸುತ್ತಳತೆಯಲ್ಲಿ ಕ್ಷಿಪ್ರ ಕೋಂಬಿಂಗ್ ಕಾರ್ಯಾಚರಣೆ ನಡೆಸಲು ಸೂಚಿಸಿದರು. ಚಿರತೆ ದಾಳಿಯಿಂದಾಗಿ ತಿ. ನರಸೀಪುರ ತಾಲೂಕಿನ 21 ಹಳ್ಳಿಗಳು ಬಾಧಿತವಾಗಿವೆ. ಈ ಹಳ್ಳಿಗಳಲ್ಲಿ ಚಿರತೆ ಸೆರೆ ಹಿಡಿಯಲು ಸ್ಥಳೀಯರ ನೆರವು ಪಡೆಯುವಂತೆ ಸೂಚಿಸಿದರು. ಅಗತ್ಯವಿದ್ದಲ್ಲಿ ಸಶಸ್ತ್ರ ಮೀಸಲು ಪೊಲೀಸ್ ಪಡೆಗಳ ನೆರವು ಪಡೆಯಲು ಸೂಚಿಸಿದರು. ಸಭೆಯಲ್ಲಿ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್, ಅರಣ್ಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಮುಖ್ಯಮಂತ್ರಿಯವರ ಕಾರ್ಯದರ್ಶಿ ಎಂ.ಎಸ್.ಶ್ರೀಕರ್, ಮೈಸೂರು ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಮತ್ತು ಇತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ನ್ಯಾಯಾಧೀಶರ ನೇಮಕಾತಿಯಲ್ಲಿ ಸರ್ಕಾರ, ರಾಜಕಾರಣಿಗಳ ಹಸ್ತಕ್ಷೇಪ ಸರಿಯಲ್ಲ

- ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಆತಂಕ
- ಲೋಕಾಯುಕ್ತಕ್ಕೆ ಸ್ವತಃ ಅಧಿಕಾರಿಗಳ ನೇಮಕ ಅಧಿಕಾರವಿರಬೇಕು
- ಮತ ಗಳಿಸಲು ಧರ್ಮ, ಭಾಷೆ ಬಳಸುವುದು ಅತ್ಯಂತ ಅಪಾಯಕಾರಿ

ಮೈಸೂರು, ಜ.24(ಆರ್‌ಕೆಬಿ)– ನ್ಯಾಯಾಧೀಶರ ನೇಮಕಾತಿಯಲ್ಲಿ ಕೇಂದ್ರ ಸರ್ಕಾರವಾಗಲೀ, ರಾಜಕಾರಣಿಗಳಾಗಲೀ ಹಸ್ತಕ್ಷೇಪ ಮಾಡುವುದು ಸರಿಯಲ್ಲ. ಇಂತಹ ಒಂದು ಪ್ರಯತ್ನ ನ್ಯಾಯಾಂಗದ ಮೇಲೆ ಚುನಾಯಿತ ಪ್ರತಿನಿಧಿಗಳ ಸವಾರಿ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ವಿಷಾದ ವ್ಯಕ್ತಪಡಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಜಿಲ್ಲಾ ಪತ್ರಕರ್ತರ ಸಂಘ ಮಂಗಳವಾರ ಏರ್ಪಡಿಸಿದ್ದ 'ಮಾಧ್ಯಮ ಸಂವಾದ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಾಸಕಾಂಗ ಮತ್ತು ಸುಪ್ರೀಂಕೋರ್ಟ್ ಕೊಲಿಜಿಯಂ ನಡುವೆ ಸಂಘರ್ಷ ನಡೆಯುತ್ತಿದೆ. ಶಾಸಕಾಂಗವು ಸರ್ವೋಚ್ಚ ಶಕ್ತಿಯಾಗಲು ಪ್ರಯತ್ನಿಸುತ್ತಿರುವುದನ್ನು ನೋಡುತ್ತಿದ್ದೇವೆ. ಸರ್ಕಾರವು ಸಂವಿಧಾನ ಬಾಹಿರವಾಗಿ ನ್ಯಾಯಾಂಗದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿದೆ. ಕೊಲಿಜಿಯಂ ಸ್ವತಂತ್ರ ವ್ಯವಸ್ಥೆಯಾಗಿದ್ದು, ಯಾವುದೇ ರಾಜಕೀಯ ಹಸ್ತಕ್ಷೇಪ ಇದರಲ್ಲಿ ಇರಬಾರದು. ಇಂದು ಕೆಲವು ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳು ನ್ಯಾಯಾಲಯಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಳ್ಳುವ ತಪ್ಪು ಹೆಜ್ಜೆ ಇಡುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು. ಒಬ್ಬ ಮುಖ್ಯಮಂತ್ರಿಯಾದವರು ತಮ್ಮ ಮಂತ್ರಿಮಂಡಲದ ನೇಮಕದಲ್ಲಿ ಅರ್ಹತೆ ಇರುವವರನ್ನು ಮಾತ್ರ ನೇಮಕ ಮಾಡಿಕೊಳ್ಳುವ ಹಾಗೆ, ಒಬ್ಬ ನ್ಯಾಯಾಧೀಶರ ಅರ್ಹತೆ ಇರುವವರನ್ನು ಕೊಲಿಜಿಯಂಗೆ ನೇಮಕ ಮಾಡುತ್ತದೆ. ಆದರೆ ಇದರ ಮಧ್ಯೆ ಸರ್ಕಾರ ಅಥವಾ ರಾಜಕಾರಣಿಗಳು ಹಸ್ತಕ್ಷೇಪ ಮಾಡಬಾರದು. ಇತ್ತೀಚೆಗೆ ಕೊಲಿಜಿಯಂ ಶಿಫಾರಸ್ಸು ಮಾಡಿದ ಮೂವರು ನ್ಯಾಯಾಧೀಶರ ನೇಮಕಾತಿಯನ್ನು ವೈಯಕ್ತಿಕ ಕಾರಣದಿಂದ ತಡೆದ ಕೇಂದ್ರ ಸರ್ಕಾರದ ನಿರ್ಧಾರಕ್ಕೆ ತಮ್ಮ ವಿರೋಧ ವ್ಯಕ್ತಪಡಿಸಿದರು.

ಲೋಕಾಯುಕ್ತಕ್ಕೆ ಪರಮಾಧಿಕಾರವಿದೆ: ಲೋಕಾಯುಕ್ತಕ್ಕೆ ನಮ್ಮ ಕಾಲದಲ್ಲಿ ಇದ್ದಂತಹ ಅಧಿಕಾರ ಇಂದಿಗೂ ಇದೆ. ಆದರೆ, ಅಧಿಕಾರಿಗಳ ನೇಮಕದಲ್ಲಿ ಸರ್ಕಾರದ ಪ್ರಭಾವ ಇರುತ್ತದೆ. ನಮಗೆ ಬೇಕಾದ ಅಧಿಕಾರಿಗಳ ನೇಮಕ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಶಾಸಕಾಂಗವು ಕಾರ್ಯಾಂಗ ಮತ್ತು ನ್ಯಾಯಾಂಗದ ಮೇಲೆ ಸವಾರಿ ಮಾಡಬಾರದು. ನಾವು ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಿ, ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ಕೊಡಿಸುವ ಕೆಲಸ ಮಾಡುತ್ತಿದ್ದೆವು ಎಂದರು.

ಇಂದು ರಾಜಕೀಯ ಪಕ್ಷಗಳು ಅಭಿವೃದ್ಧಿ ಬಗ್ಗೆ ಮಾತನಾಡುತ್ತಿಲ್ಲ. ಕುತಂತ್ರದಿಂದ ಅಧಿಕಾರ ಹಿಡಿಯಲು ಬಯಸುತ್ತಿವೆ. ಚುನಾವಣಾ ಸಂದರ್ಭದಲ್ಲಿ ಧರ್ಮ ಮತ್ತು ಭಾಷೆಯಂತಹ ಭಾವನಾತ್ಮಕ ವಿಷಯಗಳನ್ನು ಬಳಸಿ, ಮತ ಕೇಳಲು ಮುಂದಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಧರ್ಮ, ಭಾಷೆ ಭಾವನಾತ್ಮಕ ವಿಚಾರ ಬಳಕೆ: ಇಂದಿನ ಸಂಘರ್ಷಕ್ಕೆ ಅತ್ಯಂತ ಅಪಾಯಕಾರಿ ವಿಷಯವೆಂದರೆ ▶ 8ನೇ ಪುಟಕ್ಕೆ



ಸಂವಾದ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಅವರೊಂದಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಇದ್ದಾರೆ.


ಇತರರಿಗೆ ಬುದ್ಧಿ ಹೇಳುವ ಮುನ್ನ ನಾನು ಶುದ್ಧವಾಗಿರಬೇಕು

"ನನಗೆ ಹಲವು ಪ್ರಶಸ್ತಿ, ನಗದು ಪುರಸ್ಕಾರಗಳು ಬಂದಿವೆ. ಎಲ್ಲಾ ಹಣವನ್ನು ಅನಾಥಾಶ್ರಮ, ಸಂಘ ಸಂಸ್ಥೆಗಳಿಗೆ ನೀಡಿದ್ದೇನೆ. ಯಾರಿಂದಲೂ ಒಂದು ರೂಪಾಯಿಯೂ ಪಡೆದಿಲ್ಲ. ಸ್ವಂತ ದುಡಿದ ಹಣದಿಂದ ಅಪಾರ್ಟ್‌ಮೆಂಟ್‌ನಲ್ಲಿ ಒಂದು ಮನೆ ಖರೀದಿ ಮಾಡಿ ಜೀವನ ನಡೆಸುತ್ತಿದ್ದೇನೆ. ನಾನು ಇನ್ನೊಬ್ಬರಿಗೆ ಬುದ್ಧಿ ಹೇಳುವಾಗ ಮೊದಲು ನಾನು ಶುದ್ಧವಿರಬೇಕು ಎಂಬುದು ನನ್ನ ನಂಬಿಕೆ.

– ಸಂತೋಷ್ ಹೆಗ್ಡೆ, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ

ಗಣಿಗಾರಿಕೆ ವರದಿ ಏನಾಯ್ತು...?

ನಾನು ನೀಡಿದ ಅಕ್ರಮ ಗಣಿಗಾರಿಕೆ ವರದಿಯಲ್ಲಿ ಮೂವರು ಮುಖ್ಯಮಂತ್ರಿಗಳು, 9 ಸಚಿವರನ್ನು ಹೆಸರಿಸಿದೆ. 700ಕ್ಕೂ ಹೆಚ್ಚು ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದರು. ಲೋಕಾಯುಕ್ತರು ಆರೋಪ ಪಟ್ಟಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಪಕ್ಷಗಳು ಹೇಗಾದರೂ ಗೆಲ್ಲಲು ಬಯಸುತ್ತವೆ, ಅದು ಹೇಗೆ ಎಂಬುದು ಮುಖ್ಯವಲ್ಲ. ಮತದಾರರೂ ಇದನ್ನು ಅನುಸರಿಸುತ್ತಾರೆ. ಒಂದೋ ಅವರು ಲಂಚ ಪಡೆಯುತ್ತಾರೆ ಅಥವಾ ಜಾತಿ ಮತ್ತು ಸಮುದಾಯದ ಆಧಾರದ ಮೇಲೆ ಮತ ಚಲಾಯಿಸುತ್ತಾರೆ ಎಂದು ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು. ಭಾರತದಲ್ಲಿ ಭ್ರಷ್ಟಾಚಾರ ಬೆಳೆಯುತ್ತಿದೆ. ಮಾನವೀಯತೆ ಕಳೆದುಕೊಳ್ಳುತ್ತಿದ್ದೇವೆ, ಭ್ರಷ್ಟಾಚಾರ ಹೋಗದ ಹೊರತು, ಮಾನವೀಯತೆ ಪಾಲಿಸದ ಹೊರತು ಸಮಾಜದ ಬದಲಾವಣೆ ತರಲು ಸಾಧ್ಯವಿಲ್ಲ. ಹೀಗಾಗಿ ನಾನು 1600 ಶಾಲೆಗಳಿಗೆ ಭೇಟಿ ನೀಡಿ, ಮಕ್ಕಳು ಮತ್ತು ಶಿಕ್ಷಕರಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಿದ್ದೇನೆ ಎಂದು ಹೇಳಿದರು.





ಮೈಸೂರು ರೈಲು ಮ್ಯೂಸಿಯಂನಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ

ಮೈಸೂರು,ಜ.24(ಆರ್‌ಕೆಬಿ)–ರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಅಂಗವಾಗಿ ನೈರುತ್ಯ ರೈಲ್ವೆಯ ಮೈಸೂರು ವಿಭಾಗವು ಮೈಸೂರು ರೈಲು ಮ್ಯೂಸಿಯಂಗೆ ಮಂಗಳವಾರ



ಹೆಣ್ಣು ಮಕ್ಕಳು ಮತ್ತು ಅವರ ಜೊತೆಗಿರುವ ಪೋಷಕರಿಗೆ ಉಚಿತ ಪ್ರವೇಶ ನೀಡುವ ಮೂಲಕ ಆಚರಿಸಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಪ್ರತಿ ವರ್ಷ ಜ.24 ರಂದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನಾಗಿ ಆಚರಿಸುತ್ತಿದೆ. ಇದರ ಅಂಗವಾಗಿ ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆಯು ನಿರ್ವಹಿಸುತ್ತಿರುವ ಲಲಿತಾ ಪ್ರೌಢಶಾಲೆಯ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೇರಿದಂತೆ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಮಹಿಳಾ ಕಲ್ಯಾಣ ಸಂಸ್ಥೆಯ ಅಧ್ಯಕ್ಷೆ ಪೂಜಾ ಅಗರ್ವಾಲ್ ಅವರು ಮ್ಯೂಸಿಯಂಗೆ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹೆಣ್ಣು ಮಗುವಿನ ಸಬಲೀಕರಣಕ್ಕಾಗಿ ನಡೆಯುತ್ತಿರುವ ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸಲು ಸಂಸ್ಥೆಯು ಬದ್ಧತೆ ಮತ್ತು ಆದ್ಯತೆ ವಹಿಸಲಿದೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಹೆಣ್ಣು ಮಗುವಿನ ಘನತೆ ಮತ್ತು ಅವಕಾಶಗಳ ಬಗ್ಗೆ ಗಮನಹರಿಸಲಾಗುವುದು. ಶಿಕ್ಷಣ, ಉತ್ತಮ ಆರೋಗ್ಯ ಸೇವೆ ಮತ್ತು ಲಿಂಗ ಸಂವೇದನೆಯನ್ನು ಸುಧಾರಿಸಲು ಸಂಸ್ಥೆಯು ಪ್ರಯತ್ನಿಸುತ್ತಿದೆ ಎಂದು ಹೇಳಿದರು.

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ

ಮೈಸೂರು ಭಾಗದಲ್ಲಿ ಮೋಡ ಕವಿದ ವಾತಾವರಣ; ತುಂತುರು ಮಳೆ

ಮೈಸೂರು,ಜ.24(ಪಿಎಂ)– ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ಮಂಗಳವಾರ ಮೈಸೂರು ನಗರದಲ್ಲಿ ಮೋಡಕವಿದ ವಾತಾ



ವರಣದೊಂದಿಗೆ ಮಧ್ಯಾಹ್ನದ ವೇಳೆಗೆ ತುಂತುರು ಮಳೆಯಾಗಿದ್ದು, ಬುಧವಾರವೂ ಇದೇ ವಾತಾವರಣ ಇರುವ ಸಾಧ್ಯತೆ ಇದೆ.

ಮೈ ನಡುಗಿಸುವ ಚಳಿ ಜೊತೆಗೆ ಮೈಸೂರು ನಗರದಲ್ಲಿ ಇಂದು ಬೆಳಗ್ಗೆಯೇ ಮೋಡ ಕವಿದ ವಾತಾವರಣ ಉಂಟಾಗಿತ್ತು. ಆಗಾಗ್ಗೆ ಮೋಡ ಚದುರಿ ಸೂರ್ಯನ ಕಿರಣ ಸೂಸಿದರೂ ಮಧ್ಯಾಹ್ನ ಮತ್ತು ಸಂಜೆ ವೇಳೆಯಲ್ಲಿ ತುಂತುರು ಮಳೆಯಾಗಿದೆ. ಬುಧವಾರವೂ ಮೋಡ ಕವಿದ ವಾತಾವರಣದೊಂದಿಗೆ ದಿನದ ಯಾವಾಗಲಾದರೂ ಕೆಲಕಾಲ ಮಳೆಯಾಗುವ ಮುನ್ಸೂಚನೆ ಇದೆ. ಭಾರೀ ಮಳೆ–ಗಾಳಿ ಆಗುವ ಯಾವುದೇ ಲಕ್ಷಣ ಇಲ್ಲ ಎನ್ನಲಾಗಿದೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಪ್ರೊ.ಗೋವಿಂದರಾಜು, ಸೋಮವಾರ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವ ಕಾರಣ ತುಂತುರು ಮಳೆಯಾಗಿದೆ. ನಾಳೆಯೂ ತುಂತುರು ಮಳೆಯಾಗುವ ಸಾಧ್ಯತೆ ಇದ್ದು, ಆದಲ್ಲಿ ಅರ್ಧ ಇಂಚಿಗಿಂತಲೂ ಕಡಿಮೆ ಮಳೆಯಾಗಲಿದೆ ಎಂದರು. ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳೂ ಸೇರಿದಂತೆ ರಾಜ್ಯದ ಬಹುತೇಕ ಭಾಗಗಳಲ್ಲಿ ಇಂದು ಮೋಡ ಕವಿದ ವಾತಾವರಣ ಇತ್ತು. ನಾಳೆ ಹಲವೆಡೆ ಮಳೆಯಾದರೂ ಆಗಬಹುದು ಎಂದರು.




ಮೈಸೂರು ತಾಲೂಕು ನಾಗವಾಲ ಗ್ರಾಪಂ ವತಿಯಿಂದ ಹುಯಿಲಾಳು ಗ್ರಾಮದಲ್ಲಿ ಗ್ರಾಪಂನಿಂದ ಕೋಟಿ ರೂ. ಹಾಗೂ ಮುಡಾದಿಂದ 1.50 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಒಳಚರಂಡಿ, ಕಾಂಕ್ರೀಟ್ ರಸ್ತೆ ಮತ್ತು ಡಾಂಬರೀಕರಣ ಕಾಮಗಾರಿಯನ್ನು ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಪರಿಶೀಲಿಸಿದರು. ಈ ವೇಳೆ ತಾಪಂ ಸದಸ್ಯ ಹೆಚ್.ಎಂ.ಮಹದೇವ, ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ, ಗ್ರಾಪಂ ಸದಸ್ಯರಾದ ಗೌರಮ್ಮ ಮಾಲೇಗೌಡ, ಮಮತಾ ಶಿವಕುಮಾರ್, ಶೃತಿ ಮಂಜು, ಶ್ರೀಧರ್, ಮಂಜು, ಕಾರ್ಯದರ್ಶಿ ಯಶವಂತ್, ಶ್ರೀಧರ ಮಿಲ್, ನಾಗರಾಜು, ರಾಮಣ್ಣ, ಚಿಕ್ಕ ಯಜಮಾನ್ ಶೇಖರ್ ಇದ್ದರು.



ಮೈಸೂರಿನ ಸರ್ ಎಂ ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 126ನೇ ಜಯಂತಿ ಆಚರಿಸಲಾಯಿತು ಸಂಘದ ಅಧ್ಯಕ್ಷ ಜಯನಗರ ಮಹೇಶ್, ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಪ್ರಕಾಶ್, ನಿರ್ದೇಶಕರಾದ ಚಂದ್ರೇಗೌಡ, ಭೋಗಾದಿ ಕುಮಾರ್, ಸುರೇಶ್, ಶಿವರಾಜು, ರಾಜೇಶ, ಉಪಸ್ಥಿತರಿದ್ದರು.

ನಿಧನ

ಎ. ಹಾರೂನ್



ಮೈಸೂರು, ಜ.24–ಮೈಸೂರಿನ ಹಿರಿಯ ಫೋಟೋಗ್ರಾಫರ್ ಹಾಗೂ ಮೈಸೂರು ಶಾಂತಿನಗರ ನಿವಾಸಿ ಎ.ಹಾರೂನ್ (65) ಮಂಗಳವಾರ ಮಧ್ಯಾಹ್ನ ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು.

ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಇಂದು ಮಗ್ರಿಬ್ ಪ್ರಾರ್ಥನೆಯ ನಂತರ ದರ್ಗಾಹಿ ಮಸೀದಿ, ಸಾಡೇ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು ಇಲ್ಲಿ ನಮಾಜ್‌–ಎ–ಜನಾಜ, ಬಳಿಕ ಮೈಸೂರಿನ ಟಿಪ್ಪು ಸರ್ಕಲ್ ಬಳಿಯಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿತು. ಮಾಹಿತಿಗೆ (ಮೊಬೈಲ್ ನಂ.9845345903)

ಸಂತಾಪ ಸೂಚನೆ: ಜಮೀಲ್ ಅಹಮದ್ ಅಶ್ರಫಿ, ಮೆ॥ ಗೋಲ್ಡನ್ ಪ್ಯಾಲೇಸ್ ಕನ್ವೆನ್ಷನ್ ಸೆಂಟರ್, ಬನ್ನಿಮಂಟಪ, ಮೈಸೂರು, ಮೈಸೂರು ಫೋಟೋಗ್ರಾಫರ್ಸ್ & ವೀಡಿಯೋಗ್ರಾಫರ್ಸ್ ಅಸೋಸಿಯೇಷನ್ ಪದಾಧಿಕಾರಿಗಳು, ಮಿರ್ಜಾ ತಬ್ರೇಜ್ ಬೇಗ್, ಮಿರ್ಜಾ ವೀಡಿಯೋ & ಫೋಟೋ, ರಾಜೀವ್ ನಗರ, ಹಾರೂನ್ ರಷೀದ್, ಸಮಾಜ ಸೇವಕರು, ಬನ್ನಿಮಂಟಪ, ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ವಕ್ತಾರರು, ಡಿಸಿಸಿ ಅಲ್ಪಸಂಖ್ಯಾತರ ವಿಭಾಗ, ಮಜೀದ್ ಅಹಮದ್, ಮೆ॥ ಸಾಗರ್ ಸಿಮೆಂಟ್, & ಸದಸ್ಯರು ಡಿಸಿಸಿಐ ಮೈಸೂರು, ಬಂಡೀಪಾಳ್ಯ ಆಸಿಫ್ ಸಾಹೆಬ್, ಅಫ್ರೋಜ್ ಪಾಷ @ ಅಪ್ಪು ಸಾಹೆಬ್, ಕಾರ್ಯದರ್ಶಿ, ಹಜ್ರತ್ ಟಿಪ್ಪು ಸುಲ್ತಾನ್ ಉರುಸ್ & ವೆಲ್‌ಫೇರ್ ಕಮಿಟಿ, ಟಿಪ್ಪು ಹಾಲ್, ಮೀನಾ ಬಜಾರ್, ಕ್ವಾಜಾ ಮೊಹಮ್ಮದ್ ಮುಷೀರ್ ಚಿಸ್ತಿ ಸಾಹೆಬ್, ಅಧ್ಯಕ್ಷರು, ಚಿಸ್ತಿಯ ಫೌಂಡೇಷನ್ ಗ್ರೂಪ್, ಮೈಸೂರು, ರದೀವುಲ್ಲಾ ಖಾನ್, ಸದಸ್ಯರು, ಡಿಸಿಸಿ ಅವರು ಹಾರೂನ್ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಪಂಜಿನ ಕವಾಯತು ಮೈದಾನದಲ್ಲಿ ಗಣರಾಜ್ಯೋತ್ಸವ ತಾಲೀಮು





ಮೈಸೂರು,ಜ.24(ಆರ್‌ಕೆ)–ಜನವರಿ 26ರಂದು ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ಗೆ ಜಿಲ್ಲಾಡಳಿತ ಸಿದ್ಧತೆ ನಡೆಸಿದೆ. ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಇಂದು ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದಲ್ಲಿ ಪೊಲೀಸ್ ತುಕಡಿಗಳ ತಾಲೀಮು ನಡೆಯಿತು. ಜ.22ರಿಂದ ಆರಂಭವಾದ ತಾಲೀಮಿನ ಅಂತಿಮ ಪ್ರದರ್ಶನ ಮಂಗಳವಾರ ಯಶಸ್ವಿಯಾಗಿ ನಡೆಯಿತು. ಪೊಲೀಸ್ ಬ್ಯಾಂಡ್, ನಗರ ಮತ್ತು ಸಿವಿಲ್ ಪೊಲೀಸ್, ಸಿಎಆರ್, ಡಿಎಆರ್, ಕೆಎಸ್‌ಆರ್‌ಪಿ, ಮೌಂಟೆಡ್ ಪೊಲೀಸ್, ಮಹಿಳಾ ಠಾಣೆ, ಸಂಚಾರ ಹೋಂಗಾರ್ಡ್, ಅಬಕಾರಿ, ಅಗ್ನಿ ಶಾಮಕ ಠಾಣೆ ತುಕಡಿಗಳು, ಎನ್‌ಸಿಸಿ ಸೇರಿದಂತೆ ಹಲವು ಘಟಕಗಳ 25 ತುಕಡಿಗಳು ತಾಲೀಮಿನಲ್ಲಿ ಪಾಲ್ಗೊಂಡಿದ್ದವು. ಪೊಲೀಸ್ ಪಬ್ಲಿಕ್ ಶಾಲೆ, ಅಮೃತ ವಿದ್ಯಾಲಯ, ಸೇಂಟ್ ಥಾಮಸ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಜವಾಹರ ನವೋದಯ ವಿದ್ಯಾಲಯ ಸೇರಿದಂತೆ ಮೈಸೂರಿನ ಹಲವು ಶಾಲಾ ವಿದ್ಯಾರ್ಥಿಗಳು ಗಣರಾಜ್ಯೋತ್ಸವ ಪರೇಡ್ ತಾಲೀಮಿನಲ್ಲಿ ಪಾಲ್ಗೊಂಡಿದ್ದರು.

ಸಿಎಆರ್ ಡಿಸಿಪಿ ಎ.ಮಾರುತಿ, ಮೌಂಟೆಡ್ ಪೊಲೀಸ್ ಕಮಾಂಡೆಂಟ್ ಶಿವರಾಜ್ ಸಮ್ಮುಖದಲ್ಲಿ ನಡೆದ ತಾಲೀಮಿನಲ್ಲಿ ಮೌಂಟೆಡ್ ಪೊಲೀಸ್ ಡಿವೈಎಸ್ಪಿ ಕೆ.ಎನ್.ಸುರೇಶ್ ಪರೇಡ್ ಕಮಾಂಡ್ ಮಾಡಿದರೆ, ಇನ್ಸ್‌ಪೆಕ್ಟರ್ ಎಸ್.ಟಿ.ಸಾಸನೂರ ಅವರು ಸಾಥ್ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಗುರುವಾರ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪರೇಡ್ ವಂದನೆ ಸ್ವೀಕರಿಸುವರು.

ಕೆ.ಆರ್.ಕ್ಷೇತ್ರದ ಬೀದಿಬದಿ ವ್ಯಾಪಾರಿಗಳಿಗೆ ಸರ್ಕಾರಿ ಸೌಲಭ್ಯ ತಲುಪಿಸಲು ಹೆಸರು ನೋಂದಣಿ

ಶಾಸಕ ಎಸ್.ಎ.ರಾಮದಾಸರ ಮತ್ತೊಂದು ಸಮಾಜಮುಖಿ ಕಾರ್ಯ

ಮೈಸೂರು, ಜ.24(ಎಸ್‌ಬಿಡಿ)– ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬೀದಿಬದಿ ವ್ಯಾಪಾರಿಗಳಿಗೆ ಸರ್ಕಾರಿ ಸೌಲಭ್ಯಗಳನ್ನು ಸಮರ್ಪಕವಾಗಿ ತಲುಪಿಸುವ ಉದ್ದೇಶದಿಂದ ಹೆಸರು ನೋಂದಣಿ ಕಾರ್ಯಕ್ಕೆ ಶಾಸಕ ಎಸ್.ಎ.ರಾಮದಾಸ್ ಮಂಗಳವಾರ ಚಾಲನೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆ, ದೀನದಯಾಳ್ ಅಂತ್ಯೋದಯ ಹಾಗೂ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯಡಿ ಸೇಠ್ ಮೋಹನ್ ದಾಸ್ ತುಳಸಿದಾಸ್ ಆಸ್ಪತ್ರೆ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕ್ಷೇತ್ರದ 49, 50, 51, 52, 54, 55 ಮತ್ತು 61ನೇ ವಾರ್ಡ್ ವ್ಯಾಪ್ತಿಯ ಬೀದಿಬದಿ ವ್ಯಾಪಾರಿಗಳ ನೋಂದಣಿ ಆರಂಭಿಸಲಾಯಿತು.

ಈ ವೇಳೆ ಶಾಸಕ ರಾಮದಾಸ್ ಮಾತನಾಡಿ, ಬೀದಿಬದಿ, ತಳ್ಳುಗಾಡಿಗಳಲ್ಲಿ ವ್ಯಾಪಾರ ಮಾಡುವ ಸಣ್ಣ ವ್ಯಾಪಾರಿಗಳನ್ನು ಗುರುತಿಸಿ, ಕೇಂದ್ರ ಸರ್ಕಾರದ ಸವಲತ್ತುಗಳನ್ನು ತಲುಪಿಸುವ ಉದ್ದೇಶದಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ.



ಮೀಟರ್ ಬಡ್ಡಿಗೆ ಸಾಲ ಪಡೆದು ತೀವ್ರ ಸಂಕಷ್ಟಕ್ಕೆ ತುತ್ತಾಗುವುದನ್ನು ತಪ್ಪಿಸಲು ಈ ಕಾರ್ಯಕ್ರಮ ಸಹಕಾರಿಯಾಗಿದೆ. ವ್ಯಾಪಾರದಲ್ಲಿ ಎದುರಿಸಬೇಕಾದ ಸಮಸ್ಯೆಗಳಿಗೂ ಇದರಿಂದ ಪರಿಹಾರ ಸಿಗಲಿದೆ ಎಂದರು.

ಸಣ್ಣ ವ್ಯಾಪಾರಿಗಳನ್ನು ಈಗಾಗಲೇ ಗುರುತಿಸಿ, ಅವರ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದ್ದು ಇನ್ನೂ ಮೂರ್‍ನಾಲ್ಕು ದಿನಗಳಲ್ಲಿ ಪೂರ್ಣಗೊಳ್ಳಲಿದೆ. ನಂತರ ಸರ್ಕಾರದಿಂದ 'ಗುರುತಿನ ಕಾರ್ಡ್' ನೀಡಲಾಗುತ್ತದೆ. ಕಷ್ಟಪಟ್ಟು ದುಡಿದು ಸಂಪಾದನೆ ಮಾಡಿದ್ದು ಸಾರ್ಥಕವಾಗಬೇಕು. ಐಡಿ ಕಾರ್ಡ್ ಜೊತೆಗೆ ಇ–ಶ್ರಮ್ ಕಾರ್ಡ್ ಅನ್ನೂ ವ್ಯಾಪಾರಿಗಳಿಗೆ ಕೊಡಿಸಲಾಗುವುದು. ಅನಾರೋಗ್ಯಕ್ಕೆ ತುತ್ತಾದರೆ 2 ಲಕ್ಷ ರೂ. ಚಿಕಿತ್ಸಾ ವೆಚ್ಚದವರೆಗೂ ಉಚಿತವಾಗಿರುತ್ತದೆ ಎಂದರು.

ಇ–ಶ್ರಮ್ ಕಾರ್ಡ್ ಉಳ್ಳವರಿಗೆ ಸಿಗುವ ಸರ್ಕಾರದ ಸವಲತ್ತುಗಳ ಬಗ್ಗೆಯೂ ಮಾಹಿತಿ ನೀಡಲಾಗುವುದು. ಯಾರೂ ಮೀಟರ್ ಬಡ್ಡಿಗೆ ಸಾಲ ಪಡೆಯಬಾರದೆಂದೇ ಇ–ಶ್ರಮ್ ಕಾರ್ಡ್ ಇದ್ದವರಿಗೆ ಪ್ರಧಾನ ಮಂತ್ರಿಗಳ ಕಡೆಯಿಂದ ಮೊದಲ ಬಾರಿಗೆ 10 ಸಾವಿರ ರೂ., ನಂತರ 20, 40, 80 ಸಾವಿರದವರೆಗೂ ಬಡ್ಡಿ ರಹಿತ ಸಾಲ ಸೌಲಭ್ಯ ದೊರೆಯಲಿದೆ. ಬಾಡಿಗೆ ಮನೆಯಲ್ಲಿರುವವರಿಗೆ ಸ್ವಂತ ಮನೆ ಕಲ್ಪಿಸುವ ಗುರಿಯೊಂದಿಗೆ ಕ್ರಮ ಕೈಗೊಳ್ಳಲಾಗುವುದು. ಫೆಬ್ರವರಿಯೊಳಗೆ ಇ–ಶ್ರಮ್ ಕಾರ್ಡ್ ವಿತರಿಸಿ, 15 ದಿನಗಳಲ್ಲಿ ಅವರ ಖಾತೆಗೆ 10 ಸಾವಿರ ರೂ. ಸಾಲ ಸೌಲಭ್ಯ ಸಿಗುವಂತೆ ಕಾರ್ಯಕ್ರಮ ರೂಪಿಸಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪಾಲಿಕೆ ಎಡಿಸಿ ರೂಪಾ, ಪಾಲಿಕೆ 1ನೇ ವಲಯಾಧಿಕಾರಿ ಮಂಜುನಾಥ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.



ಸುತ್ತೂರು ಜಾತ್ರೆ ವೇಳೆ ಏರ್ಪಡಿಸಿದ್ದ ಕುಸ್ತಿ ಪಂದ್ಯಾವಳಿಯಲ್ಲಿ ಪೈಲ್ವಾನ್ ಮಹದೇವ ಸ್ವಾಮಿ (ಅಪ್ಪು) ಬಹುಮಾನ ಗಳಿಸಿದ್ದಾನೆ. ಈತ ತುಮ್ಮನೇರಳೆ ಗ್ರಾಮದ ಪೈ.ಮಹಾಲಿಂಗರ ಪುತ್ರನಾಗಿದ್ದು, ಮೈಸೂರು–ಬನ್ನೂರು ರಸ್ತೆಯ ವಿದ್ಯಾ ವಿಕಾಸ ಶಾಲೆಯಲ್ಲಿ 2ನೇ ತರಗತಿ ವಿದ್ಯಾರ್ಥಿ.

ಶಿವಕುಮಾರ್‌ಗೆ ಪಿಹೆಚ್.ಡಿ



ಮೈಸೂರು: ಡಾ.ವಿಜಯಕುಮಾರಿ ಎಸ್.ಕರಿಕಲ್ ಅವರ ಮಾರ್ಗದರ್ಶನದಲ್ಲಿ ಎಸ್.ಶಿವಕುಮಾರ್ ಜಾನಪದ ವಿಷಯದಲ್ಲಿ ಸಂಶೋಧಿಸಿ ಮಂಡಿಸಿದ ಮಹಾಪ್ರಬಂಧಕ್ಕೆ ಮೈಸೂರು ವಿವಿ ಪಿಎಚ್.ಡಿ ಪದವಿ ನೀಡಿದೆ.

ಆಯ–ವ್ಯಯ: ಪೂರ್ವಭಾವಿ ಸಭೆ

ಮೈಸೂರು,ಜ.24–ಬೋಗಾದಿ ಪಟ್ಟಣ ಪಂಚಾಯಿತಿಯ 2023–24ನೇ ಸಾಲಿನ ಆಯ–ವ್ಯಯವನ್ನು ಸಿದ್ಧಪಡಿಸುವ ಸಂಬಂಧ ಪಪಂ ಆಡಳಿತಾಧಿಕಾರಿ ಹಾಗೂ ತಹಶೀಲ್ದಾರ್ ಗಿರೀಶ್ ಅಧ್ಯಕ್ಷತೆಯಲ್ಲಿ ಜ.30ರಂದು ಸಂಜೆ 4 ಗಂಟೆಗೆ ಪಪಂ ಕಚೇರಿಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ. ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮಾಜಿ ನಾಮನಿರ್ದೇಶಿತ ಸದಸ್ಯರು, ವಿವಿಧ ಸಂಘ ಸಂಸ್ಥೆ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಸಭೆಗೆ ಆಗಮಿಸಿ 2023–24ನೇ ಸಾಲಿನ ಆಯ–ವ್ಯಯಕ್ಕೆ ಸಂಬಂಧಿಸಿದಂತೆ ತಮ್ಮ ಸಲಹೆ–ಸೂಚನೆಗಳನ್ನು ನೀಡುವಂತೆ ಪಪಂ ಮುಖ್ಯಾಧಿಕಾರಿ ಕೋರಿದ್ದಾರೆ.

ಕೌನ್ಸಿಲಿಂಗ್‌ಗೆ ಮುಂದೂಡಿಕೆ

ಮೈಸೂರು,ಜ.24–ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ 2022–23ನೇ ಸಾಲಿನ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆ ವರ್ಗಾವಣೆ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಕಾರಣಾಂತರಗಳಿಂದ ಕೌನ್ಸಿಲಿಂಗ್ ಪ್ರಕ್ರಿಯೆ ತಾತ್ಕಾಲಿಕವಾಗಿ ಮುಂದೂಡಲಾಗಿದೆ

ಸೂರ್ಯನನ್ನು 42 ನಿಮಿಷ ಕಣ್ಣು ಮಿಟುಕಿಸದೆ ನೇರನೇರ ದಿಟ್ಟಿಸಿದ ಬದರಿ ನಾರಾಯಣ್ ಸಾಹಸ

ಮೈಸೂರು,ಜ.24(ಆರ್‌ಕೆಬಿ)–ಉರಿಯುವ ಬಿಸಿಲಿನಲ್ಲಿ ಮಧ್ಯಾಹ್ನ 42 ನಿಮಿಷಗಳ ಕಾಲ ಸೂರ್ಯನನ್ನು ನೇರವಾಗಿ ಕಣ್ಣು ಮಿಟುಕಿಸದೆ ಪ್ರಾಣಾಯಾಮದ ಜೊತೆಗೆ ನೋಡುವ ವಿನೂತನ ಪ್ರಯತ್ನವನ್ನು ಮೈಸೂರಿನ ಬದರಿ ನಾರಾಯಣ ಅಯ್ಯಂಗಾರ್ ಮಂಗಳವಾರ ಮೈಸೂರಿನಲ್ಲಿ ನಡೆಸುವ ಮೂಲಕ ಗಮನ ಸೆಳೆದರು.

ತಮ್ಮ ತಾಯಿ ಚಕ್ರವರ್ತಿ ರಾಜ ಅಯ್ಯಂಗಾರ್ ಭಾರತಿ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಪುತ್ರ ಬದರಿ ನಾರಾಯಣ್ ಸೂರ್ಯನನ್ನು ನೋಡುವ ದಾಖಲೆಯನ್ನು ತಮ್ಮ ತಾಯಿಗೆ ಸಮರ್ಪಿಸುವುದು ಅವರ ಉದ್ದೇಶವಾಗಿದೆ. ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಧ್ಯಾಹ್ನ 12 ಗಂಟೆಯಿಂದ 42 ನಿಮಿಷಗಳ ಕಾಲ ಕಣ್ಣು ಮಿಟುಕಿಸದೆ ನೆಟ್ಟ ದೃಷ್ಟಿಯಿಂದ ವೀಕ್ಷಿಸಿದರು.


ಅವರ ಪ್ರಕಾರ ಇದು ಸೂರ್ಯ ತಾಟಕ ಕ್ರಿಯೆ. ಇದಕ್ಕೆ ಪ್ರಾಣಾಯಾಮ ಅಳವಡಿಸಿಕೊಂಡಿದ್ದರು. ಈ



ಸೂರ್ಯ ತಾಟಕ ಕ್ರಿಯೆಯಿಂದ ನಮ್ಮ ಪೀನಿಯಲ್ ಗ್ಲಾಂಡ್ ಅಥವಾ ಮೂರನೇ ಕಣ್ಣೆಂದೇ ಕರೆಯಲ್ಪಡುವ ಮೆದುಳಿನ ಒಂದು ಭಾಗ ಸಕ್ರಿಯಗೊಳ್ಳುತ್ತದೆ. ಜೊತೆಗೆ ಮಾನಸಿಕ, ದೈಹಿಕ, ಆಧ್ಯಾತ್ಮಿಕ ಜೀವನಕ್ಕೆ ಬಹಳಷ್ಟು ಉಪಯೋಗವಿದೆ. ಸೂರ್ಯಕ್ರಿಯೆ ಮೆಲಟೋನಿನ್ ಹಾಗೂ ಸೆರಾಟೋನಿನ್ ದ್ರವಗಳ ಉತ್ಪಾದನೆಗೆ ಸಹಾಯವಾಗುತ್ತದೆ. ಮನಸ್ಸಿನ ಸ್ಥಿತಿಯನ್ನು ಉಲ್ಲಾಸಕರವಾಗಿ ಇಡಲು ನೆರವಾಗುತ್ತದೆ. ನಮ್ಮ ದೇಹಕ್ಕೆ ಸೂರ್ಯ ಒಬ್ಬನೇ ವಿಟಮಿನ್ ಡಿ ಪೂರೈಕೆ ಮಾಡುವ ಶಕ್ತಿ ಉಳ್ಳವನು ಎಂಬುದು ಅವರ ವಾದ.

ಸೂರ್ಯ ಕಿರಣ ಕ್ರಿಯೆಯಿಂದ ದುಷ್ಪರಿಣಾಮವೂ ಇದೆ. ಸೂರ್ಯನನ್ನು ಯಾರೂ ನೇರವಾಗಿ ನೋಡಬಾರದು. ಸೂರ್ಯನ ತೀಕ್ಷ್ಣ ಕಿರಣ ಕಣ್ಣಿಗೆ ಅಪಾಯಕಾರಿ. ಸೂರ್ಯನನ್ನು ನೋಡಲು ಸೂಕ್ತ ಸಮಯ ಸೂರ್ಯೋದಯದ ನಂತರ ಮತ್ತು ಸೂರ್ಯಾಸ್ತದ ನಂತರದ ಅರ್ಧ ಗಂಟೆ. ಇದಕ್ಕೆ ಕಾರಣ ಸೂರ್ಯನಲ್ಲಿ ಬೆರೆತಿರುವ ಅಲ್ಟ್ರಾ ವಯೊಲೆಟ್ ಕಿರಣಗಳು ಎನ್ನುತ್ತಾರೆ ಬದರಿ ನಾರಾಯಣ್. ಈ ಸಂದರ್ಭದಲ್ಲಿ ಯೋಗ ಗುರು ರಾಘವೇಂದ್ರ ಪೈ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.1.2023 ಬುಧವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ,
ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಯೋಗಶಿಕ್ಷಕ ಡಿ.ಶ್ರೀಹರಿ, 6.40 ಅರಿ ವಿನ ಶಿಖರ, ಗಾಯನ–ಸದಾಶಿವ ಪಾಟೀಲ್, ಜಿ.ಪುಷ್ಪಲತಾ, ವ್ಯಾಖ್ಯಾನ– ಡಾ.ಜಿ.ಆರ್.ತಿಪ್ಪೇಸ್ವಾಮಿ, 10.00 ಹಿಂದೂಸ್ಥಾನಿ ಸಂಗೀತ–ಜಯಶ್ರೀ ಪಟ್ನೇಕರ್–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ–"ಆನ್ ಲೈನ್ ಅಜ್ಜಿ", ರಚನೆ–ಇ.ಆರ್.ರಾಮ ಚಂದ್ರನ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಸಿ.ಎಸ್.ಲಕ್ಷ್ಮಿ, 3.00 ಲಯ ಸಂಭ್ರಮ–ಮೃದಂಗ ತರಂಗದಲ್ಲಿ ಲಯ ವಿನ್ಯಾಸ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರ ಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ–ಭಾಗವಹಿಸುವವರು ವಿಶೇಷಚೇತನ ಮಕ್ಕಳ ಶಾಲೆ ನಡೆಸುತ್ತಿರುವ ಧನ್ಯಾ ಉತ್ತಪ್ಪ, 7.00 ಗಣರಾಜ್ಯೋತ್ಸವದ ಮುನ್ನಾ ದಿನದ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ರಾಷ್ಟ್ರವನ್ನುದ್ದೇಶಿಸಿ ಮಾಡಲಿರುವ ಪ್ರಸಾರ ಭಾಷಣದ ನೇರ ಪ್ರಸಾರ, 7.45 ಕ್ಷೇಮ ಕೇಂದ್ರಗಳು–ನೇರ ಫೋನ್‌ಇನ್ ಕಾರ್ಯಕ್ರಮ, 9.30 ಗಣರಾಜ್ಯೋತ್ಸವದ ಮುನ್ನಾ ದಿನದ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ರಾಷ್ಟ್ರವನ್ನುದ್ದೇಶಿಸಿ ಮಾಡಲಿರುವ ಪ್ರಸಾರ ಭಾಷಣದ ಕನ್ನಡ ಅನುವಾದ, 10.00 ಸರ್ವ ಭಾಷಾ ಕವಿ ಸಮ್ಮೇಳನ–ಮೈಸೂರಿನಿಂದ ಭಾಗವಹಿಸುವ ಅನುವಾದ ಕವಿಗಳು ಡಾ.ವಿ.ಸೌಭಾಗ್ಯಲಕ್ಷ್ಮಿ, ಡಾ.ಹೆಚ್.ಎಂ.ಕುಮಾರಸ್ವಾಮಿ, 10.30 ಸವಿನೆನಪು

■ **ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್, ರೋಟರಿ ಮೈಸೂರು:** ಬೃಹತ್ ರಕ್ತದಾನ ಶಿಬಿರ ಮತ್ತು ಉಚಿತ ಆರೋಗ್ಯ ತಪಾಸಣೆ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಹೆಚ್.ರಾಜಶೇಖರ್, ಉದ್ಘಾಟನೆ: ಯುವರಾಜ ಕಾಲೇಜು ಪ್ರಾಂಶುಪಾಲ ಡಾ.ಹೆಚ್.ಸಿ.ದೇವರಾಜೇಗೌಡ, ಮುಖ್ಯ ಅತಿಥಿಗಳು: ರೋ. ಎಸ್.ವಾಸುದೇವನ್, ಮಹಾರಾಜ ಕಾಲೇಜು ಪ್ರಾಂಶುಪಾಲ ಪ್ರೊ.ಎನ್.ಶ್ರೀಧರ್, ಮೈಸೂರು ವಿವಿ ಸಂಜೆ ಕಾಲೇಜು ಪ್ರಾಂಶುಪಾಲರಾದ ಪ್ರೊ.ಬಿ.ಎನ್.ಯಶೋಧ, ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜೇಗೌಡ, ಡಾ.ಎಂ.ಬಿ.ಸುರೇಶ್, ಸ್ಥಳ: ಅಮೃತ ಮಹೋತ್ಸವ ಸಭಾಂಗಣ, ಯುವರಾಜ ಕಾಲೇಜು, ಬೆಳಗ್ಗೆ 9ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಹಣಕಾಸು ಹೇಳಿಕೆ ವಿಶ್ಲೇಷಣೆ ಬಗ್ಗೆ ಸಿಬ್ಬಂದಿ ಅಭಿವೃದ್ಧಿ ಕುರಿತು ಕಾರ್ಯಕ್ರಮ, ಉದ್ಘಾಟನೆ: ಡಾ.ವಿ.ರಾಜೇಶ್‌ಕುಮಾರ್, ಮುಖ್ಯ ಅತಿಥಿಗಳು: ಪ್ರೊ.ಜಗದೀಶ, ಉಪಸ್ಥಿತರು: ಕರಾಮುವಿ ಕುಲಸಚಿವ ಡಾ.ಮೂರ್ತಿ, ಕರಾಮುವಿವಿ ಡೀನ್ ಡಾ.ಕಾಂಬ್ಳೆ ಅಶೋಕ್, ಅಧ್ಯಕ್ಷತೆ: ಕರಾಮುವಿ ಕುಲಪತಿ ಡಾ.ಶರಣಪ್ಪ ವಿ.ಹಲಸೆ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿ, ಬೆಳಗ್ಗೆ 9.30ಕ್ಕೆ.

■ **ಭಾರತೀಯ ವಿದ್ಯಾರ್ಥಿ ಸಂಘ :** ಸಂವಿಧಾನ ದಿನಾಚರಣೆ ಅಂಗವಾಗಿ ವಿಚಾರ ಸಂಕಿರಣ, ಉದ್ಘಾಟನೆ: ನಿವೃತ್ತ ಮುಖ್ಯ ಕಾರ್ಯದರ್ಶಿ ರತ್ನಪ್ರಭ, ಮುಖ್ಯ ಅತಿಥಿಗಳು: ಸಿ.ಜಿ.ಶ್ರೀನಿವಾಸ್, ಟಿ.ಸಿ.ವರದೇಗೌಡ, ಮಂಜುನಾಥ್, ಹಂಸವೇಣಿ, ಪ್ರಾಸ್ತಾವಿಕ ನುಡಿ: ಡಾ.ಶಿವಕುಮಾರ್, ಅಧ್ಯಕ್ಷತೆ: ಹೂವಿನ ಸಿದ್ದು, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ರಾಷ್ಟ್ರೀಯ ಮತದಾರರ ದಿನಾಚರಣೆ ಹಾಗೂ ವಿಶೇಷ ಉಪನ್ಯಾಸ, ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಪಾಲಿಕೆ ಹೆಚ್ಚುವರಿ ಆಯುಕ್ತೆ ಎಂ.ಜೆ.ರೂಪ, ಅಧ್ಯಕ್ಷತೆ: ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಮುಖ್ಯ ಅತಿಥಿಗಳು: ಸಾಹಿತಿ ಮಲ್ಕುಂಡಿ ಮಹದೇವಸ್ವಾಮಿ, ಕಾಲೇಜು ಪ್ರಾಂಶುಪಾಲರಾದ ಡಾ.ಎಂ.ಶಾರದ, ಡಾ.ಜಿ.ಪ್ರಸಾದಮೂರ್ತಿ, ಹೆಚ್.ಎ.ಪೂರ್ಣಿಮ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕದಂಬ ರಂಗ ವೇದಿಕೆ, ರೂಪ ಪ್ರಕಾಶನ:** ರಂಗ ಚಿಂತಕ, ಸಾಹಿತಿ ಡಾ.ಹೆಚ್.ಎ.ಪಾರ್ಶ್ವನಾಥ್ ಅವರ ಧೀಮಂತರು ಕೃತಿ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಬಿಡುಗಡೆ: ಹಿರಿಯ ಸಾಹಿತಿ ಡಾ.ಸಿಪಿಕೆ, ಕೃತಿ ಕುರಿತು ಮಾತನಾಡುವವರು: ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ್, ಮುಖ್ಯ ಅತಿಥಿಗಳು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ. ವಿಜಯಕುಮಾರಿ ಎಸ್. ಕರಿಕಲ್, ಸಾಹಿತಿ ಡಾ.ತಿಪ್ಪೇಸ್ವಾಮಿ, ಪ್ರಕಾಶಕ ಡಿ.ಎನ್. ಲೋಕಪ್ಪ, ಸ್ಥಳ: ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಕರ್ನಾಟಕ ರಾಜ್ಯ ವಾಲಿಬಾಲ್ ಸಂಸ್ಥೆ :** ರಾಜ್ಯ ಮಟ್ಟದ ಹೊನಲು ಬೆಳಕಿನ ಅಂತರ ಜಿಲ್ಲಾ ವಾಲಿಬಾಲ್ ಪಂದ್ಯಾವಳಿ, ಉದ್ಘಾಟನೆ : ಮೇಯರ್ ಶಿವಕುಮಾರ್, ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಮುಡಾ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಸ್ಥಳ: ಸ್ಪೋರ್ಟ್ಸ್ ಪೆವಿಲಿಯನ್ ಹಾಕಿ ಮೈದಾನ, ಮೈಸೂರು ವಿವಿ, ಸಂಜೆ 5ಕ್ಕೆ

■ **ಮಧುರ ಜ್ಯೋತಿ ಕಲಾಸಂಘ :** ಸಾಂಸ್ಕೃತಿಕ ಉತ್ಸವ ಮತ್ತು ರಂಗ ವೈಭವ, ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಡಾ. ಕೆ. ರಘುರಾಂ ವಾಜಪೇಯಿ, ಮಡ್ಡೀಕೆರೆ ಗೋಪಾಲ್, ವೈ.ಡಿ. ರಾಜಣ್ಣ, ಚಂದ್ರಶೇಖರ್, ಆರ್.ಸಿ. ರಾಜಲಕ್ಷ್ಮೀ, ಆರ್. ಕೃಷ್ಣಮೂರ್ತಿ, ಬಿ.ಎಸ್. ಜಯರಾಮ್‌ರಾಜ್, ಕೆ.ಆರ್. ರಾಘವೇಂದ್ರ ರತ್ನಾಕರ್, ಶ್ರೀಮತಿ ಸೌಭಾಗ್ಯ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ, ಮೈಸೂರು :** ಶ್ರುತಿಮಂಜರಿ ರಜತ ಸಂಭ್ರಮ, 25ನೇ ವಾರ್ಷಿಕ ಸಂಗೀತೋತ್ಸವ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ಪ್ರವೀಣ್ ಗೋಡ್ಖಿಂಡಿ ಮತ್ತು ಸಂಗಡಿಗರಿಂದ ಬಾನ್ಸುರಿ ವಾದನ, ಸ್ಥಳ:ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಉಪಸ್ಥಿತರು : ಕವಿ ಕೋಟಿಗಾನಹಳ್ಳಿ ರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ನಿರಂತರದ ಪ್ರಸಾದ್ ಕುಂದೂರು, ಧಾರವಾಡದ ಗೊಂಬೆಮನೆ ತಂಡದಿಂದ ಶಾಂತಕವಿಗಳ ವಿಶ್ರಾಂತಿ ನಾಟಕ ಪ್ರದರ್ಶನ, ರಚನೆ ಮತ್ತು ನಿರ್ದೇಶನ : ಪ್ರಕಾಶ್ ಗರುಡ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಫೆ.14ಕ್ಕೆ ಸವಿತಾ ಮಹರ್ಷಿ ಜಯಂತಿ ಆಚರಣೆ



ಮೈಸೂರು, ಜ.24– ಸರ್ಕಾರದ ಆದೇಶದಂತೆ ಜನವರಿ 28ಕ್ಕೆ ನಿಗದಿಯಾಗಿದ್ದ ಸವಿತಾ ಮಹರ್ಷಿ ಜಯಂತಿ ಆಚರಣೆಯನ್ನು, ಸಿದ್ಧತೆಗೆ ಸಮಯಾವಕಾಶದ ಕೊರತೆ ಇರುವುದರಿಂದ ಸಮುದಾಯದವರ ಮನವಿ ಮೇರೆಗೆ ಫೆ.14ಕ್ಕೆ ಜಿಲ್ಲಾಡಳಿತದ ವತಿಯಿಂದ ಕಿರುರಂಗಮಂದಿರದಲ್ಲಿ ಆಚರಿಸಲಾಗುವುದು ಎಂದು ಎಡಿಸಿ ಆರ್.ಲೋಕನಾಥ್ ತಿಳಿಸಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಸವಿತಾ ಮಹರ್ಷಿ ಜಯಂತಿ ಆಚರಣೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಂದು ಬೆಳಗ್ಗೆ 11 ಗಂಟೆಗೆ ವೇದಿಕೆ ಕಾರ್ಯಕ್ರಮ ಉದ್ಘಾಟನೆ ಮಾಡಲಾಗುವುದು, ಫೆಬ್ರವರಿಯಲ್ಲಿ ನೀತಿ ಸಂಹಿತೆ ಜಾರಿಯಾದರೆ ಆಚರಣೆಗೆ ಅವಕಾಶವಾಗುವುದಿಲ್ಲ ಆದ್ದರಿಂದ ಬಹಳ ಅರ್ಥಪೂರ್ಣವಾಗಿ ಜಯಂತಿಯನ್ನು ಆಚರಣೆ ಮಾಡೋಣ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಮಾತನಾಡಿ, ಆಹ್ವಾನ ಪತ್ರಿಕೆಯನ್ನು ಜಿಲ್ಲಾಡಳಿತದ ಶಿಷ್ಟಾಚಾರದನ್ವಯ ಮುದ್ರಿಸಿ ಹಂಚಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗಾಯನ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು. ಸಭೆಯಲ್ಲಿ ಕರ್ನಾಟಕ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ಸವಿತಾ ಮಹರ್ಷಿ ಸಂಘದ ಜಿಲ್ಲಾಧ್ಯಕ್ಷರು, ತಾಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಕನ್ನಡಪರ ಹೋರಾಟಗಾರ ತಾಯೂರು ವಿಠಲಮೂರ್ತಿ ಸೇರಿದಂತೆ ಇನ್ನಿತರರಿದ್ದರು.



ಮಂಗಳವಾರ ನಡೆದ ರೇಸ್‌ನಲ್ಲಿ ವಿಜೇತ ಕುದುರೆ ಸಗೇರಾಗೆ ದಿ ರಾಜಕುಮಾರಿ ಲೀಲಾವತಿ ದೇವಿ ಮೆಮೋರಿಯಲ್ ಟ್ರೋಫಿಯನ್ನು ತರಬೇತುದಾರ ತೇಜಸ್ವಿ ಅವರಿಗೆ ಎಂಆರ್‌ಸಿ ಮಾಜಿ ಅಧ್ಯಕ್ಷ ಹಾಗೂ ಸ್ಟೀವರ್ಡ್ ಚಂದುರಂಗ ಕಾಂತರಾಜ ಅರಸ್ ವಿತರಿಸಿದರು. ಈ ವೇಳೆ ಎಂಆರ್‌ಸಿ ಅಧ್ಯಕ್ಷ, ಸ್ಟೀವರ್ಡ್ಸ್, ಕಮಿಟಿ ಮೆಂಬರ್ಸ್ ಉಪಸ್ಥಿತರಿದ್ದಾರೆ.

ನಗರಪಾಲಿಕೆ ವಲಯ ಕಚೇರಿಗಳ ಅದಾಲತ್‌ನಲ್ಲಿ ಮೇಯರ್‌ಗೆ ನಾಗರಿಕರ ಅಳಲು

ಖಾತಾ–ಕಂದಾಯ, ಸಿಆರ್, ನಕ್ಷೆ ಅನುಮೋದನೆ, ಟ್ರೇಡ್ ಲೈಸೆನ್ಸ್‌ಗೆ ಅಧಿಕಾರಿಗಳಿಂದ ಅನಗತ್ಯ ವಿಳಂಬ

ಮೈಸೂರು,ಜ.24(ಆರ್‌ಕೆ)–ಜನರ ಸಮಸ್ಯೆ ಆಲಿಸಿ ಪರಿಹಾರ ಕಲ್ಪಿಸುವ ಸಲುವಾಗಿ ಮೇಯರ್ ಶಿವಕುಮಾರ್ ಆರಂಭಿಸಿರುವ ಪಾಲಿಕೆ ವಲಯವಾರು ಅದಾಲತ್ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿಳಂಬ ಧೋರಣೆಗೆ ನಾಗರಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಅಗ್ರಹಾರದ ಅಕ್ಕನ ಬಳಗ ಶಾಲೆ ಬಳಿಯ ಪಾರ್ಕ್‌ನಲ್ಲಿರುವ ಪಾಲಿಕೆ ವಲಯ ಕಚೇರಿ–1 ಮತ್ತು ಜಯನಗರ ರೈಲ್ವೇ ಗೇಟ್ ಬಳಿಯ ವಲಯ ಕಚೇರಿ–2ರಲ್ಲಿ ಇಂದು ನಡೆದ ಅದಾಲತ್‌ನಲ್ಲಿ ಖಾತಾ ನೋಂದಣಿ ಬದಲಾವಣೆ, ಪೌತಿ ಖಾತೆಗೆ ಅರ್ಜಿ ಸಲ್ಲಿಸಿ ಮೂರು ತಿಂಗಳಾದರೂ ಏನೂ ಕ್ರಮ ಕೈಗೊಳ್ಳದೇ ಪ್ರತೀ ದಿನ ಸಿಬ್ಬಂದಿ ಏನಾದರೊಂದು ಕಾರಣ ಹೇಳಿ ಸತಾಯಿಸುತ್ತಾರೆ ಎಂದು ಸಾರ್ವಜನಿಕರು ದೂರು ನೀಡಿದರು.

ಅರ್ಜಿ ಸಲ್ಲಿಸುವಾಗಲೇ ನಿಗದಿತ ಮುದ್ರಿತ ಫಾರಂನಲ್ಲಿ ಸಂಪೂರ್ಣ ಮಾಹಿತಿ ನೀಡಿ ಅದರೊಟ್ಟಿಗೆ ಕೇಳಿರುವ ಅಗತ್ಯ ದಾಖಲಾತಿ ಪ್ರತಿಗಳನ್ನು ಲಗತ್ತಿಸಿದ ಬಳಿಕವೇ ವಲಯ ಕಚೇರಿಯಲ್ಲಿ ಅರ್ಜಿ ಪಡೆದು ಸ್ವೀಕೃತಿ ನೀಡಿದ್ದಾರೆ. ನಂತರ ಅದರ ಬಗ್ಗೆ ನಾವು ಬಂದು ಕೇಳಿದರೆ ಕೇವಲ ಸಬೂಬು ಹೇಳುತ್ತಾರೆ. ಅದೆಷ್ಟೋ ದಿನ ಸಂಬಂಧಿಸಿದ ಕೇಸ್ ವರ್ಕರ್ ಮತ್ತು ಅಧಿಕಾರಿಗಳೇ ಇರುವುದಿಲ್ಲ. ಪ್ರತೀ ದಿನ ಅವರ ಬಳಿಗೆ ಅಲೆಯುವುದೇ ಆಗಿದೆ. ಕೆಲಸ ಮಾತ್ರ ಆಗಿಲ್ಲ ಎಂದು ನಾಗರಿಕರು ತಮ್ಮ ಅಳಲು ತೋಡಿಕೊಂಡರು.



ಅದೇ ರೀತಿ ಕಂದಾಯ ನಿಗದಿ, ವಾಸದ ಮನೆ ನಿರ್ಮಿಸಲು ಪ್ಲಾನ್ ಅಪ್ರೂವಲ್, ಸಿಆರ್ ನೀಡಲು ಬೇರೆಯವರ ಮೂಲಕ ಲಂಚಕ್ಕೆ ಡಿಮ್ಯಾಂಡ್ ಮಾಡುತ್ತಾರೆ. ಕೆಲಸ ಮಾಡಲು ಅಡಚಣೆ ಏನು, ಯಾವ ದಾಖಲಾತಿ ಬೇಕೆಂದು ಹೇಳುವುದಿಲ್ಲ. ವಿನಾ ಕಾರಣ ಅಲೆಸುತ್ತಾರೆ. ಕಚೇರಿಗೆ ಬಂದರೂ ತಾಳ್ಮೆಯಿಂದ ಕೇಳುವುದೂ ಇಲ್ಲ. ವಲಯಾಧಿಕಾರಿ, ಅಭಿವೃದ್ಧಿ ಅಧಿಕಾರಿ, ಕಂದಾಯಾಧಿಕಾರಿಗಳ ಗಮನಕ್ಕೆ ತರಲೆತ್ನಿಸಿದರೆ ಅವರು ಲಭ್ಯವಾಗುವುದಿಲ್ಲ. ನಮ್ಮ ಸಮಸ್ಯೆಯನ್ನು ಎಲ್ಲಿ ಹೇಳಿಕೊಳ್ಳಬೇಕೆಂದು ತೋಚದೇ ನಿಮ್ಮ ಬಳಿ ಬಂದಿದ್ದೇವೆ ಎಂದು ಹಿರಿಯ ನಾಗರಿಕರು ಮೇಯರ್ ಬಳಿ ತಮಗಾದ ತೊಂದರೆಯನ್ನು ಹೇಳಿಕೊಂಡರು.

ಅದಾಲತ್‌ಗೆ ಬಂದಿದ್ದ ಪ್ರತಿಯೊಬ್ಬರ ಅರ್ಜಿ ಸಂಬಂಧಿತ ಫೈಲ್ ಅನ್ನು ತೆಗೆಸಿದ ಮೇಯರ್ ಶಿವಕುಮಾರ್, ನೋಟ್‌ಶೀಟ್‌ನಲ್ಲಿ ಬರೆದಿರುವುದನ್ನು ಗಮನಿಸಿ, ಯಾವುದೇ ಅಡೆತಡೆ ಇಲ್ಲದ ಕಡತಗಳನ್ನು ತಕ್ಷಣವೇ ಇತ್ಯರ್ಥಗೊಳಿಸಿ, ಕೇಳಿರುವ ಸೇವೆ ಒದಗಿಸಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡಿದರಲ್ಲದೆ, ಕೈಗೊಂಡ ಕ್ರಮದ ಬಗ್ಗೆ ತಮ್ಮ ಕಚೇರಿಗೆ ಮಾಹಿತಿ ನೀಡುವಂತೆ ತಾಕೀತು ಮಾಡಿದರು.

ಆಕ್ಷೇಪಗಳು, ತಕರಾರುಗಳು, ಕಾನೂನು ಅಡೆ–ತಡೆಗಳು, ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವ ಅರ್ಜಿಗಳ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರ ಕಂಡು ಹಿಡಿದು ವಿಲೇವಾರಿ ಮಾಡಬೇಕು. ಸೇವೆ ಒದಗಿಸಲು ಸಾಧ್ಯವಿಲ್ಲ ಎಂಬ ಪ್ರಕರಣಗಳಲ್ಲಿ ಸೂಕ್ತ ಕಾರಣ ನೀಡಿ ಅರ್ಜಿದಾರರಿಗೆ ತಡ ಮಾಡದೇ ಹಿಂಬರಹ ನೀಡುವಂತೆ ಮೇಯರ್ ಅಧಿಕಾರಿಗಳಿಗೆ ಸಲಹೆ ನೀಡಿದರು.

ಶೇ.5ರಷ್ಟು ನಕ್ಷೆ ಉಲ್ಲಂಘಿಸಿ ನಿರ್ಮಿಸಿರುವ ಮನೆ, ವಾಣಿಜ್ಯ ಕಟ್ಟಡಗಳಿಗೆ ಸಿಆರ್ ಅನ್ನು ನಿಗದಿತ ಅವಧಿಯೊಳಗೆ ನೀಡಬೇಕು. ಶೇ.5ಕ್ಕಿಂತ ಹೆಚ್ಚು ಉಲ್ಲಂಘನೆಯಾಗಿರುವುದು ಖಾತರಿಯಾಗಿದ್ದಲ್ಲಿ ಸ್ಥಳ ಪರಿಶೀಲನೆ ವೇಳೆಯೇ ಮಾಲೀಕರಿಗೆ ಹೇಳಿ ಹಿಂಬರಹ ನೀಡಬೇಕು. ಕಾನೂನಿನ ವ್ಯಾಪ್ತಿಯೊಳಗೆ ಎಲ್ಲವೂ ಸರಿ ಇದ್ದರೂ ವಿಳಂಬ ಮಾಡುವುದು, ಲಂಚಕ್ಕೆ ಬೇಡಿಕೆ, ಅಕ್ರಮವಾಗಿ ಸೇವೆ ಒದಗಿಸಿದಲ್ಲಿ, ಅಂತಹವರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಬೇಕಾಗುತ್ತದೆ ಎಂದ ಮೇಯರ್ ಶಿವಕುಮಾರ್, ಸಾರ್ವಜನಿಕರಿಂದ ತೆರಿಗೆ ಸಂಗ್ರಹಿಸಿದ ಮೇಲೆ ಅವರಿಗೆ ಮೂಲ ಸೌಲಭ್ಯ ಒದಗಿಸದಿದ್ದರೆ ವಂಚನೆ ಮಾಡಿದಂತಾಗುತ್ತದೆ ಎಂದರು.

ಎರಡೂ ವಲಯ ಕಚೇರಿಗಳಲ್ಲೂ ಇಂದು 30ರಿಂದ 40 ಮಂದಿ ಅರ್ಜಿದಾರರು ಅದಾಲತ್‌ನಲ್ಲಿ ಸೇವೆ ಬಯಸಿ ಪಾಲ್ಗೊಂಡಿದ್ದರಾದರೂ, ಕೆಲವರಿಗೆ ಸ್ಥಳದಲ್ಲೇ ಪರಿಹಾರ ಸಿಕ್ಕಿತು. ಉಳಿದವರ ಅರ್ಜಿಯನ್ನು ವಾರದೊಳಗೆ ವಿಲೇವಾರಿ ಮಾಡುವಂತೆ ಅವರು ತಿಳಿಸಿದರು.

ಎರಡೂ ಕಡೆಗಳಲ್ಲೂ ಮೇಯರ್, ಉಪಮೇಯರ್ ಡಾ.ಜಿ.ರೂಪಾ ಹಾಗೂ ಹೆಚ್ಚುವರಿ ಉಪಆಯುಕ್ತರಾದ ಆರ್. ರೂಪಾ ಭಾಗವಹಿಸಿದ್ದರು. ವಲಯ ಕಚೇರಿ–1ರಲ್ಲಿ ವಲಯಾಧಿಕಾರಿ ಮಂಜುನಾಥ್ ರೆಡ್ಡಿ, ಕಾರ್ಪೊರೇಟರ್‌ಗಳಾದ ಬಿ.ವಿ.ಮಂಜುನಾಥ್, ಮ.ವಿ.ರಾಮಪ್ರಸಾದ್, ಛಾಯಾದೇವಿ, ಸೌಮ್ಯ, ವಲಯ ಕಚೇರಿ–2ರಲ್ಲಿ ವಲಯಾಧಿಕಾರಿ ನಾಗರಾಜ್, ಕಾರ್ಪೊರೇಟರ್‌ಗಳಾದ ಪಲ್ಲವಿ ಬೇಗಂ, ಶೋಭಾ, ಎಕ್ಸಿಕ್ಯೂಟಿವ್ ಇಂಜಿನಿಯರ್ ರಂಜಿತಾ ಕುಮಾರ್, ಮಧುಸೂದನ್ ಪಾಲಿಕೆ ಅದಾಲತ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಟ್ರಾಫಿಕ್ ವಾರ್ಡನ್ ಮಹೇಶ್ವರ್ ಅಭಿನಂದಿಸಿದ ಪೊಲೀಸ್ ಆಯುಕ್ತ

ಮೈಸೂರು, ಜ.24(ಎಸ್‌ಬಿಡಿ)– ಮೈಸೂರಿನ ಟ್ರಾಫಿಕ್ ವಾರ್ಡನ್ ಮಹೇಶ್ವರ ಅವರನ್ನು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ತಮ್ಮ ಕಚೇರಿಯಲ್ಲಿ ಅಭಿನಂದಿಸಿದರು.

ಸ್ವಇಚ್ಛೆಯಿಂದ ಸಂಚಾರ ನಿರ್ವಹಣೆಯಲ್ಲಿ ಸೇವೆ ಸಲ್ಲಿಸುವ ಸದುದ್ದೇಶದಿಂದ ಟ್ರಾಫಿಕ್ ವಾರ್ಡನ್ ಆರ್ಗನೈಸೇಷನ್ ಪ್ರಾರಂಭವಾದಾಗಿನಿಂದಲೂ ಮಹೇಶ್ವರ್ ಅವರು ನಿರಂತರ ಸೇವೆ ಸಲ್ಲಿಸುತ್ತಿದ್ದಾರೆ. ಇವರು ವಾಹನ ಸಂಚಾರ ನಿರ್ವಹಿಸುವ ಪರಿಯೇ ವಿಭಿನ್ನ, ಎಷ್ಟೇ ವಾಹನ ದಟ್ಟಣೆ ಇದ್ದರೂ ಯಾವುದೇ ವ್ಯತ್ಯಯವಾಗದಂತೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಚಾಕಚಕ್ಯತೆ ಇವರಲ್ಲಿದೆ. ದೇಹಕ್ಕೆ ವಯಸ್ಸಾಗಿದ್ದರೂ ಪಾದರಸದಂತೆ ಕಾರ್ಯ ನಿರ್ವಹಿಸುತ್ತಾರೆ. ಮೈಸೂರು ವಿವಿ ಕ್ರಾಫರ್ಡ್ ಹಾಲ್ ಬಳಿಯ ಕೌಟಿಲ್ಯ ವೃತ್ತದಲ್ಲಿ ಇವರನ್ನು ಹೆಚ್ಚು ಜನ ಗಮನಿಸಿರಬಹುದು. ದಸರಾ ಮಹೋತ್ಸವ, ಹಬ್ಬಗಳು, ಇತರೆ ಬಂದೋಬಸ್ತ್‌ನಲ್ಲೂ ಮಹೇಶ್ವರ್ ಅವರ ಹಾಜರಿ ಇದ್ದೇ ಇರುತ್ತದೆ. ಅಲ್ಲದೆ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಸಂಚಾರ ನಿಯಮ ಪಾಲಿಸುವಂತೆ ಜಾಗೃತಿ ಮೂಡಿಸುತ್ತಿದ್ದಾರೆ. ಇವರ ಅತ್ಯುತ್ತಮ ಸೇವೆಯನ್ನು ಗಮನಿಸಿದ ಪೊಲೀಸ್ ಅಧಿಕಾರಿಗಳು ಅಭಿನಂದಿಸಿ, ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಸಂಚಾರ ನಿರ್ವಹಣೆಯಲ್ಲಿ ಟ್ರಾಫಿಕ್ ವಾರ್ಡನ್‌ಗಳು ಉತ್ತಮ ಸೇವೆ ನೀಡುತ್ತಿದ್ದಾರೆ. ಉದ್ಯೋಗಸ್ಥರು, ನಿವೃತ್ತರು ನಿತ್ಯ ಕೆಲ ಗಂಟೆಗಳ ಕಾಲ ಟ್ರಾಫಿಕ್ ವಾರ್ಡನ್‌ಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಯಾವುದೇ ಫಲಾಪೇಕ್ಷೆಯಿಲ್ಲದೆ ಸ್ವಯಂಪ್ರೇರಿತರಾಗಿ ಸಾರ್ವಜನಿಕ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ದಸರಾ ವೇಳೆ, ಬಂದೋಬಸ್ತ್ ವೇಳೆ ಸಹಕಾರ ನೀಡುತ್ತಾರೆ. ಹಾಗಾಗಿ ಹಿರಿಯರಾದ ಮಹೇಶ್ವರ್ ಅವರನ್ನು ಅಭಿನಂದಿಸಿದ್ದೇವೆ. ಮಹೇಶ್ವರ್ ಸೇರಿದಂತೆ ಅನೇಕ ವಾರ್ಡನ್‌ಗಳು ಸಮಾಜಕ್ಕೆ ಮಾದರಿಯಾಗಿದ್ದು, ವಿವಿಧ ಸಂದರ್ಭಗಳಲ್ಲಿ ಎಲ್ಲರನ್ನೂ ಗೌರವಿಸಲಾಗುವುದು ಎಂದು ತಿಳಿಸಿದರು.



ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಟ್ರಾಫಿಕ್ ವಾರ್ಡನ್ ಮಹೇಶ್ವರ ಅವರನ್ನು ಅಭಿನಂದಿಸಿದರು. ಡಿಸಿಪಿ ಎಂ.ಮುತ್ತುರಾಜ್ ಹಾಗೂ ಪ್ರಭಾರ ಸಂಚಾರ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ ಉಪಸ್ಥಿತರಿದ್ದರು.

ನಾಳೆ ಮೈಸೂರಿಗೆ 'ಪ್ರಜಾ ಧ್ವನಿ' ಯಾತ್ರೆ ಆಗಮನ

ಅಂದಿನ ಸಮಾವೇಶದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ

ಕಾರ್ಯಕರ್ತರಲ್ಲಿ ಕ್ಷೇತ್ರದ ಮುಖಂಡ ಕೆ.ಮರೀಗೌಡ ಮನವಿ

ಮೈಸೂರು,ಜ.24(ಪಿಎಂ)–ಕಾಂಗ್ರೆಸ್‌ನ 'ಪ್ರಜಾ ಧ್ವನಿ' ಯಾತ್ರೆಯು ಜ.26ರಂದು ಮೈಸೂರಿಗೆ ಆಗಮಿಸಲಿದ್ದು, ಅಂದು ಜೆಕೆ ಮೈದಾನದಲ್ಲಿ ನಡೆಯುವ ಸಮಾವೇಶಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕ್ಷೇತ್ರದ ಮುಖಂಡರೂ ಆದ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮನವಿ ಮಾಡಿದರು.

ಮೈಸೂರಿನ ರಾಮಕೃಷ್ಣನಗರದ ಪುನೀತ್ ಕನ್ವೆನ್ಷನ್ ಹಾಲ್‌ನಲ್ಲಿ ಮಂಗಳವಾರ ನಡೆದ ಚಾಮುಂಡೇಶ್ವರಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿ, ಮುಖಂಡರು, ಮುಂಚೂಣಿ ಘಟಕದ ಅಧ್ಯಕ್ಷರು, ಬ್ಲಾಕ್ ಅಧ್ಯಕ್ಷರು, ಕಾರ್ಯಕರ್ತರು ಹಾಗೂ ಬೂತ್ ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಜ.20ರಂದು ಕ್ಷೇತ್ರದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಕ್ಷೇತ್ರದ ಎಲ್ಲಾ ಕಾಂಗ್ರೆಸ್ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪಕ್ಷದ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾಗಿರುವುದಕ್ಕೆ ತಮ್ಮೆಲ್ಲರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಮುಂಬರುವ ಚುನಾವಣೆ ದೃಷ್ಟಿಯಿಂದ ಪಕ್ಷದ ವರಿಷ್ಠರು ರಾಜ್ಯದ ಉದ್ದಗಲಕ್ಕೂ ಪ್ರಜಾಧ್ವನಿ ಯಾತ್ರೆ ನಡೆಸುತ್ತಿದ್ದು, ಇದು ಯಶಸ್ವಿಯಾಗಿ ಸಾಗುತ್ತಿದೆ. ಅಂತೆಯೇ ಜ.26ರಂದು ಈ ಯಾತ್ರೆ ಮೈಸೂರಿಗೆ ಆಗಮಿಸಲಿದ್ದು, ಅಂದು ಮಧ್ಯಾಹ್ನ 3ಕ್ಕೆ ಮೈಸೂರಿನ ಜೆಕೆ ಮೈದಾನದಲ್ಲಿ ಪ್ರಜಾ ಧ್ವನಿ ಸಮಾವೇಶ ನಡೆಯಲಿದೆ. ಈ ಸಮಾವೇಶದಲ್ಲಿಯೂ ಕ್ಷೇತ್ರದಿಂದ ಹೆಚ್ಚಿನ ಕಾರ್ಯಕರ್ತ ಭಾಗವಹಿಸಬೇಕೆಂದು ಕೋರಿದರು.



ಮೈಸೂರಿನ ರಾಮಕೃಷ್ಣನಗರದ ಪುನೀತ್ ಕನ್ವೆನ್ಷನ್ ಹಾಲ್‌ನಲ್ಲಿ ಮಂಗಳವಾರ ನಡೆದ ಚಾಮುಂಡೇಶ್ವರಿ ಕ್ಷೇತ್ರದ ಟಿಕೆಟ್ ಆಕಾಂಕ್ಷಿ, ಮುಖಂಡರು, ಮುಂಚೂಣಿ ಘಟಕದ ಅಧ್ಯಕ್ಷರು, ಬ್ಲಾಕ್ ಅಧ್ಯಕ್ಷರು, ಕಾರ್ಯಕರ್ತರು ಹಾಗೂ ಬೂತ್ ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮನವಿ ಮಾಡಿದರು.

ಕ್ಷೇತ್ರದಲ್ಲಿ ಕಾಂಗ್ರೆಸ್ ಸದೃಢವಾಗಿದೆ ಎಂದು ಕಾರ್ಯಕರ್ತರು ತೋರಿಸಿ ಕೊಟ್ಟಿದ್ದೀರಿ. ಕ್ಷೇತ್ರದಲ್ಲಿ 337 ಬೂತ್‌ಗಳಿದ್ದು, ಪ್ರತಿಯೊಂದು ಬೂತ್‌ಗೂ ಸಮಿತಿ ರಚಿಸಿ, 13 ಸದಸ್ಯರನ್ನು ನೇಮಿಸಲಾಗಿದೆ. ಸರ್ವಜನಾಂಗದ ಪರವಾಗಿರುವ ಪಕ್ಷದ ತತ್ವ–ಸಿದ್ಧಾಂತ ಮತ್ತು ಸಿದ್ದರಾಮಯ್ಯನವರ ಐದು ವರ್ಷಗಳ ಜನಪರ ಆಡಳಿತದ ಬಗ್ಗೆ ಕಾರ್ಯಕರ್ತರೆಲ್ಲರೂ ಮನೆ ಮನೆಗೆ ಮಾಹಿತಿ ನೀಡಬೇಕು ಎಂದು ವಿನಂತಿಸಿದರು.

ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ಜನ ವಿರೋಧಿ ಆಡಳಿತ ಮತ್ತು ಕ್ಷೇತ್ರದಲ್ಲಿ 10 ವರ್ಷಗಳ ಕಾಲ ಅಧಿಕಾರದಲ್ಲಿದ್ದೂ ಕ್ಷೇತ್ರದ ಅಭಿವೃದ್ಧಿಯಲ್ಲಿ ಅಸಮರ್ಥರಾಗಿರುವ ಶಾಸಕರ ಬಗ್ಗೆಯೂ ಜನತೆಗೆ ತಿಳಿಸಬೇಕು. ಮುಂಚೂಣಿ ಘಟಕದ ಅಧ್ಯಕ್ಷರು ಮತ್ತು ಮಹಿಳಾ ಘಟಕದ ಅಧ್ಯಕ್ಷರು, ಯೂತ್ ಕಾಂಗ್ರೆಸ್ ಪದಾಧಿಕಾರಿಗಳು ಪಕ್ಷದ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ತಿಳಿಸಿದರು.

ಮುಖಂಡ ಮಾವಿನಳ್ಳಿ ಸಿದ್ದೇಗೌಡ ಮಾತನಾಡಿ, ಕಾಂಗ್ರೆಸ್ ಪಕ್ಷದ ತತ್ವ–ಸಿದ್ಧಾಂತ ಒಪ್ಪಿ ನಾನು ಸೇರಿದಂತೆ ಹಲವರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದೇವೆ. ನಾವೆಲ್ಲರೂ ಒಟ್ಟಾಗಿ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳೋಣ. 2023ರ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಜೆಡಿಎಸ್ ಮಣಿಸಿ, ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಲು ತಾವೆಲ್ಲರೂ ನಮ್ಮ ಜೊತೆಯಲ್ಲಿ ಗಟ್ಟಿಯಾಗಿ ನಿಲ್ಲಬೇಕು ಎಂದು ಕೆ.ಮರೀಗೌಡರು ಕೋರಿದರು.

ಪಕ್ಷದ ಮುಖಂಡರಾದ ಕೂರ್ಗಳ್ಳಿ ಮಹದೇವ್, ಬೀರಿಹುಂಡಿ ಬಸವಣ್ಣ, ಟಿ.ಬಿ.ಚಿಕ್ಕಣ್ಣ, ಮೆಲ್ಲಹಳ್ಳಿ ಮಹದೇವಸ್ವಾಮಿ, ಕೃಷ್ಣಕುಮಾರ್‌ಸಾಗರ್, ಜೆ.ಜೆ. ಆನಂದ್, ವಾರ್ಬಳ್ಳಿ ಕುಮಾರ, ನಾಗರತ್ನ, ಭಾಗ್ಯ ಲೋಕೇಶ್, ಪ್ರಸಾದ್, ಹೊಸಹುಂಡಿ ರಘು, ಜೋಗಿ ಸಿದ್ದಯ್ಯ, ನಾರಾಯಣ, ಸಿದ್ದರಾಜು, ಉಮಾಶಂಕರ್, ಸತೀಶ್‌ಕುಮಾರ್, ಗುರುಸ್ವಾಮಿ, ಹೊಸಕಾಮನಕೊಪ್ಪಲು ಸ್ವಾಮಿ, ಹಿನಕಲ್ ಹೊನ್ನಪ್ಪ, ಶಿವರಾಜೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಬಂಡಿಪಾಳ್ಯ ಬಸವರಾಜು ಮತ್ತಿತರರು ಹಾಜರಿದ್ದರು.

ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜಯಂತಿ ಆಚರಣೆ



ಮೈಸೂರು, ಜ.24(ಎಂಕೆ)– ನಗರದ ಜಲದರ್ಶಿನಿ ಅತಿಥಿಗೃಹದ ಆವರಣದಲ್ಲಿ ಪಡುವಾರಹಳ್ಳಿಯ ಸ್ನೇಹ ಬಳಗದಿಂದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 126ನೇ ಜಯಂತಿ ಆಚರಿಸಲಾಯಿತು.

ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ, ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ ಮಾತನಾಡಿ, ಸುಭಾಷ್ ಚಂದ್ರ ಬೋಸ್ ಅವರು, ಭಾರತದ ಜನತೆ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಲು ಪ್ರೇರಕ ಶಕ್ತಿಯಾಗಿದ್ದ ಮಹಾನ್ ಚೇತನ. ಅವರ ಕ್ರಾಂತಿಯ ನುಡಿಗಳು ಇಂದಿಗೂ ನಮಗೆಲ್ಲಾ ಸ್ಫೂರ್ತಿಯಾಗಿದೆ. ಇಂತಹ ಮಹನೀಯರು ಸದಾ ಸ್ಮರಣೀಯರು ಎಂದರು. ಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಸ್.ಬಿ.ಶಿವು, ಹೆಚ್. ಹರೀಶ್‌ಕುಮಾರ್, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕ ಸಿ.ಡಿ.ಕುಮಾರ್, ಗೋಕುಲಂನ ನಾಗು, ಜಯಣ್ಣ, ಗಂಗೋತ್ರಿ ರಮೇಶ್‌ಗೌಡ, ಜೀವನ್ ಪ್ರಕಾಶ್, ಈ. ಬಸವರಾಜು, ಪ್ರಕಾಶ್, ವೇಣು,ಕೇಬಲ್ ಕಿಟ್ಟಿ, ಸುರೇಂದ್ರ ಗಿರೀಶ್, ಗೋವಿಂದ ರಾಜು, ಶಾಂತಿ, ಸುಧಾ, ಛಾಯಾ ಮತ್ತಿತರರಿದ್ದರು.

ಗಣರಾಜ್ಯೋತ್ಸವ ಪಥ ಸಂಚಲನ; ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು,ಜ.24–ಜ.26ರಂದು ಬೆಳಿಗ್ಗೆ 9 ಗಂಟೆಗೆ ಬನ್ನಿಮಂಟಪ ಪಂಜಿನ ಕವಾಯಿತು ಮೈದಾನದಲ್ಲಿ ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಆಕರ್ಷಕ ಪಥ ಸಂಚಲನ ಹಾಗೂ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂಜೆ 5 ಗಂಟೆಗೆ ಕಲಾಮಂದಿರದಲ್ಲಿ ದೇಶಭಕ್ತಿ ಮತ್ತು ರಾಷ್ಟ್ರದ ಐಕ್ಯತೆ ಕುರಿತಂತೆ ಸಂಘ ಸಂಸ್ಥೆಯವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸರ್ಕಾರದ ಎಲ್ಲಾ ಕಚೇರಿಗಳು ಹಾಗೂ ಶಾಲಾ ಕಾಲೇಜುಗಳಲ್ಲಿ ತಪ್ಪದೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಿಸುವುದು.

ಪ್ಲಾಸ್ಟಿಕ್ ಮತ್ತು ಕಾಗದದ ರಾಷ್ಟ್ರಧ್ವಜವನ್ನು ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಬಳಸುತ್ತಿದ್ದು, (ಪ್ರದರ್ಶನ, ಹಾರಾಟ) ಸೂಕ್ತ ರೀತಿಯಲ್ಲಿ ಬಳಸದೆ ಇರುವುದರಿಂದ (ಕಾರ್ಯಕ್ರಮ ಮುಗಿದ ನಂತರ ಬಿಸಾಡುವುದು, ಅಲಕ್ಷಿಸುವುದು) ರಾಷ್ಟ್ರಧ್ವಜಕ್ಕೆ ಅಗೌರವ, ಅವಮಾನವಾಗುವುದರಿಂದ ಅದನ್ನು ತಪ್ಪಿಸುವ ಉದ್ದೇಶದಿಂದ ಪ್ಲಾಸ್ಟಿಕ್, ಕಾಗದದ ರಾಷ್ಟ್ರಧ್ವಜವನ್ನು ಉಪಯೋಗಿಸದೆ ಎಲ್ಲರೂ ಬಟ್ಟೆಯ ಧ್ವಜವನ್ನು ಬಳಸುವುದು, ವ್ಯಾಪಾರಸ್ಥರು ಪ್ಲಾಸ್ಟಿಕ್, ಕಾಗದದ ಧ್ವಜವನ್ನು ಮಾರಾಟ ಮಾಡಬಾರದೆಂದು ಎಡಿಸಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ರೀ, ನಿಮಗೆ ರಾಣಿ ಎಂಬ ಹೆಸರಿನ ಮೊದಲ ಹೆಂಡತಿ ಇರುವ ವಿಷಯ ಯಾಕೆ ಹೇಳಿಲ್ಲ?"
ಗಂಡ : "ಹೇಳಿದ್ನಲ್ಲ?"
ಹೆಂಡತಿ : "ಸುಳ್ಳು ಹೇಳಬೇಡಿ, ಯಾವಾಗ ಹೇಳಿದ್ರಿ?"
ಗಂಡ : "ನಿನ್ನ ರಾಣಿ ತರಹ ನೋಡ್ಕೋತೀನಿ ಅಂದಿದ್ನಲ್ಲ!!"

ಮೈಸೂರು ಮಿತ್ರ
ಬುಧವಾರ, 25 ಜನವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........
ತಪ್ಪು ದಾರಿಗೆ ಹಲವಾರು ದಿಕ್ಕುಗಳು. ಆದರೆ ಸರಿದಾರಿಯಲ್ಲಿ ನಡೆಯಲು ಒಂದೇ ಒಂದು ದಿಕ್ಕು – ಅರಿಸ್ಟಾಟಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುಡೀಲಿಲ್ಲ, ದುಃಖಿಸಲಿಲ್ಲ ಇರೋದೆಲ್ಲಾ ನಂದೇ ಅಂದ

ನಿಮ್ಮ ಪತ್ರಗಳು

ಮತದಾರನ ಓಟಿಗೆ ಬೆಲೆ ಇಲ್ಲವೆ...!?

ಮಾನ್ಯರೆ,
ನಾನು ಕಳೆದ ವರ್ಷ ಜೂನ್‌ನಲ್ಲಿ ಚುನಾವಣಾ ಗುರುತಿನ ಚೀಟಿಗಾಗಿ ಅರ್ಜಿ ಸಲ್ಲಿಸಿದ್ದೆ. ಆದರೆ ಇಲ್ಲಿಯವರೆಗೆ ಅದು ನನಗೆ ತಲುಪಿಲ್ಲ. ಇನ್ನೇನು ಎರಡು ತಿಂಗಳಲ್ಲಿ ವಿಧಾನಸಭೆ ಚುನಾವಣೆ ಬರುತ್ತಿದೆ. ಜಲಪುರಿಯಲ್ಲಿರುವ ಮಿನಿ ವಿಧಾನಸೌಧಕ್ಕೆ ಹಲವಾರು ಬಾರಿ ಉರಿ ಬಿಸಿಲಿನಲ್ಲಿ ಅಲೆದು ಇದರ ಬಗ್ಗೆ ಸಂಬಂಧಪಟ್ಟವರನ್ನು ವಿಚಾರಿಸಿದಾಗ ನಿಮ್ಮ ಮನೆ ಹತ್ತಿರ ಇರುವ ಕಚೇರಿಗೆ ಹೋಗಿ ವಿಚಾರಿಸಿದಾಗ ನಿಮ್ಮ ಹೆಸರು ನಮ್ಮ ಲಿಸ್ಟ್‌ನಲ್ಲಿ ಇದೆ. ಮನೆಗೆ ಕಾರ್ಡ್ ಕೊರಿಯರ್ ಮೂಲಕ ಬರುತ್ತದೆ. ಸುಮ್ಮನೆ ಇಲ್ಲಿಗೆ ಬರಬೇಡಿ, ನಿಮ್ಮ ಒಂದು ಓಟಿನಿಂದ ಯಾರಿಗೂ ಏನೂ ನಷ್ಟವಿಲ್ಲ ಎಂಬ ಬೇಜವಾಬ್ದಾರಿ ಉತ್ತರ ಬರುತ್ತಿದೆ. ನನ್ನಂತೆ ಅನೇಕರಿಗೆ ಈ ಸಮಸ್ಯೆ ಉಂಟಾಗಿದೆ. ಈಗ ನನ್ನ ಹತ್ತಿರ ನಕಲಿ ಚುನಾವಣಾ ಗುರುತಿನ ಚೀಟಿ ಇದೆ. ಆದರೆ ಕೆಲವು ಕಡೆ ಆಧಾರ್, ಪಾನ್ ಕಾರ್ಡ್ ಜೊತೆಗೆ ಅಸಲಿ ಚುನಾವಣಾ ಗುರುತಿನ ಚೀಟಿಯನ್ನೇ ಕೇಳುತ್ತಿದ್ದಾರೆ. ನಕಲಿ ಕಾರ್ಡ್‌ಗೆ ಬೆಲೆ ಇರುವುದಿಲ್ಲ. ನಾನು ಕಳೆದ 33 ವರ್ಷಗಳಿಂದ ಸ್ವರಾಲಯ ಸಂಗೀತ ಸಂಸ್ಥೆಯನ್ನು ನಡೆಸುತ್ತಿದ್ದೇನೆ. ತುಂಬಾ ನೋವಾಗುತ್ತಿದೆ. ಎಷ್ಟು ಸಲ ಅಲೆದರೂ ಇನ್ನೂ ನನಗೆ ಗುರುತಿನ ಚೀಟಿ ಬಂದಿಲ್ಲ. ಏತಕ್ಕೆ ಹೀಗೆ ಗುರುತಿನ ಚೀಟಿ ವಿತರಿಸುವಲ್ಲಿ ವಿಳಂಬವಾಗುತ್ತಿದೆ ಎಂದು ಯಾರಿಗೂ ತಿಳಿದಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ಸಮಸ್ಯೆಯನ್ನು ಬಗೆ ಹರಿಸಿ, ಯಾರಿಗೆ ಚುನಾವಣಾ ಗುರುತಿನ ಚೀಟಿ ಇನ್ನೂ ವಿತರಿಸಿಲ್ಲವೋ ಅವರಿಗೆ ಆದಷ್ಟು ಬೇಗ ಗುರುತಿನ ಚೀಟಿಯನ್ನು ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಮನವಿ.

– ವಿದುಷಿ ಡಾ.ಸುಮ ಹರಿನಾಥ್, ರಾಮಕೃಷ್ಣನಗರ, ಮೈಸೂರು

ಮಾದರಿ ತನಿಖಾ ಸಂಸ್ಥೆ ಎಫ್‌ಬಿಐ

ಮಾನ್ಯರೆ,
ಅಮೇರಿಕಾದ ಅತ್ಯುನ್ನತ ತನಿಖಾ ಸಂಸ್ಥೆಯಾದ ಎಫ್‌ಬಿಐ (ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್) ದೇಶದ ಅಧ್ಯಕ್ಷರಾದ ಜೋ ಬೈಡನ್ ಅವರ ನಿವಾಸದ ಮೇಲೆ ದಾಳಿ ನಡೆಸಿ ಸುಮಾರು 20 ಮಹತ್ವದ ವರ್ಗೀಕೃತ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದೆ ಎಂಬ ವರದಿಯನ್ನು ಓದಿ ಆಶ್ಚರ್ಯದ ಜೊತೆಗೆ ತುಂಬಾ ಸಂತೋಷ ಕೂಡ ಆಯಿತು. ಬೈಡನ್ ಅವರು 2009 ರಿಂದ 2016ರವರೆಗೆ ಅಮೇರಿಕಾದ ಉಪಾಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ನಡೆದಿದೆ ಎಂದು ಹೇಳಲಾದ ಹಗರಣಗಳಿಗೆ ಸಂಬಂಧಪಟ್ಟ ಹಾಗೆ ಈ ದಾಳಿ ನಡೆದಿದೆ ಎಂದು ಹೇಳಲಾಗುತ್ತಿದೆ. ಅದರ ಸತ್ಯಾಸತ್ಯತೆ ಏನೇ ಆಗಿರಲಿ ಅದು ನಮಗೆ ಮುಖ್ಯವಲ್ಲ. ಆದರೆ ಅಚ್ಚರಿಯ ಸಂಗತಿಯೆಂದರೆ, ಜಗತ್ತಿನ ಅತ್ಯಂತ ಪ್ರಭಾವಶಾಲಿ ಹುದ್ದೆಯಲ್ಲಿರುವ ಅಮೇರಿಕಾದ ಅಧ್ಯಕ್ಷರ ವಿರುದ್ಧವೇ ಅದೇ ದೇಶದ ತನಿಖಾ ಸಂಸ್ಥೆ ತನಿಖೆ ನಡೆಸಿ, ದಾಖಲೆಗಳನ್ನು ವಶಪಡಿಸಿಕೊಂಡಿರುವುದು ನಿಜಕ್ಕೂ ಐತಿಹಾಸಿಕವಾಗಿದ್ದು, ನಮ್ಮ ದೇಶದ ಸಿಬಿಐ ಸೇರಿದಂತೆ ವಿಶ್ವದ ಎಲ್ಲಾ ತನಿಖಾ ಸಂಸ್ಥೆಗಳಿಗೂ ಮಾದರಿಯಾಗಿದೆ. ಇದು ಆ ಸಂಸ್ಥೆಯ ವಿಶ್ವಾಸಾರ್ಹತೆಗೆ ಹಿಡಿದ ಕನ್ನಡಿಯಾಗಬಲ್ಲದು. ಸಾಮಾನ್ಯವಾಗಿ ಎಲ್ಲಾ ತನಿಖಾ ಸಂಸ್ಥೆಗಳು ಕೇಂದ್ರ ಅಥವಾ ರಾಜ್ಯ ಸರ್ಕಾರದ ಮರ್ಜಿಯಲ್ಲಿರುತ್ತದೆ. ಹೀಗಾಗಿ ಸರ್ಕಾರದ ಮುಖ್ಯಸ್ಥರ ವಿರುದ್ಧವೇ ತನಿಖೆ ನಡೆಸುವುದು ತುಂಬಾ ಅಪರೂಪ. ಈ ಹಿಂದೆ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಸಿಬಿಐ ಅನ್ನು ಕಾಂಗ್ರೆಸ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಎಂದು ಅಪಹಾಸ್ಯ ಮಾಡಲಾಗುತ್ತಿತ್ತು. ಈಗ ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂಬ ಆರೋಪ ಕೇಳಿಬರುತ್ತಿದೆ. ಹೀಗಾಗಿ, ನಮ್ಮ ದೇಶದ ತನಿಖಾ ಸಂಸ್ಥೆಗಳು ಸಹಾ ಅಮೇರಿಕಾ ಮಾದರಿಯನ್ನು ಅನುಸರಿಸಬೇಕಾಗಿದೆ, ಅಂದರೆ, ಸ್ವತಂತ್ರವಾಗಿ, ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಮಕ್ಕಳ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ಬೆಸ್ಕಾಂ ಅಧಿಕಾರಿಗಳು



ಮಾನ್ಯರೆ,
ಮಳವಳ್ಳಿ ತಾಲೂಕು ಹಲಗೂರು ಸಮೀಪವಿರುವ ಅಂಕನಹಳ್ಳಿ ಗ್ರಾಮದಲ್ಲಿ ಇರುವಂತಹ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಂಭಾಗ ವಿದ್ಯುತ್ ತಂತಿ ಹಾದು ಹೋಗಿದೆ. ಶಾಲೆಯ ಆವರಣದಲ್ಲಿ ಮರ ಇರುವ ಕಾರಣ ಮರದ ಮೇಲೆ ವಿದ್ಯುತ್ ತಂತಿ ಇದೆ. ಇದರ ಬಗ್ಗೆ ಬೆಸ್ಕಾಂ ಅಧಿಕಾರಿಗಳಿಗೆ ಮರವನ್ನು ತೆರವುಗೊಳಿಸಲು ಎಷ್ಟು ಬಾರಿ ಕರೆ ಮಾಡಿ ದೂರು ನೀಡಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ. ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಶಾಲೆಯ ಮಕ್ಕಳ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಬೆಸ್ಕಾಂ ಅಧಿಕಾರಿಗಳು.
ಶಾಲೆಯ ಆವರಣದಲ್ಲಿ ಮಕ್ಕಳು ಆಟ ಆಡುವಾಗ ಏನಾದರು ಅನಾಹುತ ಸಂಭವಿಸಿದರೆ ಅದಕ್ಕೆ ಬೆಸ್ಕಾಂ ಅಧಿಕಾರಿಗಳೇ ನೇರ ಹೊಣೆಯಾಗಬೇಕಾಗುತ್ತದೆ. ಬೆಸ್ಕಾಂ ಅಧಿಕಾರಿಗಳು ನೋಡಿದರು ನೋಡದಂತೆ ನಿರ್ಲಕ್ಷತನ ತೋರುತ್ತಿರುವುದು ವಿಪರ್ಯಾಸವೇ ಸರಿ. ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳು ಇನ್ನಾದರೂ ಎಚ್ಚೆತ್ತುಕೊಂಡು ಸಮಸ್ಯೆಯನ್ನು ಬಗೆಹರಿಸಲು ಮುಂದಾಗುತ್ತಾರೋ ಎಂದು ಕಾದುನೋಡಬೇಕಾಗಿದೆ.

–ಶ್ರೀಧರ್, ಅಂಕನಹಳ್ಳಿ, ಮಳವಳ್ಳಿ ತಾ.

ಮಹಾರಾಣಿ ಕಾಲೇಜಿಗೆ ಸಾರಿಗೆ ಸೌಕರ್ಯ ಕಲ್ಪಿಸಿ

ಮಾನ್ಯರೆ,
ಮೈಸೂರಿನ ವಾಲ್ಮೀಕಿ ರಸ್ತೆ ಪಡುವಾರಹಳ್ಳಿಯಲ್ಲಿರುವ ಸರ್ಕಾರದ ಪ್ರತಿಷ್ಠಿತ ಮಹಾರಾಣಿ ಮಹಿಳಾ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೆ ಕಾಲೇಜಿಗೆ ಹೋಗಿ ಬರಲು ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲದೆ ತುಂಬಾ ತೊಂದರೆಯಾಗಿದೆ. ಕಾಲೇಜಿನ ಮುಂಭಾಗದಲ್ಲಿ ಬಸ್ ನಿಲ್ದಾಣವಿದೆ. ಆದರೆ ಬಸ್ಸುಗಳು ಇಲ್ಲದೆ ಯಾವಾಗಲೂ ಬಿಕೋ ಎನ್ನುತ್ತಿದೆ. ವಿದ್ಯಾರ್ಥಿನಿಯರು ಪ್ರತಿದಿನ ಆಕಾಶವಾಣಿ ಬಸ್ ನಿಲ್ದಾಣದಿಂದ ಕಾಲೇಜಿಗೆ ಮತ್ತು ಕಾಲೇಜಿನಿಂದ ಆಕಾಶವಾಣಿ ಬಸ್ ನಿಲ್ದಾಣಕ್ಕೆ ತಂಡೋಪತಂಡವಾಗಿ ನಡೆದು ಬಂದು ಬಸ್ಸು ಹತ್ತಬೇಕಾಗಿದೆ. ಇದರಿಂದ ತೊಂದರೆಯಾಗಿದೆ. ಈ ಹೆಣ್ಣು ಮಕ್ಕಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ಕಾಲೇಜಿನ ಆಡಳಿತ ಮಂಡಳಿ ಸಾರಿಗೆ ಇಲಾಖೆಗೆ ಮನವಿ ಮಾಡುವುದು ಒಳಿತು ಮತ್ತು ಇದಕ್ಕೆ ಸಂಬಂಧಿಸಿದ ಸಾರಿಗೆ ಇಲಾಖೆ ಅಧಿಕಾರಿಗಳು ಮನಸ್ಸು ಮಾಡಿ ಆದಷ್ಟು ಬೇಗ ಕಾಲೇಜಿನ ಮುಂಭಾಗದಲ್ಲಿ ಇರುವ ಬಸ್ ನಿಲ್ದಾಣಕ್ಕೆ ಬಸ್ಸುಗಳು ಓಡಾಡುವಂತೆ ಮಾಡಿ ವಿದ್ಯಾರ್ಥಿನಿಯರುಗಳಿಗೆ ಅನುಕೂಲ ಮಾಡಿಕೊಡುವ ಮೂಲಕ ನೆರವಾಗಬೇಕು. –ಬೆಸಗರಹಳ್ಳಿ ರವಿಪ್ರಸಾದ್, ಕೆ.ಸಿ.ನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಶ್ರೀ ಮನ್ಮಧ್ವಾಚಾರ್ಯರು

ದ್ವೈತವೇದಾಂತವೆಂಬ ಶ್ರೇಷ್ಠ ದರ್ಶನವನ್ನು ಲೋಕದಲ್ಲಿ ಬೆಳಗಿಸಿ ಬ್ರಹ್ಮಸೂತ್ರಗಳ ನಿಜಾರ್ಥವನ್ನು ಲೋಕಕ್ಕೆ ತಿಳಿಸಿ ಹರಿಭಕ್ತಿಯೇ ಮೋಕ್ಷದ ನೇರ ಮಾರ್ಗವೆಂದು ಸಾರಲು ಅವತರಿಸಿದ ದಿವ್ಯ ಚೇತನ ಶ್ರೀ ಮನ್ಮಧ್ವಾಚಾರ್ಯರು. ದರ್ಶನ ಪ್ರಪಂಚಕ್ಕೆ ಕರ್ನಾಟಕ ರಾಜ್ಯವು ನೀಡಿದ ಅತ್ಯುಜ್ಜ್ವಲರತ್ನವೇ ಅವರು. ಶ್ರೀ ಶಂಕರಾಚಾರ್ಯರು ಕೇರಳದಲ್ಲಿ ಜನಿಸಿ ಭಾರತದಲ್ಲೆಲ್ಲ ಸಂಚರಿಸಿ ಕೊನೆಗೆ ಕರ್ನಾಟಕದ ಶೃಂಗೇರಿಯಲ್ಲಿ ಶಾರದಾಂಬೆಯನ್ನು ಪ್ರತಿಷ್ಠಾಪಿಸಿದರು. ಶ್ರೀ ರಾಮಾನುಜಾಚಾರ್ಯರು ತಮಿಳುನಾಡಿನಲ್ಲಿ ಹುಟ್ಟಿ ಕರ್ನಾಟಕಕ್ಕೆ ಬಂದು ಮೇಲುಕೋಟೆಯಲ್ಲಿ ನೆಲೆಸಿ ಭಾಷ್ಯಗಳನ್ನು ಬರೆದರು. ಆದರೆ ಶ್ರೀ ಮಧ್ವಾಚಾರ್ಯರೆಂಬ ಮಹಾಪುರುಷರು ಕರ್ನಾಟಕದ ಉಡುಪಿಯ ಬಳಿ ಇರುವ ಪಾಜಕ ಎಂಬ ಪವಿತ್ರ ಕ್ಷೇತ್ರದಲ್ಲಿ ಹುಟ್ಟಿ ಬೆಳೆದವರು. ಅವರು ಹುಟ್ಟಿದುದು ಮಾಘ ಶುಕ್ಲ ನವಮಿ. ಆ ದಿನವನ್ನು ಮಧ್ವ ನವಮೀ ಎಂದು ಕರೆಯುವ ವಾಡಿಕೆ ಇದೆ.

ಉಡುಪಿಯಲ್ಲಿ ಶ್ರೀ ಕೃಷ್ಣನ ವಿಗ್ರಹವನ್ನು ಪ್ರತಿಷ್ಠಾಪಿಸಿದುದು ಮತ್ತು ಅಷ್ಟಮಠಗಳ ಯತಿಗಳು ಕೃಷ್ಣನ ಪೂಜೆಯನ್ನು ಮಾಡುವಂತೆ ವ್ಯವಸ್ಥೆಯನ್ನು ಕಲ್ಪಿಸಿದುದು ಶ್ರೀ ಮನ್ಮಧ್ವಾಚಾರ್ಯರೇ. ಅವರ ಶಿಷ್ಯರು ಬೇರೆ ಬೇರೆ ಊರುಗಳಲ್ಲಿಯೂ ಮಠಗಳನ್ನು ಸ್ಥಾಪಿಸಿ ಮಾಧ್ವ ಸಂಪ್ರದಾಯವನ್ನು ದ್ವೈತವೇದಾಂತ ದರ್ಶನವನ್ನು ರಕ್ಷಿಸಿ ಪ್ರಸಾರ ಮಾಡುತ್ತಿದ್ದಾರೆ.

ಶ್ರೀ ಮನ್ಮಧ್ವಾಚಾರ್ಯರು ತಮ್ಮ ಸಮಸ್ತ ಗ್ರಂಥಗಳನ್ನೂ ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾರೆ. ಮೂವತ್ತೇಳು ಗ್ರಂಥಗಳು ಅವರಿಂದ ರಚಿತವಾಗಿವೆ. ಬ್ರಹ್ಮಸೂತ್ರಗಳಿಗೂ ಭಗವದ್ಗೀತೆಗೂ ಉಪನಿಷತ್ತುಗಳಿಗೂ ಭಾಷ್ಯಗಳನ್ನು ಬರೆದಿರುವುದಲ್ಲದೆ ಮಹಾಭಾರತ ತಾತ್ಪರ್ಯ ನಿರ್ಣಯ ಮುಂತಾದ ಶ್ರೇಷ್ಠ ಪುಸ್ತಕಗಳೂ ಅವರ ಕೊಡುಗೆಯಾಗಿವೆ. ವೇದಗಳ ಕೆಲವು ಸೂಕ್ತಗಳಿಗೂ ಅವರು ವ್ಯಾಖ್ಯಾನವನ್ನು ಮಾಡಿದ್ದಾರೆ. ಅವರು ರಚಿಸಿರುವ ಸ್ತೋತ್ರಗಳು ಗೇಯಗುಣ ಗುಂಫಿತವಾಗಿವೆ.

ಮಾಧ್ವಮತದ ತತ್ತ್ವಗಳು

ಮಾಧ್ವ ಮತದ ಮೂಲ ತತ್ತ್ವಗಳನ್ನು ಹೇಳುವ ಒಂದು ಪದ್ಯ –

ಶ್ರೀ ಮನ್ಮಧ್ವಮತೇ ಹರಿಃ ಪರತರಃ
ಸತ್ಯಂ ಜಗತ್ ತತ್ತ್ವತೋ
ಭೇದೋ ಜೀವಗಣಾ ಹರೇರನುಚರಾ
ನೀಚೋಚ್ಚಭಾವಂ ಗತಾಃ।
ಮುಕ್ತಿರ್ನೈಜಸುಖಾನುಭೂತಿರಮಲಾ
ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾತ್ರಿತಯಂ ಪ್ರಮಾಣ
ಮಖಿಲಾಮ್ನಾಯೈಕವೇದ್ಯೋ ಹರಿಃ॥

(1) ಮಾಧ್ವ ಮತದಲ್ಲಿ ಹರಿಯೇ ಸರ್ವೋತ್ತಮ. ಹರಿಯೊಬ್ಬನೇ ಸರ್ವಶಕ್ತ, ಅವನೇ ಪರಬ್ರಹ್ಮ, ಅವನು ಮಾತ್ರ ಸ್ವತಂತ್ರ, ಅವನೇ ಸರ್ವಜ್ಞ, ಜಗತ್ತಿನ ಸೃಷ್ಟಿ ಸ್ಥಿತಿಲಯಗಳು ಅವನ ಇಚ್ಛಾನುಸಾರವಾಗಿ ನಡೆಯುವುವು. ಅವನನ್ನೇ ವಿಷ್ಣು, ನಾರಾಯಣ ಇತ್ಯಾದಿ ಪದಗಳಿಂದ ಶ್ರುತಿಗಳು ಸ್ತುತಿಸಿವೆ. ಬೇರೆ ಎಲ್ಲ ದೇವತೆಗಳೂ ಹರಿಯ ಅಧೀನರು. ಹರಿಯೇ ಜೀವರಿಗೆ ಮೋಕ್ಷವನ್ನು ನೀಡುವವನು.

(2) ಈ ಜಗತ್ತು ಸತ್ಯ. ಸತ್ಯ ಸಂಕಲ್ಪನಾದ ಭಗವಂತನು ಸತ್ಯವಾದ ಜಗತ್ತನ್ನು ಸೃಷ್ಟಿಸಿದ್ದಾನೆ. ಜಗನ್ಮಿಥ್ಯಾ ಎಂಬ ವಾದವು ಸರಿಯಲ್ಲ. ಜಗತ್ತಿನಲ್ಲಿ ಜೀವನು ಮಾಡುವ ಕಾರ್ಯಗಳು ಸತ್ಯವಾದುದರಿಂದ ಅವುಗಳ ಫಲಗಳಾದ ಪುಣ್ಯಾಪಾಪಗಳೂ ಸತ್ಯ. ಆದ್ದರಿಂದ ಸನ್ಮಾರ್ಗದಲ್ಲೇ ನಡೆಯಬೇಕು.

(3) ಭೇದವೆಂಬುದು ತತ್ತ್ವತಃ ಸಿದ್ಧವಾಗಿದೆ. ಜಡವಸ್ತುವಿಗೂ ಚೇತನಕ್ಕೂ ಇರುವ ಭೇದವನ್ನು ಯಾರು ಅಲ್ಲಗಳೆಯಲು ಸಾಧ್ಯ? ಜಡವಸ್ತುಗಳಲ್ಲಿ ಪೃಥಿವಿಯೂ ಜಲವೂ ಬೇರೆ ಬೇರೆ ಎಂದು ಮಗುವಿಗೂ ತಿಳಿಯುತ್ತದೆ. ಜೀವಿಗಳಲ್ಲೂ ಕುದುರೆಗೂ ಕತ್ತೆಗೂ ಭೇದವಿಲ್ಲ ಎಂದರೆ ಹಾಸ್ಯಾಸ್ಪದ. ಇನ್ನು ಭಗವಂತನಿಗೂ ಜೀವಾತ್ಮನಿಗೂ ಇರುವ ಭೇದ ಸುಸ್ಪಷ್ಟ. ಭಗವಂತನು ಸರ್ವಜ್ಞ, ಸರ್ವಶಕ್ತ, ಸದಾ ಆನಂದಮಯ. ಜೀವಾತ್ಮನು ಅಲ್ಪಜ್ಞ, ಅಲ್ಪಶಕ್ತ, ದುಃಖಿ ಇವರ ಭೇದವೂ ಸುವ್ಯಕ್ತ. ಈ ಭೇದವು ನಿತ್ಯ ಎಂದು ಮಾಧ್ವ ಸಿದ್ಧಾಂತ.

(4) ಎಲ್ಲ ಜೀವರೂ ಹರಿಯ ಅನುಚರರು. ಜೀವರು ಸ್ವತಂತ್ರರಲ್ಲ. ಆ ಸ್ವಾತಂತ್ರ್ಯವಿದ್ದಿದ್ದರೆ ಯಾರೂ ದುಃಖಿಗಳಾಗುತ್ತಿರಲಿಲ್ಲ. ಮುಕ್ತರಾದ ಜೀವರು ಮಾತ್ರ ನಿತ್ಯ ನಿಜ ಸುಖದಲ್ಲಿರುವರು.

(5) ಮುಕ್ತಿ ಎಂದರೆ ನಿಜಸುಖಾನುಭವ. ಭಗವಂತನ ಸಾಲೋಕ್ಯ.

(6) ಮುಕ್ತಿಗೆ ಭಕ್ತಿಯೇ ಸಾಧನ. ಭಗವಂತನ ಮಹಾತ್ಮ್ಯವನ್ನು ಅರಿತು ಅವನಲ್ಲಿರುವ ಸರ್ವಾತಿಶಾಯಿಯಾದ ಸ್ನೇಹವು ಭಕ್ತಿ. ಕರ್ಮ, ಜ್ಞಾನ, ಯೋಗ ಇತ್ಯಾದಿಗಳೆಲ್ಲ ಭಕ್ತಿಯನ್ನು ಉಂಟು ಮಾಡುವ ಪರೋಕ್ಷ ಸಾಧನಗಳು.

(7) ಪ್ರತ್ಯಕ್ಷ, ಅನುಮತಿ, ಆಪ್ತ ವಾಕ್ಯವಾದ ಶಬ್ದ ಎಂಬ ಮೂರು ಪ್ರಮಾಣಗಳು. ಅಪೌರುಷೇಯವಾದ ಶ್ರುತಿಯು ಪರಮಪ್ರಮಾಣ. ಭಗವಂತನ ವಾಣಿಯಾದ ಭಗವದ್ಗೀತೆ, ಮೂಲರಾಮಾಯಣ, ಭಾಗವತ ಮುಂತಾದ ಗ್ರಂಥಗಳೂ ಪ್ರಮಾಣ.

(8) ಸಕಲ ಶ್ರುತಿಗಳ ಪರಮತಾತ್ಪರ್ಯವಿರುವುದು ಭಗವಂತನಾದ ಹರಿಯಲ್ಲಿ ವೇದೈಶ್ಚ ಸರ್ವೈರಹಮೇವ ವೇದ್ಯಃ (ಎಲ್ಲ ವೇದಗಳಿಂದ ಪ್ರತಿಪಾದ್ಯನು ನಾನೇ) ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ವೇದವಾಕ್ಯಗಳ ಸಾಮಾನ್ಯ ತಾತ್ಪರ್ಯವು ಇಂದ್ರ, ಅಗ್ನಿ ಮುಂತಾದ ದೇವತೆಗಳಲ್ಲಿದ್ದರೂ ಅಂತಿಮವಾಗಿ ಅವು ಭಗವಂತನಾದ ಹರಿಯನ್ನೇ ಸ್ತುತಿಸುತ್ತವೆ. ಬ್ರಹ್ಮಸೂತ್ರಗಳು ಪ್ರತಿಪಾದಿಸುವ ಪರಬ್ರಹ್ಮವು ಹರಿಯೇ. ಆ ಹರಿಯು ಸಕಲ ಶುಭ ಗುಣಗಳನ್ನು ಹೊಂದಿರುವವನು, ಲಕ್ಷ್ಮೀಪತಿಯು.

ಮಾಧ್ವದರ್ಶನದ ವಿಪುಲವಾದ ಸಾಹಿತ್ಯ

ಮಾಧ್ವದರ್ಶನದ, ಎಂದರೆ ದ್ವೈತ ವೇದಾಂತದ ಸಾಹಿತ್ಯವು ವಿಪುಲವೂ ಗಂಭೀರವೂ ಆಗಿದೆ. ಶ್ರೀ ಜಯತೀರ್ಥರು ಮೂಲಗ್ರಂಥಗಳಿಗೆ ಪಾಂಡಿತ್ಯ ಪೂರ್ಣ ಟೀಕೆಗಳನ್ನು ಬರೆದು ಟೀಕಾಚಾರ್ಯರೆಂದು ಪ್ರಸಿದ್ಧರಾಗಿದ್ದಾರೆ. ಇವರು ರಚಿಸಿರುವ 'ನ್ಯಾಯ ಸುಧಾ' ಮೇರು ಶಿಖರದಂತೆ ದರ್ಶನಗಳಲ್ಲಿ ಮಾನ್ಯವಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಕೃಷ್ಣದೇವರಾಯನು ಚಕ್ರವರ್ತಿಯಾಗಿದ್ದಾಗ ರಾಜಗುರುಗಳಾಗಿದ್ದ ವ್ಯಾಸತೀರ್ಥರು ರಚಿಸಿದ ಮೂರು ಗ್ರಂಥಗಳು ಚಂದ್ರಿಕಾ, ತರ್ಕತಾಂಡವ ಮತ್ತು ನ್ಯಾಯಾಮೃತ. ಶ್ರೀ ಮೂರೂ ಶಾಸ್ತ್ರ ಪಾಂಡಿತ್ಯದ ನಿಕಷೋಪಲ (ಒರೆಗಲ್ಲು)ಗಳಾಗಿವೆ. ಶ್ರೀ ರಾಘವೇಂದ್ರ ತೀರ್ಥರೂ, ಶ್ರೀ ವಿಜಯೇಂದ್ರ ತೀರ್ಥರೂ, ಶ್ರೀವಾದಿರಾಜರೂ ಅನೇಕ ಗ್ರಂಥಗಳ ರಚನಾಕಾರರು. ಇನ್ನೂ ಅನೇಕ ಪಂಡಿತವರೇಣ್ಯರು ದ್ವೈತವೇದಾಂತ ಸಾಹಿತ್ಯದ ಶ್ರೀಮಂತಿಗೆ ಕಾರಣರಾಗಿದ್ದಾರೆ.

ದಾಸ ಸಾಹಿತ್ಯ : ಕನ್ನಡ ಸಾಹಿತ್ಯದ ವೈಶಿಷ್ಟ್ಯಗಳಲ್ಲೊಂದಾದ ದಾಸ ಸಾಹಿತ್ಯವು ಮುಖ್ಯವಾಗಿ ಮಾಧ್ವಮತಾನುಯಾಯಿಗಳ ಕೊಡುಗೆ. ಕನ್ನಡ ಭಾಷೆಯಲ್ಲೇ ದ್ವೈತ ದರ್ಶನದ ತತ್ತ್ವಗಳನ್ನೂ ಲೋಕಾನುಭವವನ್ನೂ ಭಕ್ತಿಯ ಮಹಿಮೆಯನ್ನೂ ತಿಳಿಸುವ ಈ ದಾಸಸಾಹಿತ್ಯವು ಸಂಗೀತದ ಮಾಧುರ್ಯವನ್ನೂ ಅಳವಡಿಸಿಕೊಂಡಿತು. ಪುರಂದರದಾಸರು, ಕನಕದಾಸರು, ವೆಂಕಟಪತಿದಾಸರು ಕನ್ನಡಕ್ಕೆ ಕೊಟ್ಟ ಕೊಡುಗೆ ಅನನ್ಯಸಾಧ್ಯ. ವಚನ ಸಾಹಿತ್ಯವು ಶಿವಭಕ್ತಿಯನ್ನು ಎತ್ತಿ ಹಿಡಿದಂತೆ ದಾಸಸಾಹಿತ್ಯವು ಹರಿಭಕ್ತಿಗೆ ಊರು ಗೋಲಾಯಿತು. ಈ ಎರಡೂ ಕನ್ನಡ ಸರಸ್ವತಿಯ ಎರಡು ಕಣ್ಣುಗಳಿದ್ದಂತೆ. ಸಂಸ್ಕೃತವನ್ನು ತಿಳಿಯದವರೂ ಅಧ್ಯಾತ್ಮದ ಶಿಖರವನ್ನು ಏರಲು ಇವು ಮೆಟ್ಟಿಲುಗಳಾದವು.

ಅವತಾರ ಪುರುಷರು

ದುಷ್ಟರನ್ನು ಶಿಕ್ಷಿಸಲು ಮತ್ತು ಶಿಷ್ಟರನ್ನು ರಕ್ಷಿಸಲು ವಿಷ್ಣು ಅವತಾರದ ರೂಪದಲ್ಲಿ ಭೂಮಿಗೆ ಬಂದಾಗ ಜೀವೋತ್ತಮನಾದ ವಾಯುದೇವನೂ ಅವತರಿಸಿದನು ಎನ್ನಲಾಗಿದೆ.

ಪ್ರಥಮೋ ಹನುಮಾನ್ನಾಮ
ದ್ವಿತೀಯೋ ಭೀಮ ಏ ಚ ।
ಪೂರ್ಣಪ್ರಜ್ಞಸ್ತೃತೀಯಶ್ಚ ಭಗವತ್
ಕಾರ್ಯ ಸಾಧಕಾ॥

ಎಂಬ ಶ್ಲೋಕದಲ್ಲಿ ಹೇಳಿರುವಂತೆ ಶ್ರೀರಾಮಾವತಾರದಲ್ಲಿ ಹನುಮಂತನಾಗಿ, ಕೃಷ್ಣಾವತಾರದಲ್ಲಿ ಭೀಮನಾಗಿ ಅವತರಿಸಿದ ವಾಯುದೇವನೇ ಕಲಿಯುಗದಲ್ಲಿ ಮಧ್ವಾಚಾರ್ಯರ ರೂಪದಲ್ಲಿ ಕಾಣಿಸಿಕೊಂಡು ಭಗವತ್ಕಾರ್ಯವನ್ನು ಸಾಧಿಸಿದನು ಎಂದು ತಾತ್ಪರ್ಯ. ಶ್ರೀ ಮನ್ಮಧ್ವಾಚಾರ್ಯರು ಎಪ್ಪತ್ತೊಂಬತ್ತು ವರ್ಷ (ಏಕೋನಾ ಶೀತಿ ವರ್ಷಾಣಿ) ಜಗತ್ತಿನಲ್ಲಿದ್ದು, ಭಗವತ್ಸೇವೆ ಯನ್ನು ಮಾಡಿದರು.

'ಕಲಿಕಾ ಹಬ್ಬ' ಮಕ್ಕಳ ಪ್ರತಿಭೆ ಅನಾವರಣಕ್ಕೆ ಸೂಕ್ತ ವೇದಿಕೆ

ಲಲಿತಾದ್ರಿಪುರದಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ



ಮೈಸೂರು,ಜ.24(ಪಿಎಂ)– ರಾಜ್ಯ ಸರ್ಕಾರ ಜಾರಿಗೊಳಿಸಿರುವ 'ಕಲಿಕಾ ಹಬ್ಬ' ಮಕ್ಕಳ ಪ್ರತಿಭೆ ಅನಾವರಣಕ್ಕೆ ಸೂಕ್ತ ವೇದಿಕೆ ಕಲ್ಪಿಸಲಿದೆ ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಹೇಳಿದರು.

ಮೈಸೂರಿನ ಲಲಿತಾದ್ರಿಪುರ ಗ್ರಾಮದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಆಲನಹಳ್ಳಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ಉದ್ಘಾಟಿಸಿ ಮಾತನಾಡಿದ ಅವರು, ಕಲಿಕಾ ಹಬ್ಬವು ಗ್ರಾಮೀಣ ಸೊಗಡನ್ನು ಹೊಂದಿದ್ದು, ಈ ಕಾರ್ಯಕ್ರಮದ ಮೂಲಕ ತಮ್ಮ ಪ್ರತಿಭೆ ಅನಾವರಣಕ್ಕೆ ಆಗಮಿಸಿರುವ ಎಲ್ಲಾ ಶಾಲೆಗಳ ಮಕ್ಕಳಿಗೂ ಅಭಿನಂದಿಸುತ್ತೇನೆ. ನಿಮ್ಮೆಲ್ಲರ ಮುಂದಿನ ಶಾಲಾ ಭವಿಷ್ಯ ಉಜ್ವಲವಾಗಿರಲಿ ಎಂದು ಹಾರೈಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಶಾಲಾ ಶಿಕ್ಷಣಕ್ಕೂ ಹೆಚ್ಚಿನ ಒತ್ತು ನೀಡಲಾಗಿದೆ. ಅದರಂತೆ ಮಕ್ಕಳು ಶಿಕ್ಷಣ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಕಲಿಕಾ ಹಬ್ಬ ಪ್ರಾರಂಭಿಸಲಾಗಿದೆ. ಎಲ್ಲಾ ಶಾಲಾ ಮಕ್ಕಳು ಈ ಕಲಿಕಾ ಹಬ್ಬದಲ್ಲಿ ಭಾಗವಹಿಸಿ, ತಮ್ಮ ಪ್ರತಿಭೆ ಅನಾವರಣಗೊಳಿಸಬೇಕು ಎಂದು ಎಲ್.ಆರ್.ಮಹದೇಸ್ವಾಮಿ ಸಲಹೆ ನೀಡಿದರು.

ಡಯಟ್‌ನ ಪ್ರಾಂಶುಪಾಲ ನಾಗರಾಜಯ್ಯ ಮಾತನಾಡಿ, ಕಲಿಕಾ ಹಬ್ಬದ ಮೂಲಕ ವಿದ್ಯಾರ್ಥಿಗಳ ಪ್ರತಿಭೆಗಳನ್ನು ಗುರುತಿಸಿ ಉತ್ತೇಜನ ನೀಡುವ ಉದ್ದೇಶ ಹೊಂದಲಾಗಿದೆ. ಪ್ರತಿಯೊಬ್ಬ ಮಕ್ಕಳು ಈ ವೇದಿಕೆಯನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಎಡಿಪಿಐ ಮಲ್ಲಿಕಾರ್ಜುನಯ್ಯ, ಪಿಡಿಓ ರವಿ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನಾಗೇಂದ್ರ, ಗ್ರಾಮದ ಮುಖಂಡರಾದ ಪಟೇಲ್, ಗಂಗಾಧರ್, ನಾಡಗೌಡ, ತಮ್ಮಯ್ಯಪ್ಪ, ಮಾದಪ್ಪ, ಸಿದ್ದಾಚಾರಿ, ಮಧ್ವಾಚಾರಿ, ಅಕ್ಕಿ ಲಿಂಗರಾಜ್ ಸ್ವಾಮಿ ಮತ್ತಿತರರು ಹಾಜರಿದ್ದರು.

ಜ.28ರಂದು ವಿಜಯಪುರದ ಸಿದ್ದೇಶ್ವರ ಸ್ವಾಮೀಜಿಗೆ ನುಡಿನಮನ



ಮೈಸೂರು, ಜ.24(ಎಸ್‌ಪಿಎನ್)–ಶತಮಾನದ ಸಂತ, ವಿಜಯಪುರದ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಗೆ 'ನೆನಪುಗಳ ನುಡಿಮಲ್ಲಿಗೆ' ಕಾರ್ಯಕ್ರಮವನ್ನು ಜ.28ರಂದು ಸಂಜೆ 6 ಗಂಟೆಗೆ ನಿವೇದಿತನಗರದ ಎಸ್.ಆರ್.ಸುಬ್ಬರಾವ್ ಉದ್ಯಾನವನದಲ್ಲಿ ಆಯೋಜಿಸಲಾಗಿದೆ.

ವೀರವನಿತೆ ರಾಣಿಚೆನ್ನಮ್ಮ ಸ್ವಯಂ ಸೇವಾ ಸಂಘ, ಅನಿಕೇತನ ಸೇವಾ ಟ್ರಸ್ಟ್, ನಿವೇದಿತ ನಗರ, ಆನಂದನಗರ, ಸಿಎಫ್‌ಟಿಆರ್‌ಐ, ಶಾರದಾದೇವಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಶ್ರೀ ಬಸವೇಶ್ವರ ಸೇವಾಸಮಿತಿ, ವೀರಶೈವ ಸ್ನೇಹ ಬಳಗ, ಬಸವ ಬಳಗ ಸೇವಾ ಟ್ರಸ್ಟ್, ಬಿಇಎಂಎಲ್ ಬಸವ ಸಮಿತಿ, ಕದಳಿ ಮಹಿಳಾ ವೇದಿಕೆ, ಸ್ಪಂದನಾ ಮಹಿಳಾ ಬಳಗ ಹಾಗೂ ವಿವಿಧ ಸಂಘ–ಸಂಸ್ಥೆಗಳು ಮತ್ತು ಭಕ್ತವೃಂದದ ಸಹಭಾಗಿತ್ವದಲ್ಲಿ ನೆನಪುಗಳ ನುಡಿನಮನ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಹಾಗೂ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ, ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ಮಹಿಳಾ ಬರಹಗಾರ್ತಿ ಕುಸುಮಾ ಆಯರಹಳ್ಳಿ ಸೇರಿದಂತೆ ಇತರರು ನುಡಿನಮನ ಸಲ್ಲಿಸಲಿದ್ದಾರೆ. ಈ ವೇಳೆ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಹಾಲಿ ಹಾಗೂ ಮಾಜಿ ನಗರಪಾಲಿಕೆ ಸದಸ್ಯರು, ಜನಪ್ರತಿನಿಧಿಗಳು, ಸಮಾಜದ ಮುಖಂಡರು ಹಾಗೂ ಭಕ್ತವೃಂದ ಉಪಸ್ಥಿತರಿರುತ್ತಾರೆ ಎಂದು ನಿವಾಸಿಗಳಾದ ರೊ. ಆಯರಹಳ್ಳಿ ಪಿ.ವಿರೂಪಾಕ್ಷ, ಜೆ.ಎಸ್. ಜಗದೀಶ್, ಕೆ.ವಿ.ಮಲ್ಲೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನಪ್ರಿಯ ಕಾರ್ಯಕ್ರಮ ನೀಡಿಯೂ ಶಿಸ್ತು, ಸಂಘಟನೆ ಕೊರತೆಯಿಂದ ಕಾಂಗ್ರೆಸ್ ಸೋತಿತು

● ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಕಾರ್ಯಕರ್ತರಿಗೆ ಎಚ್ಚರಿಕೆ ● ಪ್ರಜಾಧ್ವನಿ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಕಾರ್ಯಕರ್ತರಿಗೆ ತರಾಟೆ

ಮೈಸೂರು, ಜ.24(ಎಂಕೆ)– ಸಂಘಟನೆ ಸರಿಯಿದ್ದರಷ್ಟೇ ರಾಜಕಾರಣದಲ್ಲಿ ಉಳಿಯಲು ಸಾಧ್ಯ. ಜನಪ್ರಿಯ ಕಾರ್ಯಕ್ರಮಗಳನ್ನು ನೀಡಿಯೂ ಕಾಂಗ್ರೆಸ್ ಸೋತಿದ್ದು, ಶಿಸ್ತು ಮತ್ತು ಸಂಘಟನೆಯ ಕೊರತೆಯಿಂದ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಹೇಳಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಚಿಕ್ಕಮಾನಿಕೇತನ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕೆ.ಆರ್.ಕ್ಷೇತ್ರದ ಕಾರ್ಯಕರ್ತರ ಸಭೆ ಹಾಗೂ ಜ.26ರಂದು ನಡೆಯುವ ಪ್ರಜಾಧ್ವನಿ ಸಮಾವೇಶದ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಜನಕಲ್ಯಾಣಕ್ಕೆ ಎಲ್ಲವನ್ನು ಕೊಟ್ಟಿದೆ. ಆದರೆ ಅದನ್ನೇಳುವ ಎದೆಗಾರಿಕೆ ಕಾರ್ಯಕರ್ತರಿಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರದ ಮಂತ್ರಿಗಳೇ ತಮ್ಮ ಕಾರ್ಯಕ್ರಮಗಳ ಬಗ್ಗೆ ಹೇಳಿಕೊಳ್ಳಲು ಹಿಂಜರಿಯುತ್ತಾರೆ. ಯಾಕೆಂದರೆ ಅವರ ಕೊಡುಗೆ ಏನೂ ಇಲ್ಲ. ಆದರೆ ಹಲವಾರು ಜನಪ್ರಿಯ ಕಾರ್ಯಕ್ರಮಗಳನ್ನು ನೀಡಿದರೂ ಜನರಿಗೆ ತಿಳಿಸಲಾಗದ ಸ್ಥಿತಿ ಕಾಂಗ್ರೆಸ್ ಕಾರ್ಯಕರ್ತರದ್ದಾಗಿದೆ. ಇದಕ್ಕೆ ಮುಖ್ಯ ಕಾರಣ ಅಶಿಸ್ತು. ಕಾಂಗ್ರೆಸ್ ಸೋತರೆ ಬಡವರು, ರೈತರು, ಕಾರ್ಮಿಕರಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರೂ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದಲ್ಲದೆ ಸಂಘಟನೆ ಮಾಡಬೇಕು ಎಂದು ಸೂಚಿಸಿದರು.



ವಿಧಾನಸಭಾ ಚುನಾವಣೆ ಸಮೀಪಿಸುತ್ತಿದೆ. ಇನ್ನೂ ಬೂತ್ ಕಮೀಟಿಗಳನ್ನು ಮಾಡಿಲ್ಲ. ನಮ್ಮ ಬೂತ್ ನಮ್ಮ ಜವಾಬ್ದಾರಿ ಎಂದು ಕೆಲಸ ಮಾಡದಿದ್ದರೆ, ಈಗಾಗಲೇ 13 ಲಕ್ಷ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಿರುವ ಬಿಜೆಪಿ, ಮುಂದಿನ ದಿನಗಳಲ್ಲಿಯೂ ಇದೇ ಕಾರ್ಯವನ್ನು ಮುಂದುವರೆಸಲಿದೆ. ಕಾಂಗ್ರೆಸ್ ಮತದಾರರು ಎಲ್ಲೂ ಮತ ನೀಡದಂತೆ ಮಾಡುತ್ತಾರೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ ಜಾತ್ಯಾತೀತ ಪಕ್ಷ: ಯಾವ ಧರ್ಮಕ್ಕೂ ಸೀಮಿತವಾಗದ ಕಾಂಗ್ರೆಸ್ ಜಾತ್ಯಾತೀತ ಪಕ್ಷ. 224 ವಿಧಾನಸಭಾ ಕ್ಷೇತ್ರಗಳಲ್ಲಿ ಮುಸ್ಲಿಂ ಹಾಗೂ ಕ್ರೈಸ್ತ ಸಮುದಾಯದ ಒಬ್ಬರಿಗೂ ಟಿಕೆಟ್ ನೀಡದ ಬಿಜೆಪಿ ಒಂದು ಧರ್ಮಕ್ಕೆ ಸೀಮಿತವಾಗಿದೆ ಎಂದು ಮನದಟ್ಟು ಮಾಡಿದರಲ್ಲದೆ ಜ.26ರಂದು ನಗರದ ಜೆ.ಕೆ.ಮೈದಾನದಲ್ಲಿ ನಡೆಯುವ ಪ್ರಜಾಧ್ವನಿ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರರಾದ ಲಕ್ಷ್ಮಣ್, ಹೆಚ್.ಎ.ವೆಂಕಟೇಶ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪಾಲಿಕೆ ಸದಸ್ಯರಾದ ಲೋಕೇಶ್ ಪಿಯಾ, ಜೆ.ಗೋಪಿ, ಶೋಭಾ ಸುನೀಲ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ವಿದ್ಯಾ, ಭವ್ಯ ಮತ್ತಿತರರಿದ್ದರು.

ಒಬ್ಬೊಬ್ಬ ಶಾಸಕರ ಮೇಲೂ ಕೋಟ್ಯಾಂತರ ರೂ. ಬಂಡವಾಳ ಹೂಡಿಕೆ....

ಕುತಂತ್ರದಿಂದ ಶಾಸಕರನ್ನು ಖರೀದಿಸಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಒಬ್ಬೊಬ್ಬ ಶಾಸಕರ ಮೇಲೂ ಕೋಟ್ಯಾಂತರ ಬಂಡವಾಳ ಹೂಡಿಕೆ ಮಾಡಿದೆ. ಹೂಡಿಕೆ ಬಂಡವಾಳವನ್ನು ವಾಪಸ್ ಪಡೆಯಲು ಯಾವ್ಯಾವ ಮೂಲೆಯಿಂದ ಸಾಧ್ಯವಿದೆಯೋ ಅಲ್ಲೆಲ್ಲವೂ ಹಣ ಹೊಡೆಯುತ್ತಿದ್ದಾರೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ದೂರಿದರು.

40 ಪರ್ಸೆಂಟ್ ಕಮಿಷನ್ ಸರ್ಕಾರದ ಆಡಳಿತದಲ್ಲಿ ಜೀವನ ನಡೆಸುವುದೇ ಕಷ್ಟವಾಗಿದೆ ಎಂದು ಜನರು ಹೇಳುತ್ತಾರೆ. ಬಿಜೆಪಿ ಪರವಾಗಿದ್ದರೆ ಈ ಬಾರಿ ಬದಲಾವಣೆ ಬಯಸಿದ್ದೇವೆ ಎನ್ನುತ್ತಿದ್ದಾರೆ. ಗ್ಯಾಸ್ ಖರೀದಿಸಲು 1100 ರೂ. ಜೋಡಿಸಲಾಗದೆ ಎಷ್ಟೋ ಜನ ಗ್ಯಾಸ್ ಬಳಸುವುದನ್ನೇ ಕಡಿಮೆ ಮಾಡಿದ್ದಾರೆ. ಇದೆಲ್ಲವನ್ನೂ ಕಾಂಗ್ರೆಸ್ ಕಾರ್ಯಕರ್ತರು ಜನರಿಗೆ ಅರ್ಥ ಮಾಡಿಸುವ ಮೂಲಕ ಸಂಘಟಿಸಬೇಕು ಎಂದು ಸಲಹೆ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಶಾಸಕ ನಾಗೇಂದ್ರರಿಂದ 4 ಕೋಟಿಗೂ ಅಧಿಕ ವೆಚ್ಚದ ಕಾಮಗಾರಿಗೆ ಚಾಲನೆ





ಮೈಸೂರು, ಜ.24(ಎಸ್‌ಬಿಡಿ)–ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ 4 ಕೋಟಿಗೂ ಹೆಚ್ಚು ಮೊತ್ತದ ವಿವಿಧ ಕಾಮಗಾರಿಗಳಿಗೆ ಮಂಗಳವಾರ ಚಾಲನೆ ಸಿಕ್ಕಿದೆ.

ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ, ಎಸ್‌ಎಫ್‌ಸಿ ಹಾಗೂ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಸೇರಿ ಒಟ್ಟು 4.32 ಕೋಟಿ ರೂ. ಅಂದಾಜು ಮೊತ್ತದಲ್ಲಿ 3,4 ಹಾಗೂ 5ನೇ ವಾರ್ಡ್‌ನಲ್ಲಿ ಹಲವು ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾರ್ಪೊರೇಟರ್‌ಗಳಾದ ಕೆ.ವಿ.ಶ್ರೀಧರ್, ಪೈಲ್ವಾನ್ ಶ್ರೀನಿವಾಸ್, ಉಷಾ, ಚಿಕ್ಕವೆಂಕಟು ಹಾಗೂ ಬಿಜೆಪಿ ಮುಖಂಡ ಆರ್ಟ್ಸ್ ರಾಮು ಅವರೊಂದಿಗೆ ಶಾಸಕ ಎಲ್.ನಾಗೇಂದ್ರ ಅವರು ಶಂಕು ಸ್ಥಾಪನೆ ನೆರವೇರಿಸಿದರು.

ಇದೇ ವೇಳೆ ಕುಂಬಾರಕೊಪ್ಪಲು ಮೇಗಲ ರಾಮಮಂದಿರದಲ್ಲಿ ಸುಮಾರು 53 ಫಲಾನುಭವಿಗಳಿಗೆ ವಿಧವಾ ವೇತನ, ಸಂಧ್ಯಾ ಸುರಕ್ಷಾ, ವಿಕಲ ಚೇತನರ ಪಿಂಚಣಿ ಆದೇಶ ಪತ್ರ ಹಾಗೂ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಣೆ ಮಾಡಿದರು.

ಬಿಜೆಪಿ ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪುನೀತ್‌ಗೌಡ, ವಾರ್ಡ್ ಅಧ್ಯಕ್ಷರಾದ ಶ್ರೀನಾಥ್, ರಾಮೇಗೌಡ, ನರಸಿಂಹ, ಆರಾಧನಾ ಸಮಿತಿ ಸದಸ್ಯ ಭೈರಪ್ಪ, ರೈತ ಮೋರ್ಚಾ ಅಧ್ಯಕ್ಷ ಎಂ.ಕುಮಾರ್, ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಲಿಂಗರಾಜು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ರಾಮಕೃಷ್ಣ, ಮಹಿಳಾ ಮೋರ್ಚಾ ಅಧ್ಯಕ್ಷೆ ತನುಜಾ, ಮಹಿಳಾ ಮೋರ್ಚಾ ಪುಷ್ಪ, ಮಹದೇಶ್ವರ ಬಡಾವಣೆಯ ಮಾದೇಶ್, ಶಿವರಾಂ, ಗೋಪಿ, ನೀಲಕಂಠ, ಸತೀಶ್, ಸೀನ ಗೋಲ್ಡ್, ಪ್ರತಾಪ್, ಕೀರ್ತಿ, ಸತೀಶ್ ಚಂದ್ರ, ಅಭಿಲಾಷ್, ಅವಿನಾಶ್, ಶೋಭಾ, ಪದ್ಮಶ್ರೀ, ಪದ್ಮ, ಪ್ರೇಮ, ಯಮುನ, ಸುನೀತ, ನಾಗರತ್ನ, ಲೋಕನಾಯಕ ನಗರದ ದಿನೇಶ್, ಮಹೇಂದ್ರ, ಅರುಣ್, ಶ್ರೀನಿವಾಸಗೌಡ, ಅವದೇವ್ ಸಿಂಗ್, ದೇವೇಗೌಡ, ಆಟೋ ಚಂದ್ರು, ಸಿ.ಎಂ. ಕೃಷ್ಣ, ಬಸವರಾಜು, ಮಹೇಶ್, ಬೋರೇಗೌಡ, ಪಳನಿ, ಕೃಷ್ಣಪ್ಪ, ಕುಂಬಾರ ಕೊಪ್ಪಲಿನ ದಳಪತಿ ರಾಮೇಗೌಡರು, ಬಸವೇಗೌಡರು, ನರಸಿಂಹ, ಅಶ್ವಥ, ಪ್ರಮೋದ್, ನವೀನ, ಮಾಜಿ ಕಾರ್ಪೊರೇಟರ್ ಜಯರಾಮ್, ರಮೇಶ್, ರಾಮು, ಮೈಕ್ ಭೈರಪ್ಪ, ಪ್ರವೀಣ್, ಮೋಹನ್, ಉಪ ತಹಸೀಲ್ದಾರ್ ಶ್ರೀಮತಿ ರೂಪ, ರಾಜಸ್ವ ನಿರೀಕ್ಷಕ ಮಹೇಂದ್ರ, ಪಾಲಿಕೆ ಕಾರ್ಯಪಾಲಕ ಇಂಜಿನಿಯರ್ ಮಧುಸೂಧನ್, ಅಭಿವೃದ್ಧಿ ಅಧಿಕಾರಿ ಮನು ಗೌಡ, ಇಂಜಿನಿಯರ್‌ಗಳಾದ ಅಶ್ವಿನಿ, ಅರ್ಚನಾ, ಗುತ್ತಿಗೆದಾರರಾದ ಅಶೋಕ್ ಗೋವಿಂದೇಗೌಡ ಹಾಗೂ ಹರ್ಷ ಮತ್ತಿತರರು ಉಪಸ್ಥಿತರಿದ್ದರು.

ಕಾಮಗಾರಿ ವಿವರ: ರೈಲ್ವೆ ಬಡಾವಣೆ ರೈಲ್ವೆ ಪಾರ್ಕ್ ಪಕ್ಕ ಹಾಗೂ ಮಹದೇಶ್ವರನಗರದ ರಸ್ತೆಗಳ ಅಭಿವೃದ್ಧಿ, ಶ್ರೀನಿವಾಸ್ ಸ್ಟೀಲ್‌ನಿಂದ ರಿಂಗ್ ರಸ್ತೆ ಸರ್ವಿಸ್ ರಸ್ತೆ ಸಂಪರ್ಕಿಸುವ ನಂದಿ ಸ್ಟೋರ್ ಬಳಿ ರಸ್ತೆ, ಲೋಕನಾಯಕನಗರದ ಅಡ್ಡರಸ್ತೆಗಳು, ಬೈರವೇಶ್ವರನಗರ ಹಾಗೂ ಬಸವೇಶ್ವರ ನಗರದ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳು, ನಿಂಗಯ್ಯನಕೆರೆ ಕಾಲೋನಿ ರಸ್ತೆಗಳು, ನಿಂಗಯ್ಯನಕೆರೆಯಿಂದ 60 ಅಡಿ ರಸ್ತೆ ಕಡೆಗಿರುವ ದೊಡ್ಡ ಮಳೆನೀರು ಚರಂಡಿ ಅಭಿವೃದ್ಧಿ ಕಾಮಗಾರಿ, ಕುಂಬಾರಕೊಪ್ಪಲು ಗ್ರಾಮಾಭ್ಯುದಯ ಸಂಘಕ್ಕೆ ಸೇರಿದ ರಾಮಮಂದಿರದ ಸಮಗ್ರ ಜೀರ್ಣೋದ್ಧಾರ ಸೇರಿದಂತೆ ಅನೇಕ ಕಾಮಗಾರಿಗಳಿಗೆ ಚಾಲನೆ ಸಿಕ್ಕಿದೆ.

ಮುಡಾ ಅದಾಲತ್‌ನಲ್ಲಿ 60ರಲ್ಲಿ 40 ಅಹವಾಲಿಗೆ ಸ್ಥಳದಲ್ಲೇ ಪರಿಹಾರ

ಮೈಸೂರು, ಜ.24(ಎಂಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಅಧ್ಯಕ್ಷರ ಕಚೇರಿ ಸಭಾಂಗಣದಲ್ಲಿ ನಡೆದ 'ಮುಡಾ ಅದಾಲತ್'ನಲ್ಲಿ ಸುಮಾರು 40 ಮಂದಿ ನಾಗರಿಕರಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಲಾಯಿತು. ಮಳೆಯಿಂದಾಗಿ ಅಧ್ಯಕ್ಷರ ಕಚೇರಿ ಸಭಾಂಗಣದಲ್ಲಿ ನಡೆದ 'ಮುಡಾ ಅದಾಲತ್'ನಲ್ಲಿ ಟೋಕನ್ ಪಡೆದು ಖಾತೆ ಬದಲಾವಣೆ, ಹಕ್ಕುಪತ್ರ, ಸ್ವಾಧೀನ ಪತ್ರ, ಪೌತಿ ಖಾತೆ ವರ್ಗಾವಣೆ, ಬದಲಿ ನಿವೇಶನ ಕೋರಿ ಅರ್ಜಿ ಸಲ್ಲಿಸಿದ 60 ಜನರಲ್ಲಿ 40 ಮಂದಿ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲಾಯಿತು.



ನಾನಾ ಸಮಸ್ಯೆಗಳು, ಅಲೆದಾಟ: 'ಜಮೀನು ಸ್ವಾಧೀನಕ್ಕೆ ಪಡೆದು 20x30 ನಿವೇಶನ ಹಾಗೂ 12 ಸಾವಿರ ಪರಿಹಾರವನ್ನು ನೀಡುವುದಾಗಿ ಹೇಳಿತ್ತು. ಅದು ಕೂಡ ದಾಯಾದಿಗಳ ಪಾಲಾಗಿದ್ದು, ನಮಗೆ ಏನೂ ಸಿಕ್ಕಿಲ್ಲ. 2008ರಿಂದಲೂ ಕಚೇರಿಗೆ ಅಲೆಯುತ್ತಿದ್ದೇವೆ ಎಂದು ಹೆಬ್ಬಾಳದ ಮಂಗಳಮ್ಮ ಅಳಲು ತೋಡಿಕೊಂಡರು. ಕೆ.ಆರ್.ಮೊಹಲ್ಲಾದ ಕೆ.ವಿಜಯಲಕ್ಷ್ಮಿ ಎಂಬುವರು, ಕೆ.ಆರ್.ಮೊಹಲ್ಲಾದಲ್ಲಿ 2 ನಿವೇಶನವಿದ್ದು, ಒಂದೇ ಖಾತೆ ಮಾಡಿ ಕೊಡುವಂತೆ ಕಳೆದ 6 ತಿಂಗಳಿಂದ ಅಲೆಯುತ್ತಿದ್ದೇನೆ. ಪಾಲಿಕೆಯವರು ಮುಡಾದಲ್ಲಿ ವಿಚಾರಿಸಿ ಎಂದರೆ, ಮುಡಾದವರು ಪಾಲಿಕೆಗೆ ಹೋಗಿ ಎಂದು ಅಲೆದಾಡಿಸುತ್ತಿದ್ದಾರೆ. ದಯವಿಟ್ಟು ಇಲ್ಲಿ ಆಗುವುದಿಲ್ಲವೆಂಬ ಪತ್ರವನ್ನಾದರೂ ಕೊಡಿ ಎಂದು ಕೋರಿದರು.

ಬೇರೊಬ್ಬರಿಗೆ ಖಾತೆಯಾಗಿದೆ: 50x30 ನಿವೇಶನಕ್ಕೆ 1992ರಲ್ಲಿಯೇ ಅರ್ಜಿ ಸಲ್ಲಿಸಲಾಗಿತ್ತು. ಆರ್.ಟಿ.ನಗರದಲ್ಲಿ ನಿವೇಶನವೂ ಮಂಜೂರಾಗಿತ್ತು. ಹಣವನ್ನು ಕಟ್ಟಲಾಗಿದೆ. ಆದರೆ, ಖಾತೆ ಮಾತ್ರ ಮಾಡಿಕೊಟ್ಟಿಲ್ಲ. ನಿವೇಶನವನ್ನು(ನಿವೇಶನಸಂಖ್ಯೆ 959)ಬೇರೊಬ್ಬರಿಗೆ ಖಾತೆ ಮಾಡಿಕೊಟ್ಟಿದ್ದಾರೆ ಎಂದು ಪಾರ್ವತಿ ಎಂಬುವರು ದೂರಿದರು.

ಚರಂಡಿ ಕಟ್ಟಿದೆ: ಫೈಜಾನ್ ಖಾನ್ ಎಂಬುವರು, ರಾಜೀವ್ ನಗರದ 3ನೇ ಹಂತದಲ್ಲಿ ಕಟ್ಟಿಸಿರುವ ಮನೆಗೆ ತಿಂಗಳಲ್ಲೇ ಗೃಹ ಪ್ರವೇಶ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಆದರೆ, ಮನೆ ಎದುರಿನ ಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಮ್ಯಾನ್‌ಹೋಲ್ ಮುಚ್ಚಳವಿಲ್ಲದೆ ಕಸವು ತುಂಬಿದೆ. ವಿದ್ಯುತ್ ಸಂಪರ್ಕವನ್ನೂ ನೀಡಿಲ್ಲ ಎಂಬ ದೂರಿಗೆ ಪ್ರತಿಕ್ರಿಯಿಸಿದ ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ನಾಳೆಯೇ ಸ್ಥಳಕ್ಕೆ ತೆರಳಿ ಕ್ರಮವಹಿಸಬೇಕು ಎಂದು ಎಇಇ ರಾಜೇಂದ್ರ ಅವರಿಗೆ ಆಯುಕ್ತ ಸೂಚಿಸಿದರು.

ಸಮಸ್ಯೆಗಳಿಗೆ ಸೂಕ್ತ ಪರಿಹಾರ: ಬಳಿಕ ಮಾತನಾಡಿದ ಅಧ್ಯಕ್ಷ ಯಶಸ್ವಿ ಎಸ್ ಸೋಮಶೇಖರ್, 'ಮುಡಾ ಅದಾಲತ್'ಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಈಗಾಗಲೇ ಮೊದಲ 'ಮುಡಾ ಅದಾಲತ್'ನಲ್ಲಿ ಅರ್ಜಿ ಸಲ್ಲಿಸಿದವರ ಬಹುತೇಕ ಸಮಸ್ಯೆಗಳನ್ನು ಪರಿಹರಿಸಲಾಗಿದೆ. 2ನೇ ಮುಡಾ ಅದಾಲತ್‌ನಲ್ಲಿ ಮಳೆಯಿಂದಾಗಿ ಸುಮಾರು 60 ಮಂದಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ದೊರೆತಿದ್ದು, ಅವರಲ್ಲಿ ಸುಮಾರು 40 ಮಂದಿ ಸಮಸ್ಯೆಗೆ ಸ್ಥಳದಲ್ಲೇ ಸ್ಪಂದಿಸಲಾಗಿದೆ. ಮುಡಾ ಅಧಿಕಾರಿಗಳು ಕೂಡ 'ಮುಡಾ ಅದಾಲತ್'ನಲ್ಲಿ ಉತ್ಸುಕತೆಯಿಂದ ಭಾಗವಹಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಡಾ ಕಾರ್ಯದರ್ಶಿ ಎನ್.ಸಿ. ವೆಂಕಟರಾಜು, ಸೂಪರಿಂಟೆಂಡೆಂಟ್ ಇಂಜಿನಿಯರ್ ಚೆನ್ನಕೇಶವ, ಸದಸ್ಯರಾದ ಲಕ್ಷ್ಮಿ ದೇವಿ, ನವೀನ್ ಕುಮಾರ್, ಯೋಜನಾಧಿಕಾರಿ ಶೇಷ, ಮುಖ್ಯ ಲೆಕ್ಕಾ ಪರಿಶೋಧಕ ಅಧಿಕಾರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬೂತ್ ಮಟ್ಟದ ಪದಾಧಿಕಾರಿಗಳ ನೇಮಕ ಅಭಿಯಾನಕ್ಕೆ ಮರೀಗೌಡರು ಚಾಲನೆ



ಮೈಸೂರು, ಜ.24(ಎಸ್‌ಬಿಡಿ)– ಮುಂಬರುವ ವಿಧಾನಸಭಾ ಚುನಾವಣೆಗೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆಗೆ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಬೂತ್ ಮಟ್ಟದ ಪದಾಧಿಕಾರಿಗಳ ನೇಮಕ ಅಭಿಯಾನಕ್ಕೆ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಚಾಲನೆ ನೀಡಿದ್ದಾರೆ.

ರಮಾಬಾಯಿನಗರದ ಬೂತ್ ಸಂಖ್ಯೆ 271ರಲ್ಲಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಒಟ್ಟು 337 ಬೂತ್‌ಗಳಿವೆ. ಪ್ರತಿ ಬೂತ್‌ಗೆ 13 ಸದಸ್ಯರ ಸಮಿತಿ, ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಹಾಗೂ ಒಬ್ಬರು ಬಿಎಲ್‌ಎ 2 ಸೇರಿದಂತೆ ಒಟ್ಟು 4718 ಮಂದಿಯನ್ನು ನಿಯೋಜಿಸಲಾಗುವುದು ಎಂದು ತಿಳಿಸಿದರು. ಚುನಾವಣೆಯಲ್ಲಿ ಬೂತ್ ಮಟ್ಟದ ಪದಾಧಿಕಾರಿಗಳ ಜವಾಬ್ದಾರಿ ಮಹತ್ವದ್ದಾಗಿದೆ. ಪಕ್ಷದ ಗೆಲುವು ನಿಮ್ಮ ಕೈಯ್ಯಲ್ಲಿದೆ. ಪ್ರತಿ ಮನೆಗೆ ಭೇಟಿ ನೀಡಿ, ಮತ ಗಳಿಸುವ ಸಾಮರ್ಥ್ಯ ನಿಮಗಿದೆ. ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತ, ಸಿದ್ದರಾಮಯ್ಯನವರ ಆಡಳಿತಾವಧಿಯ ಜನಪರ ಕಾರ್ಯಕ್ರಮಗಳ ಬಗ್ಗೆ ಜನರಿಗೆ ತಿಳಿಸುವುದರ ಜೊತೆಗೆ ಕೇಂದ್ರ ಹಾಗೂ ರಾಜ್ಯದಲ್ಲಿರುವ ಬಿಜೆಪಿ ಸರ್ಕಾರದ ದುರಾಡಳಿತ, ಜನವಿರೋಧಿ ನೀತಿ, ಭ್ರಷ್ಟಾಚಾರ, ಉದ್ಯೋಗ ನೇಮಕಾತಿಯಲ್ಲಿನ ಅಕ್ರಮ, ಚಾಮುಂಡೇಶ್ವರಿ ಕ್ಷೇತ್ರದಲ್ಲೂ ಹಾಲಿ ಶಾಸಕರ ನಿರ್ಲಕ್ಷ್ಯದಿಂದ ಅಭಿವೃದ್ಧಿ ಕುಂಠಿತವಾಗಿರುವುದನ್ನು ಜನರಿಗೆ ಮನದಟ್ಟು ಮಾಡಿ. ಪಕ್ಷದ ಸೇನಾನಿಗಳಾಗಿ ತಮ್ಮ ಬೂತ್ ಮಟ್ಟದಲ್ಲಿ ಪಕ್ಷವನ್ನು ಸದೃಢಗೊಳಿಸಿ. ಆ ಮೂಲಕ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಕಂಕಣ ಬದ್ಧರಾಗಿ ಎಂದು ಸಲಹೆ ನೀಡಿದರು.

ಇದೇ ವೇಳೆ ರಮಾಬಾಯಿನಗರದ ಬೂತ್ ಮಟ್ಟದ ಸದಸ್ಯರುಗಳಿಗೆ ಗುರುತಿನ ಚೀಟಿ ನೀಡಿರುವ ಮುಖಂಡ ಶಿವಕುಮಾರ್ ಹಾಗೂ ತಂಡದವರಿಗೆ ಅಭಿನಂದಿಸಿದರು. ಮುಖಂಡರಾದ ಮಲ್ಲೇಶ, ಚಿನ್ನಸ್ವಾಮಿ, ಸಿದ್ದಪ್ಪ, ಸಿದ್ದರಾಜು, ಅಣ್ಣಪ್ಪ, ಸೋಮಣ್ಣ, ಗೌರಮ್ಮ, ಲಿಂಗಮನಿ, ಸಫಿವುಲ್ಲಾ, ಕಾಮನಕೊಪ್ಪಲು ಸ್ವಾಮಿ, ಸುರೇಶ, ಹಿನಕಲ್ ಮಂಜು ಮತ್ತಿತರರು ಉಪಸ್ಥಿತರಿದ್ದರು.

ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮಹಾರಾಜ ಕಾಲೇಜು ಎನ್‌ಸಿಸಿ ವಿದ್ಯಾರ್ಥಿಗಳು ಭಾಗಿ

ಮೈಸೂರು, ಜ.24– ಮೈಸೂರಿನ ಮಹಾರಾಜ ಪದವಿ ಕಾಲೇಜು ಎನ್‌ಸಿಸಿ ವಿದ್ಯಾರ್ಥಿಗಳಾದ ವೇದಪ್ರದ ಹಾಗೂ ಮಹೇಂದ್ರ(ತೃತೀಯ ಬಿಎ) ನವದೆಹಲಿಯಲ್ಲಿ ನಡೆಯಲಿರುವ 74ನೇ ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆಯಾಗಿದ್ದು, ಕಾಲೇಜಿನ ಪ್ರಾಂಶುಪಾಲ ಪ್ರೊ. ಸಿ.ಎ.ಶ್ರೀಧರ ಹಾಗೂ ಎನ್‌ಸಿಸಿ ಅಧಿಕಾರಿ ಕ್ಯಾಪ್ಟನ್ ಡಾ.ದಿವಾಕರ್ ಚ್ಯಾಂಡಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ವಿಶೇಷ ಉಪನ್ಯಾಸ

ಮೈಸೂರು, ಜ.24– ಗಣರಾಜ್ಯೋತ್ಸವ ಪ್ರಯುಕ್ತ ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನದ ಸಹಯೋಗದೊಂದಿಗೆ ಮೈಸೂರಿನ ಇಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಅಂದು(ಜ.26) ಸಂಜೆ 5ಕ್ಕೆ ವಿಶೇಷ ಉಪನ್ಯಾಸ ಆಯೋಜಿಸಿದ್ದು, ಮಾನಸಗಂಗೋತ್ರಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಕೃಷ್ಣ ಹೊಂಬಾಳ್ 'ಭಾರತ ಸಂವಿಧಾನದ ಆಶಯಗಳು' ಕುರಿತು ಉಪನ್ಯಾಸ ನೀಡಲಿದ್ದಾರೆ. ಸಂಸದ ವಿ.ಶ್ರೀನಿವಾಸ ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪಕ್ಷದ ವರಿಷ್ಠರ ನಿರ್ಧಾರ ಪಾಲಿಸುವೆ

ಬೆಂಗಳೂರು: ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ವಿಚಾರದಲ್ಲಿ ಪಕ್ಷದ ವರಿಷ್ಠರು ನಿರ್ಧಾರವನ್ನು ಪಾಲಿಸುವೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.



ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷ ಟಿಕೆಟ್ ನೀಡಿದರೆ ಮತ್ತೆ ಚುನಾವಣೆಗೆ ಸ್ಪರ್ಧಿಸುವೆ. ಇಲ್ಲದಿದ್ದರೆ ಸಂಘಟನೆಯ ಕೆಲಸ ಮಾಡುವೆ ಎಂದರು. ಐದು ಬಾರಿ ಚುನಾವಣೆಯಲ್ಲಿ ಸೋತಿದ್ದೇನೆ. ನಾಲ್ಕು ಬಾರಿ ಗೆದ್ದಿದ್ದೇನೆ. ಗೆದ್ದಾಗ ಹಿಗ್ಗಿಲ್ಲ, ಸೋತಾಗ ಕುಗ್ಗಿಲ್ಲ. ಪ್ರಾಮಾಣಿಕವಾಗಿ ಸಂಘಟನೆಯ ಕೆಲಸ ಮಾಡಿಕೊಂಡು ಬಂದಿದ್ದೇನೆ ಎಂದರು.

ಸ್ಯಾಂಟ್ರೋ ರವಿ ಪ್ರಕರಣದಲ್ಲಿ ತಮ್ಮ ಪಾತ್ರ ಏನೂ ಇಲ್ಲ. ಆತನಿಗೂ ತಮಗೂ ಯಾವುದೇ ಸಂಬಂಧವಿಲ್ಲ. ನಿಷ್ಪಕ್ಷಪಾತವಾಗಿ ತನಿಖೆ ನಡೆದು ಎಲ್ಲ ಸತ್ಯ ಹೊರಬರಲಿ ಎಂದು ಪ್ರಕರಣ ಸಿಐಡಿಗೆ ವರ್ಗಾವಣೆ ಮಾಡಲಾಗಿದೆ ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು.

ಫ್ಲೈ ಓವರ್‌ನಿಂದ ನೋಟಿನ ಮಳೆ ಸುರಿಸಿದ ವ್ಯಕ್ತಿ; ಹಣ ಪಡೆಯಲು ಮುಗಿಬಿದ್ದ ಜನ

ಬೆಂಗಳೂರು: ಬೆಂಗಳೂರಿನಲ್ಲಿ ಮಂಗಳವಾರ ಬೆಳಗ್ಗೆ ಕೆಆರ್ ಮಾರುಕಟ್ಟೆ ಫ್ಲೈಓವರ್‌ನಿಂದ ಹಣದ ಮಳೆ ಸುರಿದಿದ್ದು, ಹತ್ತು ರೂ. ನೋಟುಗಳ ಈ ಮಳೆಯಿಂದ ಜನರು ಆಶ್ಚರ್ಯಚಕಿತರಾದರೆ ಕೆಲವರು ಹಣವನ್ನು ಆಯ್ದುಕೊಳ್ಳಲು ಪೇಚಾಡಿದ್ದಾರೆ. ಹೋಂಡಾ ಆಕ್ಟಿವಾ ಸ್ಕೂಟಿಯಲ್ಲಿ ಬಂದಿದ್ದ ವ್ಯಕ್ತಿಯೊಬ್ಬ ಮಾರ್ಕೆಟ್ ಫ್ಲೈ ಓವರ್ ಮೇಲಿಂದ ಹಣವನ್ನು ತೂರಿದ್ದಾನೆ. ಫ್ಲೈಓವರ್‌ನ ಎರಡೂ ಬದಿಯಲ್ಲಿ ಹಣ ಎರಚಿದ್ದಾನೆ.



ಆಗಸದಿಂದ ನೋಟುಗಳು ಕೆಳಗೆ ಬೀಳುತ್ತಿರುವುದನ್ನು ನೋಡಿದ ಜನ ಹಿಂದೆ ಮುಂದೆ ನೋಡದೇ ಅದನ್ನು ಆಯ್ದುಕೊಳ್ಳಲು ಮುಂದಾಗಿದ್ದಾರೆ. ವ್ಯಕ್ತಿಯ ವರ್ತನೆಯಿಂದ ಕೆಳಗೆ ಮಾತ್ರವಲ್ಲದೇ ಫ್ಲೈ ಓವರ್ ಮೇಲೂ ಕೆಲ ಕಾಲ ಟ್ರಾಫಿಕ್ ಜಾಮ್ ಉಂಟಾಗಿತ್ತು. ಹಣವನ್ನು ಎರಚಿದ ಬಳಿಕ ವ್ಯಕ್ತಿ ತನ್ನ ಹೋಂಡಾ ಆಕ್ಟೀವಾ ಗಾಡಿ ಹತ್ತಿ ಅಲ್ಲಿಂದ ಹೊರಟಿದ್ದಾನೆ. ಈ ವ್ಯಕ್ತಿ ಹಣ ಎರಚುತ್ತಿರುವ ವಿಡಿಯೋಗಳು ವ್ಯಾಪಕ ವೈರಲ್ ಆಗಿದೆ.

ಯಾರು ಈ ವ್ಯಕ್ತಿ: ಸೂಟು ಬೂಟು.. ಕತ್ತಲ್ಲಿ ಗಡಿಯಾರ.. ಕೈಯಲ್ಲಿ ಗರಿ ಗರಿ ನೋಟು.. ಬೇಕಾಬಿಟ್ಟಿ ಹಣ ಎಸೆದು ಹೋದ ವ್ಯಕ್ತಿ ಇವೆಂಟ್ ಪ್ಲಾನರ್ ಆಗಿರುವ ಅರುಣ್. ಬೆಂಗಳೂರಿನ ನಾಗರಬಾವಿಯ ನಿವಾಸಿ ಅರುಣ್ ವಿ ಡಾಟ್ 9 ಇವೆಂಟ್‌ನ ಸಿಇಓ ಆಗಿದ್ದಾರೆ. ಹಣ ಎಸೆದು ಹೋದ ಕೆಲವೇ ಗಂಟೆಯಲ್ಲಿ ಅವರನ್ನು ಕೆ.ಆರ್.ಮಾರ್ಕೆಟ್ ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸಿದ್ದಾರೆ.

ಆರ್‌ಎಸ್‌ಎಸ್‌ನಿಂದ ಬಡವರಿಗೆ ರಗ್ಗು, ಜಮ್ಖಾನಾ ವಿತರಣೆ

ಮೈಸೂರು, ಜ.24(ಎಸ್‌ಪಿಎನ್)– ರಾಷ್ಟ್ರೀಯ ವಿಪತ್ತು, ಸಮಾಜದಲ್ಲಿ ನೊಂದವರ ನೆರವಿಗೆ ತುರ್ತಾಗಿ ಧಾವಿಸುವ ಆರ್‌ಎಸ್‌ಎಸ್ ಕಾರ್ಯಕರ್ತರ ನಿಸ್ವಾರ್ಥ ಸೇವೆಯನ್ನು ಜನ ಸಾಮಾನ್ಯರು ಗುರುತಿಸಬೇಕು ಎಂದು ಆರ್‌ಎಸ್‌ಎಸ್ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಣಿ ಸದಸ್ಯ ಮಾ.ವೆಂಕಟರಾಮ್ ತಿಳಿಸಿದರು.



ಮೈಸೂರು ಯಾದವಗಿರಿಯ ಗುಜರಾತಿ ಸಮಾಜದ ಸಭಾಂಗಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವತಿಯಿಂದ ಬಡವರಿಗೆ ರಗ್ಗು ಮತ್ತು ಜಮ್ಖಾನಾ ವಿತರಿಸಿ ಮಾತನಾಡಿದರು. ಜನ ಸಾಮಾನ್ಯರ ನೋವುಗಳಿಗೆ ಸ್ಪಂದಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ನಿರಪೇಕ್ಷಿತ ಸೇವಾ ಗುಣಗಳನ್ನು ಅಳವಡಿಸಿಕೊಳ್ಳುವಂತೆ ಆರ್‌ಎಸ್‌ಎಸ್ ಕಾರ್ಯಕರ್ತರಿಗೆ ತರಬೇತಿ ನೀಡಲಾಗುತ್ತಿದೆ. ಅವರ ಸೇವೆಯಲ್ಲಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಸೇವಾ ಗುಣಗಳಿವೆ. ಸಮಾಜದಲ್ಲಿ ನೊಂದವರನ್ನು ಗುರುತಿಸಿ, ತಕ್ಷಣ ಅವರ ನೆರವಿಗೆ ಧಾವಿಸುತ್ತಾರೆ ಎಂದು ತಿಳಿಸಿದರು.

ಆರ್‌ಎಸ್‌ಎಸ್ ಅನಾದಿ ಕಾಲದಿಂದಲೂ ಯುವಕರಲ್ಲಿ ದೇಶಭಕ್ತಿ, ಮಾತೃ ಪ್ರೇಮ, ಗುರು ಹಿರಿಯರಿಗೆ ಭಕ್ತಿ–ಭಾವದಿಂದ ನಡೆದುಕೊಳ್ಳುವ ಗುಣಗಳನ್ನು ಅಳವಡಿಸಿಕೊಳ್ಳುವಂತೆ ಅರಿವು ಮೂಡಿಸುತ್ತಿದೆ. ನಾವು ನಮಗಾಗಿ ಬದುಕುವುದಕ್ಕಿಂತ ಬೇರೆಯವರ ನೋವಿಗೆ ಸ್ಪಂದಿಸುವುದನ್ನು ಸಂಘ ತನ್ನ ಕಾರ್ಯಕರ್ತರಿಗೆ ಕಲಿಸುತ್ತದೆ ಎಂದರು.

ಚಳಿಗಾಲದಲ್ಲಿ ಬಡವರಿಗೆ ರಗ್ಗು ಮತ್ತು ಜಮ್ಖಾನಾ ವಿತರಿಸಲು ನಮ್ಮ ಕಾರ್ಯಕರ್ತರು ಸಿದ್ಧತೆ ಮಾಡಿಕೊಂಡಿದ್ದರು. ಅದನ್ನು ಯಾರಿಗೆ ವಿತರಿಸಬೇಕು ಎಂಬ ವಿಚಾರದಲ್ಲಿ ಸ್ವಲ್ಪ ಗೊಂದಲದಲ್ಲಿದ್ದರು. ಇದೀಗ ಸ್ಥಳೀಯ ಕಾರ್ಯಕರ್ತರ ನೆರವಿನಿಂದ ಸಾವಿರಕ್ಕೂ ಹೆಚ್ಚು ಬಡವರನ್ನು ಗುರುತಿಸಿ, ವಿತರಣೆ ಮಾಡಲಾಗುತ್ತಿದೆ. ಈಗಾಗಲೇ ಮೈಸೂರು, ಬೆಂಗಳೂರು, ಹುಬ್ಬಳ್ಳಿ–ಧಾರವಾಡ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಸೇವಾ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಅಲ್ಲದೆ, ದೇಶದ ವಿವಿಧ ರಾಜ್ಯಗಳಲ್ಲೂ ಚಳಿಗಾಲ ವಿಪರೀತವಾಗಿರುವುದರಿಂದ ಬಡವರಿಗೆ ರಗ್ಗು ಮತ್ತು ಜಮ್ಖಾನಾ ವಿತರಿಸಲಾಗುತ್ತಿದೆ. ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಔಷಧಿ ವಿತರಣೆ ಮಾಡಲಾಗಿದೆ. ಬೇರೆ ಯಾವುದೇ ನೆರವಿಗೆ ನಮ್ಮ ಸಂಘದ ಕಾರ್ಯಕರ್ತರನ ಸಂಪರ್ಕದಲ್ಲಿದ್ದುಕೊಂಡು ವೈದ್ಯರ ಸಲಹಾ ಚೀಟಿ ಕೊಟ್ಟರೆ ನಿಮಗೆ ಬೇಕಾದ ಔಷಧಿ ಮಾತ್ರೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಎಲ್ಲಾ ವರ್ಗದ ಜನರಿಗೂ ತನ್ನ ಸೇವೆ ಕಲ್ಪಿಸುವುದೇ ಆರ್‌ಎಸ್‌ಎಸ್ ಗುರಿಯಾಗಿದೆ. ಇಲ್ಲಿ ಸೇರಿರುವ ಮಹಿಳೆಯರು ಸೇರಿದಂತೆ ನಾವೆಲ್ಲ ಹಿಂದುಗಳು, ನಾವೆಲ್ಲ ಬಂಧುಗಳು ನಿಮ್ಮ ಕಷ್ಟ–ಸುಖದಲ್ಲಿ ಭಾಗಿಯಾಗುವುದು ಸಂಘದ ಧ್ಯೇಯೋದ್ದೇಶ ಎಂದು ತಿಳಿಸಿದರು. ಆರ್‌ಎಸ್‌ಎಸ್ ಮೈಸೂರು ವಿಭಾಗ ಸಂಘ ಚಾಲಕರಾದ ಡಾ.ವಾಮನರಾವ್ ಬಾಪಟ್ ಮಾತನಾಡಿ, ಸ್ವಯಂ ಸೇವಕರು ಸೇವೆಯಲ್ಲಿ ಭಗವಂತನನ್ನು ಕಾಣಬೇಕು. ಸಮಾಜದಲ್ಲಿ ನೊಂದವರ ನೆರವಿಗೆ ಧಾವಿಸುವ ಗುಣವನ್ನು ಪ್ರತಿಯೊಬ್ಬ ಕಾರ್ಯಕರ್ತರು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಈ ವೇಳೆ ಸಾವಿರಾರು ಮಹಿಳೆಯರಿಗೆ ರಗ್ಗು ಮತ್ತು ಜಮ್ಖಾನಾ ವಿತರಿಸಲಾಯಿತು. ವೇದಿಕೆಯಲ್ಲಿ ಆರ್‌ಎಸ್‌ಎಸ್ ಮುಖಂಡ ಕೇಶವ ಪ್ರಸಾದ್, ಶಾಸಕ ಎಲ್.ನಾಗೇಂದ್ರ, ಸಂಘದ ಕಾರ್ಯಕರ್ತರಾದ ಗಿರೀಶ್, ಉಮೇಶ್ ಉಪಸ್ಥಿತರಿದ್ದರು.

ಬೆಂಬಲ ಬೆಲೆಯಡಿ ರಾಗಿ, ಭತ್ತ ಖರೀದಿ ಕೇಂದ್ರ ಆರಂಭ

ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಜಿ.ಟಿ.ದೇವೇಗೌಡರಿಂದ ಉದ್ಘಾಟನೆ

ಮೈಸೂರು, ಜ.24(ಜಿಎ)– ಭತ್ತ ಮತ್ತು ರಾಗಿ ಖರೀದಿ ಕೇಂದ್ರಗಳಿಂದ ಕಷ್ಟ ಕಾಲದಲ್ಲಿರುವ ರೈತರಿಗೆ ಒಳ್ಳೆತಾಗಲಿದೆ ಎಂದು ಮಾಜಿ ಸಚಿವ ಹಾಗೂ ಶಾಸಕರಾದ ಜಿ.ಟಿ. ದೇವೇಗೌಡ ತಿಳಿಸಿದರು.

ಮೈಸೂರಿನ ಬಂಡೀಪಾಳ್ಯದ ಎಪಿಎಂಸಿ ಆವರಣದಲ್ಲಿ ಕೃಷಿ ಮಾರಾಟ ಇಲಾಖೆ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ವತಿಯಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತೆರೆದಿರುವ ಭತ್ತ ಮತ್ತು ರಾಗಿ ಖರೀದಿ ಕೇಂದ್ರವನ್ನು ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಮತ್ತು ಶಾಸಕ ಜಿ.ಟಿ. ದೇವೇಗೌಡರು ಮಂಗಳವಾರ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಮೈಸೂರು ತಾಲೂಕಿನಲ್ಲಿ ಈಗಾಗಲೇ 32,780 ಕ್ವಿಂಟಾಲ್ ರಾಗಿ ಮಾರಾಟ ಮಾಡಲು 2,117 ಮಂದಿ ಮತ್ತು 9,767 ಕ್ವಿಂಟಾಲ್ ಭತ್ತ ಮಾರಲು 304 ಮಂದಿ ರೈತರು ನೋಂದಣಿ ಮಾಡಿಕೊಂಡಿದ್ದಾರೆ. ರೈತರಿಗೆ ರಾಗಿ ಬೆಲೆ ಮಾರುಕಟ್ಟೆಯಲ್ಲಿ ಕಡಿಮೆಯಾಗಿದೆ. ಆದರೆ, ಇಲ್ಲಿ ಉತ್ತಮ ಬೆಲೆ ನೀಡಿರುವುದರಿಂದ ಎಲ್ಲಾ ರೈತರು ರಾಗಿಯನ್ನು ಖರೀದಿ ಕೇಂದ್ರದಲೇ ಮಾರುತ್ತಿದ್ದಾರೆ. ಭತ್ತದ ಬೆಲೆಯಲ್ಲಿ 200ನಿಂದ 300 ರೂ. ನಷ್ಟು ವ್ಯತ್ಯಾಸವಿದೆ. ಹಾಗಾಗಿ ಭತ್ತ ಮಾರುವ ರೈತರಿಗೆ ಹೊರಗಿನ ಮಾರುಕಟ್ಟೆಯಲ್ಲಿ ಮಾರುವ ಅವಕಾಶವನ್ನು ಕಲ್ಪಿಸಿದ್ದಾರೆ. ಆದರಿಂದ ಕಷ್ಟ ಕಾಲದಲ್ಲಿರುವ ರೈತರಿಗಾಗಿ ಸರ್ಕಾರ ಈ ಕೇಂದ್ರವನ್ನು ಸ್ಥಾಪಿಸಿದೆ ಎಂದರು.

ಈ ಕೇಂದ್ರದಲ್ಲಿ ಕೃಷಿ ವಿಶ್ವವಿದ್ಯಾನಿಲಯದ 30 ವಿದ್ಯಾರ್ಥಿಗಳನ್ನು ನೇಮಿಸಿಕೊಂಡಿರುವುದು ಸಂತಸದ ವಿಚಾರವಾಗಿದೆ. ಈ ಖರೀದಿ ಕೇಂದ್ರವು ಇವರಿಗೆ ಪ್ರಯೋಗ ಶಾಲೆಯಾಗಬೇಕು. ಇಲ್ಲಿ ಅವರಿಗೆ ಎಲ್ಲಾ ರೈತರ ಸಂಪರ್ಕ ದೊರೆಯುತ್ತದೆ. ಹಾಗೇ ಮಾರುಕಟ್ಟೆಯಲ್ಲಿ ವರ್ತಕರು ಮತ್ತು ದಲ್ಲಾಳಿಗಳ ವ್ಯವಹಾರ ಸೇರಿದಂತೆ ಇತರೆ ಕೃಷಿ ಚುಟುವಟಿಕೆಗಳ ಬಗ್ಗೆ ಅನುಭವ ದೊರೆಯಲಿದೆ. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಎಸ್.ಟಿ.ಸೋಮಶೇಖರ್ ಅವರು ರೈತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದು, ರೈತರು ಬೆಳೆದ ಬೆಳೆಗೆ ಬೆಂಬಲ ಬೆಲೆ ಸಿಗಬೇಕು ಎಂಬ ದೃಷ್ಟಿಯಿಂದ ಖರೀದಿ ಸಮಿತಿಯ ಅಧ್ಯಕ್ಷರಾಗಿ ಮೈಸೂರಿನ ಎಪಿಎಂಸಿಯಲ್ಲಿ ಖರೀದಿ ಕೇಂದ್ರವನ್ನು



ಉದ್ಘಾಟಿಸಿದ್ದಾರೆ. ಹಾಗೇ ರೈತರಿಗಾಗಿ ಕೇಂದ್ರ ಸರ್ಕಾರ ಮತ್ತು ಮುಖ್ಯಮಂತ್ರಿಗಳ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಮೈಸೂರು ಎಪಿಎಂಸಿ ಅಭಿವೃದ್ಧಿಗಾಗಿ ನಬಾರ್ಡ್‌ನಿಂದ 30 ಕೋಟಿ ರೂ. ಅನುದಾನ ನೀಡಬೇಕು ಎಂದು ಶಿಫಾರಸ್ಸು ಮಾಡಿದ್ದಾರೆ. ಮಾರುಕಟ್ಟೆ ಅಭಿವೃದ್ಧಿ ಮಾಡಲು ಬಹಳಷ್ಟು ಆಸಕ್ತಿ ಹೊಂದಿದ್ದಾರೆ. ಅವರ ಬಗ್ಗೆ ಮಾತನಾಡುವವರು ತಿಳಿದು ಮಾತನಾಡಬೇಕಿದೆ. ಮೈಸೂರು ಜಿಲ್ಲೆಯಲ್ಲಿ ಉತ್ತಮ ಜಿಲ್ಲಾ ಉಸ್ತುವಾರಿ ಸಚಿವರು ಎಂಬ ಖ್ಯಾತಿ ಪಡೆದಿದ್ದಾರೆ ಎಂದು ಎಸ್.ಟಿ. ಸೋಮಶೇಖರ್ ಅವರನ್ನು ಹಾಡಿ ಹೊಗಳಿದರು. ನಂತರ ಎಸ್.ಟಿ.ಸೋಮಶೇಖರ್ ಮಾತನಾಡಿ, ಬೆಂಬಲ ಬೆಲೆ ಯೋಜನೆಯಡಿ ಕೊಬ್ಬರಿ ಖರೀದಿಗೆ ಕೇಂದ್ರ ಸರ್ಕಾರ ಇನ್ನೆರಡು ದಿನಗಳಲ್ಲಿ ಅನುಮತಿ ನೀಡಲಿದೆ. ಕೇಂದ್ರ ಸರ್ಕಾರದಿಂದ ಅನುಮತಿ ಸಿಗುತ್ತಿದ್ದಂತೆ ಬೆಂಬಲ ಬೆಲೆ ನೀಡಿ ಕೊಬ್ಬರಿ ಖರೀದಿಸಲಾಗುವುದು. ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸುವುದಿಲ್ಲ. ಹೀಗಾಗಿ ಪ್ರತಿಭಟನೆ ಕೈಬಿಡಬೇಕು ಎಂದು ಹೇಳಿದರು. ಮಾರ್ಚ್‌ವರೆಗೆ ರಾಗಿ ಮತ್ತು ಭತ್ತ ಖರೀದಿಸಲಾಗುತ್ತದೆ. ಕರ್ನಾಟಕದಲ್ಲಿ ಹೆಚ್ಚುವರಿಯಾಗಿ ಉಳಿಯುವ ರಾಗಿ ಅಥವಾ ಭತ್ತವನ್ನು ತಮಿಳುನಾಡಿಗೆ ನೀಡಬಹುದು ಎಂದು ಕೇಂದ್ರ ಸರ್ಕಾರ ಕೂಡ ಹೇಳಿದೆ. 50 ಲಕ್ಷ ಟನ್ ರಾಗಿ ಮತ್ತು 50 ಲಕ್ಷ ಟನ್ ಭತ್ತ ಖರೀದಿ ಮಾಡಲಾಗುತ್ತದೆ. ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು ಮಾರ್ಚ್ 31ರವರೆಗೆ ಇರಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಎಪಿಎಂಸಿ ಪ್ರಧಾನ ವ್ಯವಸ್ಥಾಪಕರಾದ ಚಂದ್ರಕಾಂತ ಪಾಟೀಲ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೇ ಶ್ರೀನಿವಾಸ್‌ಗೌಡ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಗಿ, ಭತ್ತ ಖರೀದಿ ನೋಂದಾಯಿತ ವಿವರ

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ, ಹುಣಸೂರು, ಕೆ.ಆರ್.ನಗರ. ಮೈಸೂರು, ನಂಜನಗೂಡು, ಪಿರಿಯಾಪಟ್ಟಣ ಮತ್ತು ತಿ.ನರಸೀಪುರ ತಾಲೂಕುಗಳಿಂದ 3,60,566 ಕ್ವಿಂಟಾಲ್ ಭತ್ತ ಮಾರಾಟ ಮಾಡಲು 11,712 ರೈತರು ನೋಂದಣಿ ಮಾಡಿಕೊಂಡಿದ್ದು, 6,19,733 ಕ್ವಿಂಟಾಲ್ ರಾಗಿ ಮಾರಾಟ ಮಾಡಲು 39,237 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಅದರಂತೆ ಸಾಮಾನ್ಯ ಭತ್ತದ ಪ್ರತಿ ಕ್ವಿಂಟಾಲ್‌ಗೆ 2,040 ರೂ ಮತ್ತು ಗ್ರೇಡ್–ಎ ಭತ್ತಕ್ಕೆ 2,060 ರೂ. ಹಾಗೂ ಪ್ರತಿ ಕ್ವಿಂಟಾಲ್ ರಾಗಿಗೆ 3,578 ರೂ. ದರ ನಿಗದಿಪಡಿಸಲಾಗಿದೆ. ರೈತರು ಕೇಂದ್ರಕ್ಕೆ ತಂದ ಭತ್ತ ಮತ್ತು ರಾಗಿಯನ್ನು ಜರಡಿ ಹಿಡಿದು ತೂಕ ಹಾಕಿ ಸರ್ಕಾರ ಮುದ್ರಿತ ಗೋಣಿ ಚೀಲಗಳಲ್ಲಿ ತುಂಬಿಸಲಾಗುತ್ತದೆ.

ಮಂಡ್ಯ ಜಿಲ್ಲಾ ನೂತನ ಉಸ್ತುವಾರಿ ಸಚಿವರಾಗಿ ಆರ್.ಅಶೋಕ್ ನೇಮಕ



ಮಂಡ್ಯ, ಜ.24– ಮಂಡ್ಯ ಜಿಲ್ಲೆ ನೂತನ ಉಸ್ತುವಾರಿ ಸಚಿವರಾಗಿ ಕಂದಾಯ ಸಚಿವ ಆರ್.ಅಶೋಕ್ ಅವರನ್ನು ನೇಮಕ ಮಾಡಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆದೇಶ ಹೊರಡಿಸಿದ್ದಾರೆ.

ಕಳೆದ ವರ್ಷ ಜ.24ರಂದು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕೆ.ಸಿ.ನಾರಾಯಣ ಗೌಡರನ್ನು ಶಿವಮೊಗ್ಗ ಜಿಲ್ಲೆಗೆ ವರ್ಗಾಯಿಸಿ, ಅಬಕಾರಿ ಸಚಿವ ಕೆ.ಗೋಪಾಲಯ್ಯ ಅವರನ್ನು ಮಂಡ್ಯ ಉಸ್ತುವಾರಿ ಸಚಿವರನ್ನಾಗಿ ರಾಜ್ಯ ಸರ್ಕಾರ ನೇಮಿಸಿತ್ತು. ಇದೀಗ ಗೋಪಾಲಯ್ಯ ಬದಲಿಗೆ ಅಶೋಕ್ ಅವರನ್ನು ಉಸ್ತುವಾರಿ ಸಚಿವರನ್ನಾಗಿ ನೇಮಕ ಮಾಡಲಾಗಿದೆ.

ಮಂಡ್ಯ ಉಸ್ತುವಾರಿ ಸಚಿವರಾಗಿದ್ದ ಕೆ.ಗೋಪಾಲಯ್ಯ ಅವರಿಗೆ ಮಂಡ್ಯ ಜೊತೆಗೆ ಪಕ್ಕದ ಹಾಸನ ಜಿಲ್ಲಾ ಉಸ್ತುವಾರಿ ಸಹ ನೀಡಲಾಗಿತ್ತು. ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದ ಶಾಸಕ ಗೋಪಾಲಯ್ಯ ಅವರಿಗೆ ಕ್ಷೇತ್ರದ ಸಮಸ್ಯೆ ಆಲಿಸುವ ಜೊತೆಗೆ ಮಂಡ್ಯ ಹಾಗೂ ಹಾಸನ ಜಿಲ್ಲೆ ಓಡಾಟ ತುಸು ಕಷ್ಟವಾಗಿತ್ತು. ಜೊತೆಗೆ 2 ಜಿಲ್ಲೆಗಳ ಉಸ್ತುವಾರಿ ಸಚಿವರಾಗಿದ್ದರಿಂದ ರಾಷ್ಟ್ರೀಯ ಹಬ್ಬಗಳ ಸಂದರ್ಭ ಧ್ವಜಾರೋಹಣ ನೆರವೇರಿಸುವುದು ಯಾವ ಜಿಲ್ಲೆಯಲ್ಲಿ ಎಂಬುದು ಸಹ ಗೊಂದಲವಾಗಿತ್ತು. ಈ ಕಾರಣಕ್ಕೆ ಕೆ.ಗೋಪಾಲಯ್ಯಗೆ ಹಾಸನ ಜಿಲ್ಲೆಯಲ್ಲಿ ಧ್ವಜಾರೋಹಣ ನೆರವೇರಿಸಲು ಸರ್ಕಾರ ಸೂಚಿಸಿದರೆ, ಮಂಡ್ಯ ಧ್ವಜಾರೋಹಣ ಉಸ್ತುವಾರಿ ಸಚಿವರನ್ನಾಗಿ ಆರ್.ಅಶೋಕ್ ಅವರನ್ನು ನೇಮಿಸಿತ್ತು. ಇದೀಗ ಆರ್.ಅಶೋಕ್‌ಗೆ ಪೂರ್ಣ ಪ್ರಮಾಣದ ಮಂಡ್ಯ ಜಿಲ್ಲಾ ಉಸ್ತುವಾರಿಯನ್ನು ನೀಡಲಾಗಿದೆ.

3ನೇ ಬಾರಿಗೆ ಅಶೋಕ್ ಹೆಗಲಿಗೆ ಉಸ್ತುವಾರಿ: ಕಂದಾಯ ಸಚಿವ ಆರ್.ಅಶೋಕ್‌ಗೆ 3ನೇ ಬಾರಿ ಮಂಡ್ಯ ಜಿಲ್ಲಾ ಉಸ್ತುವಾರಿ ಒದಗಿ ಬಂದಿದೆ. 2008ರಲ್ಲಿ ಯಡಿಯೂರಪ್ಪ ನೇತೃತ್ವದ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ರಾಮಚಂದ್ರಗೌಡ ಸಚಿವ ಸ್ಥಾನ ಕಳೆದುಕೊಂಡಾಗ ಗೃಹ ಸಚಿವರಾಗಿದ್ದ ಆರ್.ಅಶೋಕ್ ಹೆಗಲಿಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನ ಒಲಿದು ಬಂದಿತ್ತು. ಬಳಿಕ ಜಗದೀಶ್ ಶೆಟ್ಟರ್ ಸಿಎಂ ಆದಾಗ ಜಿಲ್ಲಾ ಉಸ್ತುವಾರಿ ಸಿ.ಪಿ.ಯೋಗೇಶ್ವರ್ ಪಾಲಾಗಿತ್ತು.

2019ರಲ್ಲಿ ಬಿ.ಎಸ್.ಯಡಿಯೂರಪ್ಪ ಸರ್ಕಾರ ಮತ್ತೆ ಅಸ್ತಿತ್ವಕ್ಕೆ ಬಂದಾಗ ಆರ್.ಅಶೋಕ್ ಕೆಲ ತಿಂಗಳ ಕಾಲ ಉಸ್ತುವಾರಿ ಸಚಿವರಾಗಿದ್ದರೆ, ಬಳಿಕ ಕೆ.ಸಿ.ನಾರಾಯಣ ಗೌಡಗೆ ಉಸ್ತುವಾರಿ ವಹಿಸಲಾಗಿತ್ತು. ಸಮ್ಮಿಶ್ರ ಸರ್ಕಾರ ಹಾಗೂ ಪ್ರಸ್ತುತ ಬಿಜೆಪಿ ಸರ್ಕಾರದಲ್ಲಿ ಸಿ.ಎಸ್.ಪುಟ್ಟರಾಜು, ಆರ್.ಅಶೋಕ್, ಕೆ.ಸಿ.ನಾರಾಯಣಗೌಡ, ಕೆ.ಗೋಪಾಲಯ್ಯ, ಆರ್.ಅಶೋಕ್ ಹೀಗೆ ಐದು ಉಸ್ತುವಾರಿ ಸಚಿವರನ್ನು ಮಂಡ್ಯ ಜಿಲ್ಲೆ ಕಂಡಂತಾಗಿದೆ.

ಈ ನಡುವೆ ಕೆ.ಸಿ.ನಾರಾಯಣಗೌಡ ಸಹ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದರು. ಶಿವಮೊಗ್ಗ ದೂರವಾಗಿದ್ದು, ಅಲ್ಲಿಗೆ ಸಂಚರಿಸಲು ಸಮಸ್ಯೆಯಾಗುತ್ತಿದೆ. ಈ ನಿಟ್ಟಿನಲ್ಲಿ ತವರು ಜಿಲ್ಲೆ ಮಂಡ್ಯ ಉಸ್ತುವಾರಿ ಕೊಡಿ ಎಂದು ಮನವಿ ಮಾಡಿದ್ದರೂ, ಸಹ ಸರ್ಕಾರ ನಾರಾಯಣಗೌಡ ಮನವಿ ಪುರಸ್ಕರಿಸಿಲ್ಲ.

ಶಾಲೆಯಲ್ಲಿ ಊಟ ಸವಿದು ಆಹಾರದ ಗುಣಮಟ್ಟ ಪರಿಶೀಲಿಸಿದ ಶಾಸಕ ಅನ್ನದಾನಿ



ಹಲಗೂರು, ಜ.24– ಇಲ್ಲಿನ ಸರ್ಕಾರಿ ಪಬ್ಲಿಕ್ ಶಾಲೆಗೆ ಮಕ್ಕಳ ಕಲಿಕಾ ಕಾರ್ಯಕ್ರಮದ ನಿಮಿತ್ತ ಭೇಟಿ ನೀಡಿದ್ದ ಶಾಸಕ ಡಾ.ಕೆ.ಅನ್ನದಾನಿ ಮಕ್ಕಳೊಂದಿಗೆ ಊಟ ಮಾಡಿ ವಿದ್ಯಾರ್ಥಿಗಳಿಗೆ ಕೊಡುವ ಆಹಾರದ ಗುಣಮಟ್ಟ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ಹಲಗೂರಿನ ಸರ್ಕಾರಿ ಪಬ್ಲಿಕ್ ಶಾಲೆಯಲ್ಲಿ ಸೋಮವಾರ ಮತ್ತು ಮಂಗಳವಾರ ಮಕ್ಕಳ ಕಲಿಕಾ ಕಾರ್ಯಕ್ರಮವಿದ್ದು, ಶಾಲೆಗೆ ಭೇಟಿ ನೀಡಿ ಮಕ್ಕಳ ಜೊತೆ ಊಟ ಸವಿದಿದ್ದೇನೆ. ಮಕ್ಕಳಿಗೆ ನೀಡುವ ಆಹಾರ ಗುಣಮಟ್ಟದ್ದಾಗಿರಬೇಕು. ಜೊತೆಗೆ ಈ ಶಾಲೆಯಲ್ಲಿ ಹಲವಾರು ಸಮಸ್ಯೆಗಳಿದ್ದು, ಅವುಗಳನ್ನು ಶೀಘ್ರ ಬಗೆಹರಿಸುತ್ತೇನೆ ಎಂದರು. ಇದೇ ವೇಳೆ ಪಬ್ಲಿಕ್ ಶಾಲೆ ಸಿಬ್ಬಂದಿ ವರ್ಗದ ಜೊತೆಗೆ ಜೆಡಿಎಸ್ ಮುಖಂಡರಾದ ರಾಮಚಂದ್ರಗೌಡ, ತಮ್ಮಣ್ಣಗೌಡ, ರವೀಶ್, ಮಹೇಶ್ ಉಪಸ್ಥಿತರಿದ್ದರು.

ಚಿನ್ನಾಭರಣ ಕಳವು

ಮದ್ದೂರು, ಜ.24– ಮನೆ ಬೀಗ ಒಡೆದು ಕಳ್ಳರು ಚಿನ್ನಾಭರಣ ಹಾಗೂ ಬೆಳ್ಳಿ ಸಾಮಾಗ್ರಿಗಳನ್ನು ಕಳವು ಮಾಡಿರುವ ಘಟನೆ ತಾಲೂಕಿನ ಸೋಮನಹಳ್ಳಿಯಲ್ಲಿ ಸೋಮವಾರ ಸಂಜೆ ನಡೆದಿದೆ.

ಗ್ರಾಮದ ಲೋಲಾಕ್ಷಿ ಅವರ ಮನೆಯಲ್ಲಿ ಕಳ್ಳತನವಾಗಿದ್ದು, ಲೋಲಾಕ್ಷಿ ಅವರು ಸಂಜೆ 5 ಗಂಟೆ ಸಮಯದಲ್ಲಿ ತರಕಾರಿ ತರಲು ಮನೆಗೆ ಬೀಗ ಹಾಕಿಕೊಂಡು ಹೋಗಿದ್ದರು. ಇದನ್ನು ಗಮನಿಸಿದ ಕಳ್ಳರು ಮನೆ ಬೀಗ ಒಡೆದು ಅಲ್ಮೇರಾದಲ್ಲಿದ್ದ 295 ಗ್ರಾಂ ಚಿನ್ನ ಹಾಗೂ ಅರ್ಧ ಕೆಜಿ ಬೆಳ್ಳಿ ಆಭರಣಗಳನ್ನು ಕದ್ದು ಪರಾರಿಯಾಗಿದ್ದಾರೆ.

ಲೋಲಾಕ್ಷಿ ಅವರ ಅಳಿಯ, ಮಾಜಿ ಸೈನಿಕ ಸತೀಶ್ ದೂರು ನೀಡಿದ್ದು, ಸ್ಥಳಕ್ಕೆ ಬೆರಳಚ್ಚು ತಜ್ಞರು ಹಾಗೂ ಶ್ವಾನದಳ ಆಗಮಿಸಿ, ಪರಿಶೀಲನೆ ನಡೆಸಿತು. ಮದ್ದೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀರಂಗಪಟ್ಟಣ ಪುರಸಭೆಗೆ ನಿಂಗರಾಜು ಸ್ಥಾಯಿ ಸಮಿತಿ ಅಧ್ಯಕ್ಷ



ಶ್ರೀರಂಗಪಟ್ಟಣ, ಜ.24– ಪಟ್ಟಣ ಪುರಸಭೆ ಸ್ಥಾಯಿ ಸಮಿತಿ ನೂತನ ಅಧ್ಯಕ್ಷರಾಗಿ ನಿಂಗರಾಜು ಮಂಗಳವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿಕಟಪೂರ್ವ ಅಧ್ಯಕ್ಷ ಶ್ರೀನಿವಾಸ್ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಿಂಗರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಪುರಸಭೆ ಮುಖ್ಯಾಧಿಕಾರಿ ಸಂದೀಪ್ ಘೋಷಿಸಿದರು.

ಈ ವೇಳೆ ಶಾಸಕ ರವೀಂದ್ರ ಶ್ರೀಕಂಠಯ್ಯ ಸ್ಥಾಯಿಸಮಿತಿ ನೂತನ ಅಧ್ಯಕ್ಷ ನಿಂಗರಾಜು ಅವರನ್ನು ಅಭಿನಂದಿಸಿ ಮಾತನಾಡಿ, ಪುರಸಭೆ ಸರ್ವ ಸದಸ್ಯರು ಎಲ್ಲಾ ವರ್ಗದ ಜನರಿಗೂ ನ್ಯಾಯ ದೊರಕಿಸಿಕೊಡಬೇಕೆಂಬ ಉದ್ದೇಶದಿಂದ ಸರ್ವಾನುಮತದಿಂದ ದಲಿತ ಮುಖಂಡರಾದ ನಿಂಗರಾಜು ಅವರನ್ನು ಆಯ್ಕೆ ಮಾಡಿರುವುದು ಶ್ಲಾಘನೀಯ. ಈಗಾಗಲೇ 2 ಬಾರಿ ಪುರಸಭೆ ಸದಸ್ಯರಾಗಿರುವ ನಿಂಗರಾಜು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ತಮಗೆ ಸಿಕ್ಕಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಲಿದ್ದಾರೆ ಎಂದರು.

ಸ್ಥಾಯಿ ಸಮಿತಿ ನೂತನ ಅಧ್ಯಕ್ಷ ನಿಂಗರಾಜು, ಶಾಸಕ ರವೀಂದ್ರ ಶ್ರೀಕಂಠಯ್ಯ ಮಾರ್ಗದರ್ಶನ ಹಾಗೂ ಸರ್ವ ಸದಸ್ಯರ ಸಹಕಾರದೊಂದಿಗೆ ಪಟ್ಟಣ ಪುರಸಭೆ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಈ ವೇಳೆ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀನಿವಾಸ್, ಪೂರ್ಣಿಮಾ, ಎಸ್.ನಂದೀಶ್, ಚೈತ್ರ, ಮಂಗಳಮ್ಮ, ವನಿತ, ಪುರಸಭೆ ಅಧ್ಯಕ್ಷೆ ನಿರ್ಮಲಾ, ಉಪಾಧ್ಯಕ್ಷ ನರಸಿಂಹೇಗೌಡ, ಸದಸ್ಯರಾದ ಪ್ರಕಾಶ್, ಗಂಜಾಂ ಕೃಷ್ಣಪ್ಪ, ಶಿವು, ಎಸ್.ಟಿ. ರಾಜು, ರವಿ, ಸೇರಿದಂತೆ ಇತರ ಸದಸ್ಯರು ಹಾಗೂ ಮುಖಂಡರು ಸ್ಥಾಯಿ ಸಮಿತಿ ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ಬೆಂಬಲಿಗರು ವ್ಯಕ್ತಿಗತ ನಿಂದನೆ ಮಾಡದಿರಿ: ಡಾ.ಮೂರ್ತಿ



ಮಳವಳ್ಳಿ, ಜ.24– ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಸೇರಿದಂತೆ ಯಾರು ಸಹ ವ್ಯಕ್ತಿಗತ ನಿಂದನೆ ಮಾಡಬಾರದು ಎಂದು ಆದರ್ಶ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಡಾ.ಮೂರ್ತಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ನಡೆದ ಪ್ರಜಾಧ್ವನಿ ಸಮಾವೇಶದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷ ಬಲಿಷ್ಠವಾಗಿದೆ. ಕೆಲವು ನಾಯಕರಿಂದ ನೋವಾಗಿ ಸಾಕಷ್ಟು ಕಾರ್ಯಕರ್ತರು ತಟಸ್ಥವಾಗಿದ್ದಾರೆ. ಪಕ್ಷವನ್ನು ಅಧಿಕಾರಕ್ಕೆ ತರಲು ನೋವನ್ನು ಮರೆತು ಎಲ್ಲರೂ ಒಂದಾಗಬೇಕು ಎಂದು ಮನವಿ ಮಾಡಿದರು.

ನಮಗೆ ಪಕ್ಷ ಮುಖ್ಯ. ಅದರ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು. ತೃಪ್ತರು, ಅತೃಪ್ತರು ಹಾಗೂ ತಟಸ್ಥವಾಗಿರುವರು ಮುಂದಿನ ಚುನಾವಣೆಯಲ್ಲಿ ಯಾರ ಬಗ್ಗೆಯೂ ವಿಶ್ಲೇಷಣೆ ಮಾಡದೆ ಎಲ್ಲರೂ ಒಗ್ಗಟ್ಟಿನಿಂದ ದುಡಿದು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದರು.

ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಪುಟ್ಟರಾಮು ಮಾತನಾಡಿ, ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ನಮ್ಮನ್ನು ಕುರಿತು ಮುತ್ತತ್ತಿಯಲ್ಲಿ ಸಭೆ ಮಾಡಿದವರು ಕಳೆದ ಚುನಾವಣೆಯಲ್ಲಿ ನನ್ನ ಬೆನ್ನಿಗೆ ಚೂರಿ ಹಾಕಿದರು ಎಂದು ಆರೋಪಿಸಿದ್ದಾರೆ. ಆ ಆರೋಪ ಸತ್ಯಕ್ಕೆ ದೂರವಾದದ್ದು, ಒಂದು ಚುನಾವಣೆಯಲ್ಲಿಯೂ ಸಹ ನಾವು ಅವರ ವಿರುದ್ಧ ಮಾಡಿಲ್ಲ. ನಾವು ಅವರ ಪರವಾಗಿ ದುಡಿದಿದ್ದರ ಪರಿಣಾಮ ಅವರು 2 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಅವರ ಹೇಳಿಕೆಯಿಂದ ನಮ್ಮ ಮನಸ್ಸಿಗೆ ತುಂಬಾ ನೋವಾಗಿದೆ. ಅವರು ಮಾಡಿರುವ ಆರೋಪ ನಿಜವಾದರೆ ಮಲೆ ಮಹದೇಶ್ವರ ಬೆಟ್ಟಕ್ಕೆ ನಾನು ಕುಟುಂಬ ಸಮೇತ ಬರುತ್ತೇನೆ. ಅವರು ಬರಲಿ, ಇಬ್ಬರೂ ಸೇರಿ ಪ್ರಮಾಣ ಮಾಡೋಣ ಎಂದು ಸವಾಲು ಹಾಕಿದರು.

ಈ ಸಂದರ್ಭ ಜಿಪಂ ಮಾಜಿ ಸದಸ್ಯರಾದ ಮಹದೇವಸ್ವಾಮಿ, ಪುಟ್ಟಯ್ಯ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಚೌಡೇಶ್, ಗಂಗಾಧರ್, ಅಣ್ಣೇಗೌಡ, ಜಯಮ್ಮ ಇದ್ದರು.

ಕೂಲಿಕಾರರ ಕುಂದುಕೊರತೆ ಆಲಿಸಿದ ಶಾಸಕ ತಮ್ಮಣ್ಣ



ಭಾರತೀನಗರ, ಜ.24– ಇಲ್ಲಿಗೆ ಸಮೀಪದ ಶೆಟ್ಟಹಳ್ಳಿ ಗ್ರಾಮದ ಶ್ರೀಬೊಮ್ಮಲಿಂಗೇಶ್ವರ ದೇವರ ಕೊಳದ ಬಳಿ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುತ್ತಿದ್ದ ಮಹಿಳೆಯರ ಕುಂದುಕೊರತೆಗಳನ್ನು ಶಾಸಕ ಡಿ.ಸಿ.ತಮ್ಮಣ್ಣ ಆಲಿಸಿದರು.

ಈ ವೇಳೆ ಮಾತನಾಡಿದ ಅವರು, ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಬೇಕು ಎಂಬುದಕ್ಕೆ ಇಲ್ಲಿನ ಗ್ರಾಪಂ ಮಾಜಿ ಅಧ್ಯಕ್ಷೆ ಲಕ್ಷ್ಮಿ, ಸದಸ್ಯೆ ಸುಧಾ, ಪೂರ್ಣಿಮಾ ಅವರು ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವುದೇ ಸಾಕ್ಷಿಯಾಗಿದೆ. ಇಂತಹವರು ಇತರರಿಗೆ ಮಾದರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಮಹಿಳೆಯರು ಕೇಂದ್ರ ಸರ್ಕಾರ ಕಡಿತಗೊಳಿಸಿರುವ 5 ಕೆಜಿ ಅಕ್ಕಿ, ಸೀಮೆಎಣ್ಣೆ ಕೊಡಿಸಬೇಕು ಹಾಗೂ ದಿನಗೂಲಿ ಹೆಚ್ಚಿಸುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ತಮ್ಮಣ್ಣ, ಈ ಸಂಬಂಧ ಸರ್ಕಾರಕ್ಕೆ ಒತ್ತಾಯಿಸಿ ಪತ್ರ ಬರೆಯುವುದಾಗಿ ತಿಳಿಸಿದರು. ಈ ವೇಳೆ ಜೆಡಿಎಸ್ ತಾಲೂಕು ಘಟಕ ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಗ್ರಾಪಂ ಅಧ್ಯಕ್ಷ ಶಿವಲಿಂಗಯ್ಯ, ಸದಸ್ಯರಾದ ಹನುಮಂತೇಗೌಡ, ಸುರೇಶ್, ಲಕ್ಷ್ಮಿ, ಎಸ್.ಬಿ.ಸಿದ್ದರಾಮೇಗೌಡ, ಎಸ್.ಎಚ್.ಶಿವರಾಜು, ಎಸ್.ಬಿ.ತಮ್ಮೇಗೌಡ, ಕೇಬಲ್ ಕೃಷ್ಣ, ಎಸ್.ಎಂ.ಚಿಕ್ಕಹನುಮೇಗೌಡ, ಪಿಡಿಓ ನಂಜುಂಡಯ್ಯ, ಎಸ್.ಎಚ್.ನಾಗೇಶ್, ಚಿಕ್ಕಮರೀಗೌಡ, ಬೊಮ್ಮಲಿಂಗೇಗೌಡ, ತಮ್ಮೇಗೌಡ, ಶಿವಲಿಂಗಯ್ಯ, ಪುಟ್ಟಯ್ಯ, ನಂಜಯ್ಯ ಸೇರಿದಂತೆ ಹಲವರಿದ್ದರು.

ಅಘಲಯ ಗ್ರಾಪಂಗೆ ವನಿತಾ ನೂತನ ಅಧ್ಯಕ್ಷೆ



ಕೆ.ಆರ್.ಪೇಟೆ, ಜ.24– ತಾಲೂಕಿನ ಅಘಲಯ ಗ್ರಾಪಂ ನೂತನ ಅಧ್ಯಕ್ಷೆಯಾಗಿ ವನಿತಾ ಶಂಕರೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಹೇಮಾವತಿ ಲೋಕೇಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಇಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ವನಿತಾ ಶಂಕರೇಗೌಡ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಾಪಂ ಇಓ ಸತೀಶ್, ಸಹ ಚುನಾವಣಾಧಿಕಾರಿ ತಾಪಂ ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಓ ಭುಜಬಲಿ ಜಕಾತಿ, ಕಾರ್ಯದರ್ಶಿ ವಿಷಕಂಠಾರಾಧ್ಯ ಘೋಷಿಸಿದರು.

ನೂತನ ಅಧ್ಯಕ್ಷೆ ವನಿತಾ ಶಂಕರೇಗೌಡ ಮಾತನಾಡಿ, ನನಗೆ ಸಿಕ್ಕಿರುವ ಅಧಿಕಾರದಲ್ಲಿ ಗ್ರಾಪಂನ ಸಮಗ್ರ ಅಭಿವೃದ್ಧಿಗೆ ಎಲ್ಲಾ ಸದಸ್ಯರು ಹಾಗೂ ನೌಕರರ ಸಹಕಾರದೊಂದಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಕುಡಿಯುವ ನೀರು, ಬೀದಿ ದೀಪ, ಚರಂಡಿ ಸೇರಿದಂತೆ ಮೂಲ ಸೌಲಭ್ಯ ಕಲ್ಪಿವುದಾಗಿ ಭರವಸೆ ನೀಡಿದರು.

ನೂತನ ಅಧ್ಯಕ್ಷೆಯನ್ನು ತಾಪಂ ಮಾಜಿ ಅಧ್ಯಕ್ಷ ಎ.ಎನ್.ಜಾನಕೀರಾಂ, ತಾಲೂಕು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್.ರಮೇಶ್, ಮುಖಂಡರಾದ ಡಿ.ಎಸ್.ನಾಗೇಂದ್ರ, ನಿವೃತ್ತ ಸೈನಿಕ ಶ್ಯಾಮಣ್ಣ, ನಿಂಗರಾಜು, ಮಂಜೇಗೌಡ, ಗ್ರಾಪಂ ಉಪಾಧ್ಯಕ್ಷ ಪುಟ್ಟೇಗೌಡ, ಸದಸ್ಯರಾದ ಅಣ್ಣೇಗೌಡ, ಆಶಾ, ಯೋಗೇಶ್, ಭಾರತಿ, ಹೇಮಾವತಿ, ದಿವ್ಯಾ, ಸುನೀತಾ, ಕೆಂಪೇಗೌಡ, ತಮ್ಮಣ್ಣಗೌಡ, ಸುಮ, ತಮ್ಮಯ್ಯ, ನೇತ್ರಾವತಿ ಮತ್ತಿತರರು ಅಭಿನಂದಿಸಿದರು.

ಒಂದನೇ ಪುಟದಿಂದ

ಗಂಜಲ ಹಾಕಿ ವಿಧಾನಸೌಧ ಶುದ್ಧ ಮಾಡುತ್ತೇವೆ

ಬಾಕಿ ಇದೆಯೋ ಅದನ್ನು ಮಾಡಿಕೊಂಡು ನಿಮ್ಮ ಟೆಂಟ್ ಖಾಲಿ ಮಾಡಿ. ನಾವು ಬಂದು ವಿಧಾನ ಸೌಧ ಸ್ವಚ್ಛ ಮಾಡುತ್ತೇವೆ. ಈ ಸರ್ಕಾರ ವನ್ನು ಜನರೇ ಓಡಿಸುತ್ತಾರೆ. ಬಿಜೆಪಿ ಸರ್ಕಾ ರಕ್ಕೆ 40% ಕಮಿಷನ್ ಸರ್ಕಾರ ಎಂಬ ಬ್ರ್ಯಾಂಡ್ ಬಂದಿದ್ದು,

ಅದನ್ನು ಮುಚ್ಚಿಕೊಳ್ಳಲು ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ಕಾಲದಲ್ಲಿ 35 ಸಾವಿರ ಕೋಟಿ ಅಕ್ರಮವಾಗಿದೆ ಎಂದು ಹೇಳಿದ್ದಾರೆ. ಈಗ ಆರೋಪ ಮಾಡುವವರು ಕಳೆದ ಮೂರೂವರೆ ವರ್ಷಗಳಿಂದ ಕಡಲೇಕಾಯಿ ತಿನ್ನುತ್ತಿದ್ದರಾ ನಿಮಗೆ ಅಧಿಕಾರ ಇದ್ದಾಗ ತನಿಖೆ ಮಾಡದಂತೆ ತಡೆದಿದ್ದವರು ಯಾರು ಎಂದು ಪ್ರಶ್ನಿಸಿದರು. ನಿಮ್ಮ ಅಧಿಕಾರ ಉಪಯೋಗಿಸಿಕೊಂಡು ತನಿಖೆ ಮಾಡಿಸಿ ಜನರ ಮುಂದೆ ಸತ್ಯಾಸತ್ಯತೆ ಇಡಬೇಕಾಗಿತ್ತು. ಈ ಸರ್ಕಾರಕ್ಕೆ 40% ಕಮಿಷನ್ ಸರ್ಕಾರ ಎಂಬ ಬ್ರ್ಯಾಂಡ್ ಸಿಕ್ಕಿದೆ. ಅದನ್ನು ಮುಚ್ಚಿಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ನೀವು ಹೇಳುವ 35 ಸಾವಿರ ಕೋಟಿ ಹಣ ನಮ್ಮ ನಾಯಕರ ಖಾತೆಗೆ ಬಂದಿದೆಯಾ, ವಿದೇಶಕ್ಕೆ ಹೋಗಿದೆಯಾ, ಹೇಳಿ. ಬಿಜೆಪಿಯವರು ಲಂಚ ತಿಂದು ಕಾಂಗ್ರೆಸ್ ಪಕ್ಷದ ಮೂತಿಗೆ ಒರೆಸುವ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಏನೂ ಆಗುವುದಿಲ್ಲ. ಜನರ ಮನದಲ್ಲಿ ಕಾಂಗ್ರೆಸ್ ಬಗ್ಗೆ ಒಲವು ಮೂಡಿದೆ. ಬಿಜೆಪಿಯವರು, ಖಾಸಗಿ ಸಂಸ್ಥೆಗಳು, ಮಾಧ್ಯಮಗಳು ಸಮೀಕ್ಷೆಯಲ್ಲಿ ಬಿಜೆಪಿ ಸಂಖ್ಯಾಬಲ 60ರ ಮೇಲೆ ದಾಟುತ್ತಿಲ್ಲ. ನಮ್ಮದು 120–130 ಕ್ಷೇತ್ರಗಳು ಬರುತ್ತಿವೆ. ಇವು ನಿಜವಾಗುತ್ತದೋ ಸುಳ್ಳಾಗುತ್ತದೋ ಮುಂದಿನ ವಿಚಾರ.

ಬಿಜೆಪಿಯವರಲ್ಲಿ ಯಡಿಯೂರಪ್ಪ–ಬೊಮ್ಮಾಯಿ, ಯತ್ನಾಳ್, ನಿರಾಣಿ, ಅಶೋಕ್, ಮಾಜಿ ಡಿಸಿಎಂ–ಹೀಗೆ ಬೇರೆ ಬೇರೆ ನಾಯಕರ ನಡುವೆ ಆಂತರಿಕ ಜಗಳ ಹೆಚ್ಚಾಗುತ್ತಿದೆ. ನಮ್ಮ ಪಕ್ಷದ ಆಂತರಿಕ ವಿಚಾರದ ಬಗ್ಗೆ ಮಾತನಾಡುತ್ತೀರಲ್ಲ.ಬಿಜೆಪಿ ಪಕ್ಷದಲ್ಲಿ 32 ಗುಂಪುಗಳಿವೆ. ಇವೆಲ್ಲವನ್ನು ಮುಚ್ಚಿಹಾಕಲು ಪ್ರಯತ್ನಿಸುತ್ತಿದ್ದಾರೆ. ಹೀಗಾಗಿ ಅವರುಗಳು ಬಹಿರಂಗವಾಗಿ ಮಾತನಾಡಲು ಹೆದರುತ್ತಿದ್ದಾರೆ. ಈ ಕಾರಣಕ್ಕೆ ನಮ್ಮ ಪಕ್ಷದಲ್ಲಿದ್ದ ಸುಧಾಕರ್ ಅವರಿಂದ ಕಾಂಗ್ರೆಸ್ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿಸಿದ್ದಾರೆ.

ಬಿಜೆಪಿ ಸರ್ಕಾರ ಸುಮ್ಮನೆ ಬಜೆಟ್ ಮಂಡಿಸುವ ಪ್ರಯತ್ನ ಮಾಡುತ್ತಿದೆ. ಅವರು ಕಳೆದ ವರ್ಷಗಳಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಅರ್ಧದಷ್ಟು ಹಣ ವೆಚ್ಚ ಮಾಡಿಲ್ಲ. ಇಷ್ಟು ದಿನ ಮಾಡಲಾಗದಿದ್ದವರು ಈಗ ಏನು ಮಾಡಲು ಸಾಧ್ಯ. ನೆರೆ ಬಂದಾಗ ಸತ್ತವರಿಗೆ ಪರಿಹಾರ ನೀಡಲಿಲ್ಲ, ಕೋವಿಡ್ ಸಮಯದಲ್ಲಿ ಸತ್ತವರಿಗೆ ಪ್ರಮಾಣ ಪತ್ರ ನೀಡಿ ಪರಿಹಾರ ನೀಡಲಿಲ್ಲ. ಕೋವಿಡ್ ಸಮಯದಲ್ಲಿ ಬಡವರಿಗೆ ನೆರವಾಗಲಿಲ್ಲ. ಎಲ್ಲರ ಮುಂದೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಎಲ್ಲ ಸಮುದಾಯಗಳಿಗೂ ಮೀಸಲಾತಿ ಹೆಸರಲ್ಲಿ ತಲೆಗೆ ತುಪ್ಪ ಸವರುತ್ತಿದ್ದಾರೆ. ಅದನ್ನು ನೋಡಲು ಆಗಲ್ಲ, ಸುವಾಸನೆ, ರುಚಿಯೂ ಅನುಭವಿಸದ ಪರಿಸ್ಥಿತಿ ಮಾಡಿದ್ದಾರೆ ಎಂದು ಸ್ವಾಮೀಜಿಗಳು ಚೆನ್ನಾಗಿ ವರ್ಣಿಸಿದ್ದಾರೆ. ಜನರಿಗೆ ಈ ಸರ್ಕಾರ ಯಾಕೆ ಇಷ್ಟು ಮೋಸ ಮಾಡುತ್ತಿದೆ.

ಹಾಸನಕ್ಕೆ ನಾನೇ ಜೆಡಿಎಸ್ ಅಭ್ಯರ್ಥಿ

ಹತ್ತಿರ ಬಂದಿದೆ. ಈ ಸಂದರ್ಭದಲ್ಲಿ ಜೆಡಿಎಸ್‌ನಿಂದ ನನ್ನನ್ನು ಅಭ್ಯರ್ಥಿ ಮಾಡಬೇಕೆಂದು ಎಲ್ಲರೂ ಕೂಡ ಮಾತನಾಡಿಕೊಂಡು ನಿರ್ಣಯ ತಗೊಂಡಿದ್ದಾರೆ. ಹಾಗಾಗಿ ಇನ್ನು ಸ್ವಲ್ಪ ದಿವಸದಲ್ಲೇ ನಮ್ಮ ಹೆಸರು ಕೂಡ ಹೇಳುತ್ತಾರೆ. ಮುಂದಿನ ಪಟ್ಟಿಯಲ್ಲಿ ನನ್ನ ಹೆಸರು ಪ್ರಕಟ ಆಗಲಿದೆ ಎಂದು ಹೇಳಿದ್ದಾರೆ.

ಕಳೆದ ಒಂದು ವರ್ಷದಿಂದ ಹಾಸನದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಭವಾನಿ ರೇವಣ್ಣ ಅವರೇ ಸ್ಪರ್ಧೆ ಮಾಡಲಿದ್ದಾರೆ ಎಂಬ ಮಾತು ಕೇಳಿ ಬರುತ್ತಿತ್ತು. ಅಲ್ಲದೇ ಕ್ಷೇತ್ರದಲ್ಲಿ ಭವಾನಿ ರೇವಣ್ಣ ಅವರು ಕೂಡ ನಿರಂತರವಾಗಿ ಬಿರುಸಿನ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಈಗಾಗಲೇ ಜೆಡಿಎಸ್–2023ರ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಘೋಷಣೆ ಮಾಡಿದೆ.

ಫೆ.13ರಿಂದ ಬೆಂಗಳೂರಲ್ಲಿ ಏರ್ ಶೋ

ಮತ್ತು ರಕ್ಷಣಾ ಉದ್ಯಮದ ಪ್ರಮುಖರು ಮತ್ತು ಕಂಪನಿಗಳಿಂದ ಹೆಚ್ಚಿನ ಸಂಖ್ಯೆಯ ಭಾಗವಹಿಸುವಿಕೆ ಇರುತ್ತದೆ ಎಂದು ಹೇಳಿದರು. ವರ್ಚುವಲ್ ಸಭೆಯಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂಡಿಯಾ ಪೆವಿಲಿಯನ್, ಕರ್ನಾಟಕ ಪೆವಿಲಿಯನ್ ಹಾಗೂ ಏರೋಸ್ಪೇಸ್ ಕಂಪನಿಗಳ ಬೃಹತ್ ಪ್ರದರ್ಶನ ಏರ್ ಶೋದಲ್ಲಿ ನಡೆಯಲಿದೆ. ಅಲ್ಲದೆ ವಿಮಾನಗಳ ಮೂಲಕ ವೈಮಾನಿಕ ಪ್ರದರ್ಶನಗಳು ಇರುತ್ತವೆ. ಸಾರ್ವಜನಿಕರಿಗೆ ವೀಕ್ಷಿಸಲು ಅವಕಾಶವಿದೆ ಎಂದರು.

ಪ್ರಧಾನಿ ಮೋದಿ ಉದ್ಘಾಟನೆ: ಈ ಮೆಗಾ ಏರ್ ಶೋವನ್ನು ಪ್ರಧಾನಿ ಮೋದಿ ಫೆಬ್ರವರಿ 13ರಂದು ಉದ್ಘಾಟಿಸಲಿದ್ದಾರೆ. ಬೆಂಗಳೂರಿನ ಯಲಹಂಕದ ವಾಯುಪಡೆ ನಿಲ್ದಾಣದಲ್ಲಿ ದ್ವೈವಾರ್ಷಿಕ ವೈಮಾನಿಕ ಪ್ರದರ್ಶನ ನಡೆಯಲಿದೆ. ಏರೋ ಇಂಡಿಯಾ ವೆಬ್ಸೈಟ್ ಪ್ರಕಾರ, ಒಟ್ಟು 731 ಪ್ರದರ್ಶಕರು ನೋಂದಾಯಿಸಿಕೊಂಡಿದ್ದಾರೆ, ಅದರಲ್ಲಿ 633 ಭಾರತೀಯ ಮತ್ತು 98 ವಿದೇಶಿ ಪ್ರದರ್ಶಕರಾಗಿದ್ದಾರೆ.

ತಿ.ನರಸೀಪುರದಲ್ಲಿ ಮತ್ತೆ ಚಿರತೆ ಪ್ರತ್ಯಕ್ಷ: ಎಮ್ಮೆ ಬಲಿ

ರಾತ್ರಿ ಕಗ್ಗಲೀಪುರದಲ್ಲಿ ಅಟ್ಟಹಾಸ; 18 ಬೋನ್, 74 ಕ್ಯಾಮರಾ ಟ್ರ್ಯಾಪ್, 90 ಸಿಬ್ಬಂದಿ ಕಾರ್ಯಾಚರಣೆ ನಡುವೆ ಕಣ್ಣಾಮುಚ್ಚಾಲೆ





ಮೈಸೂರು,ಜ.24(ಎಂಟಿವೈ)– ಜನರ ಬಲಿ ಪಡೆದು ಭಾರೀ ಆತಂಕ ಸೃಷ್ಟಿಸಿರುವ ಉಪಟಳ ಮುಂದುವರೆದಿದ್ದು, ತಾಲೂಕಿನ ಸಿದ್ದನಹುಂಡಿ ಗ್ರಾಮದಲ್ಲಿ ಎಮ್ಮೆಯೊಂದರ ಮೇಲೆ ದಾಳಿ ನಡೆಸಿ, ಬಲಿ ಪಡೆಯುವುದರೊಂದಿಗೆ ಮತ್ತೆ ಜನರಲ್ಲಿ ಭೀತಿ ಹುಟ್ಟಿಸಿದೆ.

ಕಳೆದ 3 ತಿಂಗಳಿಂದ ತಿ.ನರಸೀ ಪುರ ತಾಲೂಕಿನಲ್ಲಿ ಚಿರತೆಗೆ 4 ಜನ ಬಲಿಯಾಗಿದ್ದು, ಹಲವು ಜಾನುವಾರುಗಳ ಬಲಿ ಪಡೆದಿದೆ. ಇದರಿಂದ ತಾಲೂಕಿನ ಜನತೆ ಭಯಭೀತರಾಗಿದ್ದು, ಉಪಟಳ ನೀಡುತ್ತಿರುವ ಚಿರತೆ ಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ಮುಂದುವರೆಸಿದ್ದಾರೆ. ಕನ್ನನಾಯಕನಹಳ್ಳಿಯ ಸಿದ್ದಮ್ಮ (60) ಹಾಗೂ ಹೊರಳಹಳ್ಳಿ ಗ್ರಾಮದ 11 ವರ್ಷದ ಬಾಲಕ ಜಯಂತ್ ಬಲಿಯಾದ ನಂತರ ಸುತ್ತಮುತ್ತಲಿನ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ಅರಣ್ಯ ಸಿಬ್ಬಂದಿ ಚಿರತೆ ಸೆರೆಗೆ ಹೊಸ ಹೊಸ ಪ್ರಯೋಗ ಮಾಡುತ್ತಿದ್ದಾರೆ.

18 ಬೋನ್, 74 ಕ್ಯಾಮರಾ ಟ್ರ್ಯಾಪ್: ಮುಖ್ಯಮಂತ್ರಿ ಸೇರಿದಂತೆ ಹಿರಿಯ ಅಧಿಕಾರಿಗಳಿಂದ ಚಿರತೆ ಸೆರೆಗೆ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ಮೈಸೂರಿನ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆ ಹಿಡಿಯಲು ಅದು ದಾಳಿ ನಡೆಸಿದ ಸ್ಥಳ, ಜಾನುವಾರು ಬಲಿ ಪಡೆದ ಜಾಗಕ್ಕೆ ಹೊಂದಿಕೊಂಡಂತೆ ಆಯ್ದ ಸ್ಥಳದಲ್ಲಿ 18 ಬೋನ್ ಇಡಲಾಗಿದೆ. ಅಲ್ಲದೆ, 74 ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗಿದೆ. 13 ತಂಡಗಳಲ್ಲಿ 90 ಸಿಬ್ಬಂದಿ ನಿಯೋಜಿಸಿ, ದಿನದ 24 ಗಂಟೆಯೂ ಚಿರತೆ ಸೆರೆ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಈಗಾಗಲೇ ಗೂಗಲ್ ಮ್ಯಾಪ್ ಆಧರಿಸಿ, ಚಿರತೆ ಸೆರೆಗೆ ಕಾರ್ಯತಂತ್ರ ರೂಪಿಸಲು ಅರಣ್ಯ ಇಲಾಖೆ ಮುಂದಾಗಿದೆ. ಇದಕ್ಕೆ ಪೂರಕವಾಗಿ ಎಲ್ಲಾ ಹವಾಮಾನದಲ್ಲೂ ಹಾಗೂ ಹಗಲು–ರಾತ್ರಿ ಹಾರಾಡಬಲ್ಲ ಥರ್ಮಲ್ ಡ್ರೋಣ್ ಬಳಸಿ, ಚಿರತೆಗೆ ಶೋಧಿಸಲಾಗುತ್ತಿದೆ. ಕಳೆದ 3 ದಿನದಿಂದ ಎಡಬಿಡದೆ ಕಾರ್ಯಾಚರಣೆ ನಡೆಸುತ್ತಿದ್ದರೂ, ಹಾವಳಿ ಕೊಡುತ್ತಿರುವ ಚಿರತೆ ಮಾತ್ರ ಥರ್ಮಲ್ ಡ್ರೋಣ್ ಕ್ಯಾಮರಾ, 74 ಕ್ಯಾಮರಾ ಟ್ರ್ಯಾಪ್‌ಗಳಿಗೂ ಚಿರತೆಯ ದೃಶ್ಯ ಕಂಡು ಬಂದಿಲ್ಲದಿರುವುದು ಅರಣ್ಯ ಸಿಬ್ಬಂದಿಗೆ ತಲೆನೋವಾಗಿ ಪರಿಣಮಿಸಿದೆ.

ಕಗ್ಗಲೀಪುರ: ಚಿರತೆಗಾಗಿ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆದಿದ್ದರೂ ಚಿರತೆ ಮಾತ್ರ ಸೋಮವಾರ ರಾತ್ರಿ ತಾಲೂಕಿನ ಕಗ್ಗಲೀಪುರದಲ್ಲಿ ಕಾಣಿಸಿಕೊಂಡಿದೆ. ಕೂಡಲೇ ಜಾಗೃತರಾದ ಗ್ರಾಮಸ್ಥರು ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಸಿಬ್ಬಂದಿಗಳೊಂದಿಗೆ ಮಚ್ಚು, ಕುಡುಗೋಲು, ದೊಣ್ಣೆ ಹಿಡಿದು ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಗ್ರಾಮಸ್ಥರು ಪಾಲ್ಗೊಂಡರು. ಶೋಧಿಸಿದರೂ ಪತ್ತೆಯಾಗಿಲ್ಲ.

ಸಿದ್ದನಹುಂಡಿಯಲ್ಲಿ ದಾಳಿ: ಕಗ್ಗಲೀಪುರದಲ್ಲಿ ಅರಣ್ಯ ಸಿಬ್ಬಂದಿಗಳ ತಂಡ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದ ಸಂದರ್ಭದಲ್ಲೇ ತಾಲೂಕಿನ ಸಿದ್ದನಹುಂಡಿಯಲ್ಲಿ ಚಿರತೆ ರತ್ನಮ್ಮ ಎಂಬುವರಿಗೆ ಸೇರಿದ ಎಮ್ಮೆ ಮೇಲೆ ದಾಳಿ ಮಾಡಿ ಬಲಿ ಪಡೆದಿದೆ. ಸಮೀಪದ ಹೊಲದಲ್ಲಿ ಎಮ್ಮೆಯನ್ನು ತಿಂದು ಹೋಗಿದೆ.

ಕೂಂಬಿಂಗ್ ಮುಂದುವರೆದಿದೆ

ಚಿರತೆ ಸೆರೆ ಹಿಡಿಯಲು ಕಾರ್ಯಾಚರಣೆ ಮುಂದುವರೆದಿದೆ. ಈಗಾಗಲೇ ತಜ್ಞರೊಂದಿಗೆ ಚರ್ಚಿಸಿ ಚಿರತೆಯನ್ನು ಸುರಕ್ಷಿತವಾಗಿ, ಆದಷ್ಟು ಬೇಗ ಸೆರೆ ಹಿಡಿಯಲು ಕ್ರಮ ಕೈಗೊಳ್ಳಲಾಗಿದೆ. ಕಾರ್ಯಾಚರಣೆಯಲ್ಲಿ ಥರ್ಮಲ್ ಡ್ರೋಣ್ ಬಳಸಲಾಗುತ್ತಿದೆ. 74 ಕ್ಯಾಮರಾ ಟ್ರ್ಯಾಪ್ ಅಳವಡಿಸಿದ್ದರೂ, ಯಾವುದೇ ಕ್ಯಾಮರಾದಲ್ಲೂ ಚಿರತೆ ದೃಶ್ಯ ಸೆರೆಯಾಗಿಲ್ಲ. ಆದರೂ ಕಾರ್ಯಾಚರಣೆಯನ್ನು ಮುಂದುವರೆಸಿದ್ದೇವೆ. ಜನರ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

– ಡಾ.ಮಾಲತಿ ಪ್ರಿಯಾ, ಸಿಎಫ್, ಮೈಸೂರು ವೃತ್ತ

ಸಾರ್ವಜನಿಕ ಸಮಸ್ಯೆಗೆ ಪರಿಹಾರ, ಸರ್ಕಾರಿ ಸೌಕರ್ಯ ಕಲ್ಪಿಸಲು ರಾಮದಾಸ್ ಸರಣಿ ಅದಾಲತ್ ಆಯೋಜನೆ



ಮೈಸೂರಿನ 62ನೇ ವಾರ್ಡ್ ವಿಶ್ವೇಶ್ವರನಗರದಲ್ಲಿರುವ ಬಿಎಐ ಕಟ್ಟಡದಲ್ಲಿ ಮಂಗಳವಾರ ನಡೆದ ಅದಾಲತ್‌ನಲ್ಲಿ ಶಾಸಕ ಎಸ್.ಎ.ರಾಮದಾಸ್ ಸಮಾಲೋಚನೆ ನಡೆಸುತ್ತಿರುವುದು.

ಮೈಸೂರು, ಜ.24(ಎಸ್‌ಬಿಡಿ)– ಕೃಷ್ಣರಾಜ ಕ್ಷೇತ್ರದ ಸಾರ್ವಜನಿಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದು ಹಾಗೂ ಫಲಾನುಭವಿಗಳಿಗೆ ಸರ್ಕಾರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಶಾಸಕ ಎಸ್.ಎ.ರಾಮದಾಸ್ ಸರಣಿ ಅದಾಲತ್ ಆಯೋಜಿಸಿದ್ದಾರೆ.

ನಾಳೆ(ಜ.25) 47ನೇ ವಾರ್ಡ್ ಕುವೆಂಪುನಗರ ಹುಡ್ಕೋದ ಗಣಪತಿ ದೇವಸ್ಥಾನ, ಜ.26ಕ್ಕೆ 52ನೇ ವಾರ್ಡ್ ಇಟ್ಟಿಗೆಗೂಡು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನ, ಜ.27ಕ್ಕೆ 63ನೇ ವಾರ್ಡ್ ಜೆ.ಪಿ.ನಗರ ಸ್ಪೋರ್ಟ್ ಕ್ಲಬ್, ಜ.28ಕ್ಕೆ 48ನೇ ವಾರ್ಡ್ ಜಯನಗರ 2ನೇ ಮುಖ್ಯ ರಸ್ತೆಯ ಕೌಶಿಕ ಸಂಕೇತಿ ಸಂಘ ನಾಚಾರಮ್ಮ ಸಭಾ ಭವನ, ಜ.29ಕ್ಕೆ 51ನೇ ವಾರ್ಡ್ ನಟರಾಜ ಕಲ್ಯಾಣ ಮಂಟಪ, ಜ.30ಕ್ಕೆ 57ನೇ ವಾರ್ಡ್ ಕುವೆಂಪುನಗರ ಸಾಮ್ರಾಟ್ ಕಲ್ಯಾಣ ಮಂಟಪ, ಜ.31ಕ್ಕೆ 64 ಮತ್ತು 65ನೇ ವಾರ್ಡ್ ಅರವಿಂದ ನಗರ ಮತ್ತು ಶ್ರೀರಾಂಪುರದ ಭ್ರಮರಾಂಬ ಕಲ್ಯಾಣ ಮಂಟಪ, ಫೆ.1ಕ್ಕೆ 59ನೇ ವಾರ್ಡ್ ಕುವೆಂಪುನಗರ ಬಡಾವಣೆ, ಫೆ.2ಕ್ಕೆ 43ನೇ ವಾರ್ಡ್ ಜನತಾನಗರದ ಕನಕ ಭವನ, ಫೆ.3ಕ್ಕೆ 56 ಮತ್ತು 60ನೇ ವಾರ್ಡ್ ಎನ್‌ಟಿಎಂ ಶಾಲೆ, ಫೆ.4ಕ್ಕೆ 49ನೇ ವಾರ್ಡ್ ಲಕ್ಷ್ಮಿಪುರಂನ ನಂಜುನಮಳಿಗೆ ಗಾಡಿಚೌಕ, ಫೆ.5ಕ್ಕೆ 55ನೇ ವಾರ್ಡ್ ಚಾಮುಂಡಿಪುರಂನ ಆರಾಧ್ಯ ಮಹಾಸಭಾ ಹಾಗೂ 50ನೇ ವಾರ್ಡ್ ಸುಣ್ಣದಕೇರಿ 8ನೇ ಕ್ರಾಸ್‌ನ ಗಂಗಾ ಮತಸ್ಥರ ಸಮುದಾಯ ಭವನ, ಫೆ.6ಕ್ಕೆ 54ನೇ ವಾರ್ಡ್ ಕನಕಗಿರಿ ಕನಕ ಹಿರಿಯ ನಾಗರಿಕರ ಸಂಘದ ಆವರಣದಲ್ಲಿ ಅದಾಲತ್ ನಡೆಯಲಿದ್ದು, ನೀರು, ಒಳಚರಂಡಿ, ಅರಣ್ಯ, ರಸ್ತೆ, ಆರೋಗ್ಯ, ವಿದ್ಯುತ್, ಶಿಕ್ಷಣ, ಕಾರ್ಮಿಕರು, ಹೀಗೆ ಯಾವುದೇ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ಉದ್ದೇಶವಿದೆ.

ಸರಣಿ ಅದಾಲತ್‌ನ ಎರಡನೇ ದಿನವಾದ ಇಂದು 62ನೇ ವಾರ್ಡ್ ವಿಶ್ವೇಶ್ವರನಗರದಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಕಟ್ಟಡದಲ್ಲಿ ಕಾರ್ಯಕ್ರಮ ನಡೆಯಿತು.

ಕಾರ್ಮಿಕ ಇಲಾಖೆಯಿಂದ 86 ಜನ ಇ–ಶ್ರಮ್ ಕಾರ್ಡ್, ಕಾರ್ಮಿಕರ ಕಾರ್ಡ್ ಹಾಗೂ ಇತರೆ ಸೌಲಭ್ಯ ಪಡೆದರು. ಆರೋಗ್ಯ ಇಲಾಖೆಯ ವತಿಯಿಂದ ಕಣ್ಣಿನ ತಪಾಸಣೆ, ಮಧುಮೇಹ, ರಕ್ತದ ಒತ್ತಡ ಪರೀಕ್ಷೆ, ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್, ಆಯುಶ್ ಇಲಾಖೆ ವತಿಯಿಂದ ವಿವಿಧ ಸೇವೆ ಕಲ್ಪಿಸಲಾಗಿತ್ತು. ಈ ವೇಳೆ ಆಯುರ್ವೇದ ಔಷಧಿ ವಿತರಣೆ, ಇಮ್ಯೂನೋ ಬೂಸ್ಟರ್ ಕಿಟ್ ವಿತರಿಸಲಾಯಿತು. ನಗರಪಾಲಿಕೆ ಸದಸ್ಯರಾದ ಶ್ರೀಮತಿ ಶಾಂತಮ್ಮ ವಡಿವೇಲು ಮತ್ತಿತರರ ಮುಖಂಡರು ಉಪಸ್ಥಿತರಿದ್ದರು. 53ನೇ ವಾರ್ಡ್ ಸಿದ್ಧಾರ್ಥನಗರದ ಸಿಐಟಿಬಿ ಛತ್ರದಲ್ಲಿ ನಿನ್ನೆ ಮೊದಲ ಅದಾಲತ್ ನಡೆದಿತ್ತು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಬಿ.ಎನ್.ಯಶೋಧ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದ ವಿಜಯ ಸಾದರಪಡಿಸಿದ ಕರ್ನಾಟಕ ರಾಜ್ಯದ ಟಿಬೆಟಿಯನ್ನರ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ಆಯಾಮಗಳ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಅಂಬೇಡ್ಕರ್ ಅಧ್ಯಯನ ವಿಷಯದಲ್ಲಿ ಪಿ.ಹೆಚ್.ಡಿ ಪದವಿಗಾಗಿ ಮೈಸೂರು ವಿವಿ ಅಂಗೀಕರಿಸಿದೆ.

ನಿಧನ



ಸೀತಮ್ಮ

ಮೈಸೂರು, ಜ.24– ಮೈಸೂರು ಹೊರ ವಲಯದ ಕೆ.ಆರ್.ಮಿಲ್ ಕಾಲೋನಿ ನಿವಾಸಿ ಹಾಗೂ ಹೋಟೆಲ್ ಸುಬ್ಬಣ್ಣ ಅವರ ಪುತ್ರಿ ಶ್ರೀಮತಿ ಸೀತಮ್ಮ ಇಂದು ರಾತ್ರಿ ನಿಧನರಾದರು. ಅವರಿಗೆ 72 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಜೆಡಿಎಸ್ ಮುಖಂಡ ಕೆ.ಆರ್.ಮಿಲ್ ಶಿವಣ್ಣ ಇವರ ಸಹೋದರರು. ಇವರ ಅಂತ್ಯಕ್ರಿಯೆ ನಾಳೆ (ಬುಧವಾರ) ಮಧ್ಯಾಹ್ನ 1.30 ಗಂಟೆಗೆ ಕೆ.ಆರ್.ಮಿಲ್ ಕಾಲೋನಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಲಬಾಧೆ: ಡೆತ್‌ನೋಟ್ ಬರೆದಿಟ್ಟು ವ್ಯಕ್ತಿ ಆತ್ಮಹತ್ಯೆ

ವಿರಾಜಪೇಟೆ, ಜ.24– ಸಾಲ ಬಾಧೆ ತಾಳಲಾರದೆ ವ್ಯಕ್ತಿಯೊಬ್ಬರು ಡೆತ್‌ನೋಟ್ ಬರೆದಿಟ್ಟು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವಿರಾಜಪೇಟೆ ತಾಲೂಕಿನ ಹೆಗ್ಗಳ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ನಿವಾಸಿ ಮಲಯಾಳಿ ಸತೀಶ್ (46) ಎಂಬುವರೇ ಆತ್ಮಹತ್ಯೆಗೆ ಶರಣಾದವರು. ಇವರು ವಿರಾಜಪೇಟೆ ನಗರದಲ್ಲಿ ಕಚೇರಿಯೊಂದನ್ನು ತೆರೆದು ವ್ಯವಹಾರ ನಡೆಸಿಕೊಂಡಿದ್ದರು ಎನ್ನಲಾಗಿದೆ. ಮಂಗಳವಾರ ಬೆಳಗ್ಗೆ ಡೆತ್‌ನೋಟ್ ಬರೆದು ನನ್ನ ಸಾವಿಗೆ ನಾನೇ ಕಾರಣ. ವ್ಯವಹಾರಕ್ಕಾಗಿ ಸಾಲ ಮಾಡಿದ್ದು, ಅದನ್ನು ತೀರಿಸಲು ಸಾಧ್ಯವಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವೃತ್ತ ನಿರೀಕ್ಷಕ ಶಿವರುದ್ರ ತಿಳಿಸಿದ್ದಾರೆ. ಮೃತರ ಪತ್ನಿ ಸುಜಾತ ವಿರಾಜಪೇಟೆ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಠಾಣಾಧಿಕಾರಿ ಶ್ರೀಧರ್ ಸ್ಥಳ ಮಹಜರು ಮಾಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಂತರ, ವಾರಸುದಾರರಿಗೆ ಮೃತದೇಹವನ್ನು ಒಪ್ಪಿಸಿದ್ದಾರೆ. ಮೃತರು ತಂದೆ, ಪತ್ನಿ ಹಾಗೂ ಪುತ್ರನನ್ನು ಅಗಲಿದ್ದಾರೆ.

ಎರಡು ಸಾವಿರ ರೂ., ಮದ್ಯದ ಬಾಟಲಿ ಲಂಚವಾಗಿ ಸ್ವೀಕರಿಸುತ್ತಿದ್ದ ಸರ್ವೇ ಇಲಾಖೆ ಅಧಿಕಾರಿ ಲೋಕಾಯುಕ್ತ ಬಲೆಗೆ



ಮಡಿಕೇರಿ, ಜ.24– ವ್ಯಕ್ತಿಯೊಬ್ಬರಿಂದ 2 ಸಾವಿರ ರೂ. ನಗದು ಮತ್ತು 1 ಬಾಟಲಿ ಮದ್ಯವನ್ನು ಲಂಚವಾಗಿ ಸ್ವೀಕರಿಸುತ್ತಿದ್ದ ಮಡಿಕೇರಿ ಸರ್ವೇ ಇಲಾಖೆ ಅಧಿಕಾರಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನಗರದ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಸರ್ವೇಯರ್ ಆಗಿರುವ ಮಾದಪ್ಪ ಎಂಬವರೇ ಬಂಧಿತ ಆರೋಪಿ ಈತನಿಂದ 2 ಸಾವಿರ ನಗದು ಹಾಗೂ 1 ಮದ್ಯದ ಬಾಟಲಿಯನ್ನು ವಶಕ್ಕೆ ಪಡೆಯ ಲಾಗಿದ್ದು, ತನಿಖೆ ಮುಂದುವರೆಸಲಾಗಿದೆ.

ಪ್ರಕರಣ ಹಿನ್ನೆಲೆ: ಚೇರಂಬಾಣೆ ಬಾಡಗ ಗ್ರಾಮದ ವ್ಯಕ್ತಿಯೊಬ್ಬರು 2 ಸರ್ವೇ ನಂಬರ್‌ಗಳಲ್ಲಿ ಕಾಫಿ ತೋಟ ಹೊಂದಿದ್ದು, ಮನೆ ನಿರ್ಮಿಸುವ ಸಲುವಾಗಿ ನಿವೇಶನ ಮಾಡಲು ಮುಂದಾಗಿದ್ದರು. ಈ ಸ್ಥಳದಲ್ಲಿ 3 ಬೀಟೆ ಮರಗಳಿದ್ದು, ಅದನ್ನು ತೆರವು ಮಾಡುವುದು ಮತ್ತು ನಿವೇಶನವನ್ನಾಗಿ ಪರಿವರ್ತಿಸಲು ಸ್ಥಳದ ಸರ್ವೇ ನಡೆಸಬೇಕಿತ್ತು. ಈ ಹಿನ್ನೆಲೆಯಲ್ಲಿ ಕಳೆದ 6 ತಿಂಗಳ ಹಿಂದೆ ಮಡಿಕೇರಿ ಸರ್ವೇ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು. ಮಾತ್ರವಲ್ಲದೇ ಸರ್ವೇಗಾಗಿ ಸರ್ಕಾರ ನಿಗದಿಪಡಿಸಿದ್ದ ಶುಲ್ಕವನ್ನೂ ಪಾವತಿ ಮಾಡಿದ್ದರು.

ಈ ವೇಳೆ ಸರ್ವೇಯರ್ ಮಾದಪ್ಪ ಎಂಬುವರು 10 ಸಾವಿರ ಹಣಕ್ಕೆ ಬೇಡಿಕೆ ಇಟ್ಟಿದ್ದು, ಜಾಗದ ಮಾಲೀಕರು 10 ಸಾವಿರ ರೂ. ನಗದು ನೀಡಿದ್ದರು. ಬಳಿಕವೂ ಕೆಲಸ ನಿಧಾನಗತಿಯಲ್ಲಿ ಸಾಗಿದ್ದು ಈ ವೇಳೆ ಸರ್ವೇಯರ್ ಮಾದಪ್ಪ ಅವರನ್ನು ಸಂಪರ್ಕಿಸಿದಾಗ ಹೆಚ್ಚುವರಿ 5 ಸಾವಿರ ರೂ. ಹಣಕ್ಕೆ ಬೇಡಿಕೆ ಇಟ್ಟಿದ್ದು, ಆ ಹಣವನ್ನು ನೀಡಲಾಗಿತ್ತು. ಹೀಗಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಕೆಲಸವಾಗಿರಲಿಲ್ಲ ಮಾತ್ರವಲ್ಲದೇ ಹೆಚ್ಚುವರಿ 2 ಸಾವಿರ ನಗದು ಮತ್ತು 1 ಮದ್ಯದ ಬಾಟಲಿ ನೀಡುವಂತೆ ಸರ್ವೇಯರ್ ಮಾದಪ್ಪ ಅರ್ಜಿದಾರರನ್ನು ಒತ್ತಾಯಿಸಿದ್ದರು. ಇದರಿಂದ ಮನನೊಂದ ಅರ್ಜಿದಾರರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಇಂದು ಅರ್ಜಿದಾರರಿಂದ ಸರ್ವೇಯರ್ ಮಾದಪ್ಪ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ 2 ಸಾವಿರ ರೂ. ನಗದು ಮತ್ತು 1 ಮದ್ಯದ ಬಾಟಲಿಯನ್ನು ಪಡೆಯುತ್ತಿದ್ದ ಸಂದರ್ಭ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಆರೋಪಿ ಮಾದಪ್ಪನನ್ನು ಬಂಧಿಸಿದ್ದಾರೆ.

ದಕ್ಷಿಣ ಕೊಡಗಿನಲ್ಲಿ ಮಿತಿ ಮೀರಿದ ಹುಲಿ ಉಪಟಳ

ಎರಡು ದಿನಗಳಲ್ಲಿ ನಾಲ್ಕು ಜಾನುವಾರು ಬಲಿ

ಮಡಿಕೇರಿ/ವಿರಾಜಪೇಟೆ, ಜ.24– ದಕ್ಷಿಣ ಕೊಡಗಿನಲ್ಲಿ ಹುಲಿ ಉಪಟಳ ಮತ್ತೆ ಮಿತಿ ಮೀರಿದೆ. ಕಳೆದ ಎರಡು ದಿನಗಳಲ್ಲಿ ನಾಲ್ಕು ಜಾನುವಾರುಗಳನ್ನು ಹುಲಿ ಕೊಂದು ಹಾಕಿದೆ.

ವಿರಾಜಪೇಟೆ ತಾಲೂಕಿನ ಅರ್ಜಿ ಗ್ರಾಮದಲ್ಲಿ ಇಂದು ಹುಲಿ ದಾಳಿ ಮಾಡಿದ್ದು, ಪಿ.ಅವ ಎಂಬುವರಿಗೆ ಸೇರಿದ ಹಸುವನ್ನು ಬಲಿ ಪಡೆದಿದೆ. ಸ್ಥಳಕ್ಕೆ ಅರಣ್ಯಾಧಿಕಾರಿಗಳು ಹಾಗೂ ಪಶುವೈದ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ನಿರಂತರ ದಾಳಿ ಮಾಡುತ್ತಿರುವ ಹುಲಿ ಜಾಡನ್ನು ಪತ್ತೆ ಹಚ್ಚಲಾಗುತ್ತಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಮದಲ್ಲಿ ಆತಂಕದ ವಾತಾವರಣವಿದ್ದು, ತಕ್ಷಣ ಹುಲಿಯನ್ನು ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಇತ್ತೀಚೆಗಷ್ಟೇ ಬಿಟ್ಟಂಗಾಲ ಸಮೀಪ 2ನೇ ರುದ್ರಗುಪ್ಪೆ ಗ್ರಾಮದಲ್ಲಿ ಎಂ.ಎಂ. ಬೋಪಣ್ಣ ಎಂಬುವರಿಗೆ ಸೇರಿದ ಮೂರು ಕರುಗಳನ್ನು ಹುಲಿ ಕೊಂದು ಹಾಕಿತ್ತು.

ಸಂಬಾರ ಬೆಳೆ ರಫ್ತಿನ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಕೀಟನಾಶಕ ಬಳಕೆ

ಸಂಬಾರ ಪದಾರ್ಥಗಳ ಖರೀದಿದಾರರ, ಮಾರಾಟಗಾರರ ಸಮಾವೇಶದಲ್ಲಿ ಆತಂಕ



ಮಡಿಕೇರಿ, ಜ.24– ಸಂಬಾರ ಬೆಳೆಗಳ ಉತ್ಪಾದನೆಯ ಹಂತದಲ್ಲಿ 'ಕೀಟನಾಶಕಗಳ ಬಳಕೆಯ ಮೇಲೆ ನಿಗಾವಹಿಸದಿದ್ದಲ್ಲಿ, ಅದು ರಫ್ತಿನ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಸಂಬಾರ ಪದಾರ್ಥಗಳ ಖರೀದಿಗಾರರ ಮತ್ತು ಮಾರಾಟಗಾರರ ಸಮಾವೇಶದಲ್ಲಿ ಪ್ರಮುಖರು ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕ್ರಿಸ್ಟಲ್ ಕೋರ್ಟ್ ಸಭಾಂಗಣದಲ್ಲಿ ಸಕಲೇಶಪುರದ ಸಂಬಾರ ಮಂಡಳಿಯ ಪ್ರಾದೇಶಿಕ ಕಚೇರಿಯಿಂದ ಆಯೋಜಿತ 'ಸಂಬಾರ ಪದಾರ್ಥಗಳ ಖರೀದಿದಾರರ ಮತ್ತು ಮಾರಾಟಗಾರರ ಸಮಾವೇಶ'ದಲ್ಲಿ ಮಾತನಾಡಿದ ಸಕಲೇಶಪುರ ಸಂಬಾರ ಮಂಡಳಿಯ ಉಪನಿರ್ದೇಶಕ ಡಾ. ಜೋನ್ಸಿ ಮಣಿತೊಟ್ಟಂ, ಭಾರತ ಅತೀ ಹೆಚ್ಚಿನ ಸಂಬಾರ ಪದಾರ್ಥಗಳನ್ನು ಬೆಳೆಯುವ ಹಾಗೂ ಅತೀ ಹೆಚ್ಚು ಸಂಬಾರ ಪದಾರ್ಥಗಳ ಬಳಕೆಯ ದೇಶವೂ ಆಗಿದೆ. ಈ ಹಿನ್ನೆಲೆಯಲ್ಲಿ ಸಂಬಾರ ಬೆಳೆ ಬೆಳೆಯುವ ಹಂತದಲ್ಲಿ ಅದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದರೊಂದಿಗೆ, ಆರೋಗ್ಯಕರವಾದ ಉತ್ಪಾದನೆಯತ್ತ ಎಚ್ಚರಿಕೆ ವಹಿಸುವುದು ಅತ್ಯವಶ್ಯವೆಂದು ಸ್ಪಷ್ಟಪಡಿಸಿದರು.

ಭಾರತದಿಂದ 300 ಮಿಲಿಯನ್ ಡಾಲರ್ ಮೌಲ್ಯದ ಸಂಬಾರ ಪದಾರ್ಥಗಳು ರಫ್ತಾಗುತ್ತದೆ ಎಂದು ಮಾಹಿತಿ ನೀಡಿದ ಡಾ. ಜೋನ್ಸಿ ಮಣಿತೊಟ್ಟಂ, ವಿಶ್ವಾದ್ಯಂತ ಬೇಡಿಕೆ ಇರುವ ಸಂಬಾರ ಪದಾರ್ಥಗಳನ್ನು ಉತ್ಪಾದಿಸುವ ಹಂತದಲ್ಲಿ, ಅದನ್ನು ಬಳಕೆ ಮಾಡುವವರ ಬಗ್ಗೆಯೂ ಕಾಳಜಿ ವಹಿಸುವುದು ಅವಶ್ಯವೆಂದು ಸೂಕ್ಷ್ಮವಾಗಿ ಹೇಳಿದರು. ಇಲ್ಲಿ ಉತ್ಪಾದನೆಯಾಗಿ ರಫ್ತಾಗುವ ಸಂಬಾರ ಪದಾರ್ಥಗಳು ಪರೀಕ್ಷೆಗೆ ಒಳಪಡುತ್ತವೆ. ಆ ಹಂತದಲ್ಲಿ ಕೀಟನಾಶಕಗಳ ಅಂಶಗಳು ಪತ್ತೆಯಾದಲ್ಲಿ ರಫ್ತಿನ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಕರ್ನಾಟಕದ ವಾತಾವರಣ ವಿವಿಧ ಸಂಬಾರ ಬೆಳೆಗಳಿಗೆ ಅತ್ಯಂತ ಪೂರಕವಾಗಿದೆ. ಅದರಲ್ಲೂ ಕೊಡಗಿನ ಏಲಕ್ಕಿ, ಬ್ಯಾಡಗಿ ಮೆಣಸಿಗೆ 'ಜಿಐ' ಟ್ಯಾಗ್ ಇರುವುದನ್ನು ಉಲ್ಲೇಖಿಸಿದ ಜೋನ್ಸಿ ಮಣಿತೊಟ್ಟಂ, ಕೊಡಗಿನ ಏಲಕ್ಕಿ 'ಕೂರ್ಗ್ ಕಾರ್ಡಮಮ್' ಎಂದು ಖ್ಯಾತಿಯನ್ನು ಪಡೆದುಕೊಂಡಿದೆ. ಇಂತಹ ಸಂಬಾರ ಬೆಳೆಗಳಿಗೆ ಉತ್ತೇಜನ ನೀಡುವುದು, ಬೆಳೆಗಾರರು ಮತ್ತು ಮಾರಾಟಗಾರರ ನಡುವೆ ಸಂಪರ್ಕವನ್ನು ಕಲ್ಪಿಸಿ ಉದ್ದಿಮೆಯನ್ನು ಮತ್ತಷ್ಟು ಎತ್ತರಕ್ಕೇರಿಸುವುದು ಸಂಬಾರ ಮಂಡಳಿಯ ಮುಖ್ಯ ಉದ್ದೇಶವಾಗಿದೆ ಎಂದು ಸ್ಪಷ್ಟಪಡಿಸಿದರು. ಸಂಬಾರ ಮಂಡಳಿಯ ಸದಸ್ಯ ಕೆ.ಎಸ್. ಸತ್ಯನಾರಾಯಣ ಮಾತನಾಡಿ, ಸಾವಯವ ಕೃಷಿ ಮೂಲಕ ಸಂಬಾರ ಬೆಳೆಗಳನ್ನು ಬೆಳೆಯುವ ಅಗತ್ಯತೆ ಕುರಿತು ಮಾಹಿತಿ ನೀಡಿದರು. ವರ್ಷಂ ಪ್ರತಿ ಸಂಬಾರ ಬೆಳೆಗಳ ಉತ್ಪಾದನೆ ಶೇ.6 ರಷ್ಟು ಹೆಚ್ಚುತ್ತಿದೆ ಎಂದು ವಿವರಿಸಿದರು.

ಏಲಕ್ಕಿ ಅಳಿವಿನಿಂದ ಪರಿಸರಕ್ಕೆ ಹಾನಿ: ಕೊಡಗು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಎಂ.ಬಿ.ದೇವಯ್ಯ ಮಾತನಾಡಿ, ಈ ಹಿಂದೊಮ್ಮೆ ಕೊಡಗಿನಲ್ಲಿ ಏಲಕ್ಕಿ ಕೃಷಿ ವಿಫುಲವಾಗಿತ್ತು. ನಂತರದ ದಿನಗಳಲ್ಲಿ 'ಕಟ್ಟೆ' ರೋಗ, ಧಾರಣೆಯ ಏರಿಳಿತ ಮೊದಲಾದ ಕಾರಣಗಳಿಂದ ಏಲಕ್ಕಿ ಕೃಷಿ ಗಣನೀಯ ಪ್ರಮಾಣದಲ್ಲಿ ಕುಸಿತಕ್ಕೆ ಒಳಗಾಗಿ, ಏಲಕ್ಕಿ ತೋಟಗಳು ಕಾಫಿ ತೋಟಗಳಾಗಿ ಪರಿವರ್ತನೆಯಾಗುತ್ತಿದೆ. ದಟ್ಟ ನೆರಳನ್ನು ಬಯಸುವ ಏಲಕ್ಕಿ ಕೃಷಿ ಅವನತಿ ಹೊಂದಿ, ಅದರ ಸ್ಥಳದಲ್ಲಿ ಬೇರೊಂದು ಕೃಷಿ ಬಂದಲ್ಲಿ ಅದು ಪರಿಸರ ನಾಶಕ್ಕೆ ಕಾರಣವಾಗುತ್ತದೆ. ಈ ಹಿನ್ನೆಲೆ ಏಲಕ್ಕಿ ಕೃಷಿ ಉತ್ತೇಜಿಸುವ ಅದಕ್ಕೆ ತಗಲುವ ಕಟ್ಟೆ ರೋಗದ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವೆಂದು ಹೇಳಿದರು. ಸಂಬಾರ ಮಂಡಳಿಯ ಮಾಜಿ ಸದಸ್ಯ ಎಸ್.ಜಿ. ಮೇದಪ್ಪ ಮಾತನಾಡಿ, ಕೊಡಗಿನಲ್ಲಿ ಬೆಳೆಯುವ ಪ್ರಮುಖ ಸಂಬಾರ ಪದಾರ್ಥ ಕರಿಮೆಣಸಿನ ಆಮದಿನ ಮೇಲೆ ಪ್ರಸ್ತುತ ಅತೀ ಹೆಚ್ಚಿನ ಸುಂಕ ವಿಧಿಸಲಾಗಿದೆ. ಈ ಹಿನ್ನೆಲೆ ಒಂದಷ್ಟು ಉತ್ತಮ ಧಾರಣೆ ಬೆಳೆಗಾರರಿಗೆ ದೊರಕುತ್ತಿದೆ ಎಂದು ಅಭಿಪ್ರಾಯಿಸಿದರು.

ವಿಶ್ವದಲ್ಲೆ ಪ್ರಥಮ ಸ್ಥಾನ: ಹುಬ್ಬಳ್ಳಿಯ ಸಂಬಾರ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಬಿ.ಆರ್. ಗಿರೀಶ್ ಮಾತನಾಡಿ, ಭಾರತ ಸಂಬಾರ ಪದಾರ್ಥಗಳ ರಫ್ತಿನಲ್ಲಿ ವಿಶ್ವದಲ್ಲೆ ಪ್ರಥಮ ಸ್ಥಾನದಲ್ಲಿದೆ. ಭಾರತದಲ್ಲಿ ವಿವಿಧ ಸಂಬಾರ ಪದಾರ್ಥಗಳನ್ನು ಬೆಳೆಯಲಾಗುತ್ತಿದ್ದು, ಇವುಗಳ ಉತ್ತೇಜನಕ್ಕಾಗಿ ಸಂಬಾರ ಮಂಡಳಿ ಕಾರ್ಯನಿರ್ವಹಿಸುತ್ತಿದೆ. ಮಂಡಳಿ ವ್ಯಾಪ್ತಿಯಲ್ಲಿ 50ಕ್ಕೂ ಹೆಚ್ಚಿನ ಸಂಬಾರ ಪದಾರ್ಥಗಳನ್ನು ಬೆಳೆಯಲು, ಅವುಗಳಿಗೆ ಉತ್ತೇಜನ ನೀಡಲು ಅವಕಾಶವಿದೆ. ಇವುಗಳ ನಡುವೆಯೂ ಸಂಬಾರ ಪದಾರ್ಥಗಳ ಕೃಷಿ, ಮಾರಾಟ ವ್ಯವಸ್ಥೆಯಲ್ಲಿ ಒಂದಷ್ಟು ನ್ಯೂನ್ಯತೆಗಳಿದ್ದು, ಅವುಗಳನ್ನು ಸರಿಪಡಿಸುವ ದೃಷ್ಟಿಕೋನದಿಂದ ಇಂತಹ ಸಮಾವೇಶವನ್ನು ಆಯೋಜಿಸುತ್ತಿರುವುದಾಗಿ ತಿಳಿಸಿದರು.

ಬೆಂಗಳೂರಿನ ರಫ್ತುದಾರರಾದ ಡಾ. ಸ್ವರೂಪ ರೆಡ್ಡಿ ಮಾತನಾಡಿ, ರೈತರು ತಮ್ಮ ಕೃಷಿಯಲ್ಲಿನ ಉತ್ಪಾದನೆಯ ಹೆಚ್ಚಳಕ್ಕೆ ಹೆಚ್ಚಿನ ಒತ್ತು ನೀಡುತ್ತಾರೆ. ಇಂತಹ ರೈತರಿಗೆ ರಾಸಾಯನಿಕಗಳ ಬಳಕೆ, ಕ್ರಿಮಿನಾಶಕಗಳ ಬಳಕೆಯ ಮೇಲೆ ಹೆಚ್ಚಿನ ಗಮನ ಹರಿಸುವಂತೆ ತಿಳಿಸಿಕೊಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಹೇಳಿದರು. ಪ್ರಸ್ತುತ ರಫ್ತಾಗುವ ಸಂಬಾರ ಬೆಳೆಗಳಲ್ಲಿ ಕೀಟ ನಾಶಕಗಳ ಪ್ರಮಾಣ ನಿಗದಿಗಿಂತಲೂ ಮೀರಿರುವ ಅಪಾಯವನ್ನು ನಾವು ಎದುರಿಸುತ್ತಿದ್ದೇವೆಂದು ಎಚ್ಚರಿಸಿದ ಡಾ.ಸ್ವರೂಪ ರೆಡ್ಡಿ, ಆರೋಗ್ಯಕರವಾದ ಉತ್ತಮ ಕೃಷಿಯತ್ತ ಬೆಳೆಗಾರ ಆಸಕ್ತನಾಗಬೇಕೆಂದು ತಿಳಿಸಿದರು.

ಗುಣಮಟ್ಟ ಕೇಳುವವರಿಲ್ಲ: ಸಾವಯ ಕೃಷಿ ಪದ್ಧತಿ ಅಳವಡಿಸಿ ಗುಣಮಟ್ಟದ ಸಂಬಾರ ಪದಾರ್ಥಗಳನ್ನು ಬೆಳೆದರು, ಅದರ ಮಾರಾಟದ ಸಂದರ್ಭ ಗುಣಮಟ್ಟವನ್ನು ಕೇಳುವವರೇ ಇಲ್ಲದ ಪರಿಸ್ಥಿತಿ ಇದೆ ಎಂದು ಸಮಾವೇಶದಲ್ಲಿ ಪಾಲ್ಗೊಂಡ ಬೆಳೆಗಾರ ಕೇಶವ ಎಂಬವರು ತಮ್ಮ ಅಳಲು ತೋಡಿಕೊಂಡರು. ಸಾವಯವ ಕೃಷಿ ಮಾಡಿದಲ್ಲಿ, ಅಂತಹ ಕೃಷಿ ಉತ್ಪನ್ನಕ್ಕೆ ಹೆಚ್ಚಿನ ಧಾರಣೆ ಲಭಿಸುತ್ತದೆ ಎನ್ನುವ ಮಾತಿದೆ. ಆದರೆ, ಮಾರಾಟದ ಸಂದರ್ಭ ಉತ್ಪನ್ನದ ಪ್ರಮಾಣವನ್ನಷ್ಟೆ ಕೇಳುವ ಖರೀದಿದಾರರು, ಗುಣಮಟ್ಟವನ್ನೆ ಕೇಳದ ಪರಿಸ್ಥಿತಿ ಇದೆ. ಇನ್ನಾದರು, ಗುಣಮಟ್ಟಕ್ಕೆ ಮಾನ್ಯತೆ ನೀಡಿ ಬೆಳೆಗಾರರಿಗೆ ಖರೀದಿದಾರರು ಸ್ಪಂದಿಸಬೇಕೆಂದು ಮನವಿ ಮಾಡಿದರು. ಕಾರ್ಯಕ್ರಮದ ವೇದಿಕೆಯಲ್ಲಿ ಶಿವಮೊಗ್ಗದ ಬೆಳೆಗಾರ ಜೋಮಿ ಮ್ಯಾಥ್ಯು, ಮಡಿಕೇರಿ ಸಂಬಾರ ಮಂಡಳಿಯ ಸಹಾಯಕ ನಿರ್ದೇಶಕ ಬಿಜು ಎಸ್.ಎಸ್. ಉಪಸ್ಥಿತರಿದ್ದರು.

ಜ.27, 28ಕ್ಕೆ ಪಾಷಣಮೂರ್ತಿ ತೆರೆ

ಗೋಣಿಕೊಪ್ಪ, ಜ.24– ಹಳ್ಳಿಗಟ್ಟು ಬೀರಂಪಾರೆ ಪಾಷಣಮೂರ್ತಿ ತೆರೆ ಜನವರಿ 27, 28 ರಂದು ನಡೆಯಲಿದೆ. ಜ. 27 ರಂದು ಸಂಜೆ 6 ಗಂಟೆಗೆ ಮಹಾ ಮಂಗಳಾರತಿ, ರಾತ್ರಿ 8ಕ್ಕೆ ಅನ್ನದಾನ, 10 ಗಂಟೆಗೆ ಮಂತ್ರಗುಳಿಗ, ಧರ್ಮದೇವತೆ, ಪಂಜುರುಳಿ, ಜ. 28 ರಂದು ಮುಂಜಾನೆ 5.30 ಗಂಟೆಗೆ ಪಾಷಣ ಮೂರ್ತಿ, 11 ಗಂಟೆಗೆ ಅಂಗರಜ್ಜ, 12.30 ಕ್ಕೆ ಅನ್ನದಾನ, ಮಧ್ಯಾಹ್ನ 1 ಗಂಟೆಗೆ ಕೊರಗಜ್ಜ ತೆರೆ ನಡೆಯಲಿದೆ ಎಂದು ದೇವಸ್ಥಾನ ಅರ್ಚಕ ಬಿ. ರಮೇಶ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಭಕ್ತರು ಮಾಹಿತಿಗೆ 9972514898 ಸಂಖ್ಯೆ ಸಂಪರ್ಕಿಸಬಹುದಾಗಿದೆ.

ಕೊಡಗಲ್ಲಿ ಗುಡುಗು ಸಹಿತ ಮಳೆ; ಕಾಫಿ ಬೆಳೆಗಾರರಲ್ಲಿ ಆತಂಕ

ಮಡಿಕೇರಿ, ಜ.24– ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಂಗಳವಾರ ಸಂಜೆ ವರ್ಷದ ಮೊದಲ ಮಳೆ ಸುರಿದಿದೆ. ಜಿಲ್ಲೆಯಲ್ಲಿ ಮೈ ಕೊರೆಯುವ ಚಳಿಯಿದ್ದು, ಮಂಗಳವಾರ ಬೆಳಗಿನಿಂದಲೇ ಮೋಡ ಕವಿದ ವಾತಾವರಣ ಮನೆ ಮಾಡಿತ್ತು. ಸಂಜೆ ವೇಳೆ ಗುಡುಗು ಸಹಿತ ಏಕಾಏಕಿ ಮಳೆ ಸುರಿದಿದೆ.

ಮಡಿಕೇರಿ ನಗರ ಸೇರಿದಂತೆ ಗ್ರಾಮಾಂತರ ಪ್ರದೇಶಗಳು, ಭಾಗಮಂಡಲ, ಬಿಳಿಗೇರಿ, ಗೋಣಿಕೊಪ್ಪ, ಪೊನ್ನಂಪೇಟೆ, ಸೋಮವಾರಪೇಟೆ ಭಾಗಗಳಲ್ಲಿ ಮಳೆ ಸುರಿದಿದೆ. ಮಡಿಕೇರಿ ನಗರ ವ್ಯಾಪ್ತಿಯಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಸಾಧಾರಣ ಮಳೆಯಾಗಿದ್ದರೆ, ಸೋಮವಾರಪೇಟೆ ಮತ್ತು ಪೊನ್ನಂಪೇಟೆ ವ್ಯಾಪ್ತಿಯಲ್ಲಿ ತುಸು ಬಿರುಸಿನಿಂದ ಮಳೆ ಸುರಿದ ಬಗ್ಗೆ ವರದಿಯಾಗಿದೆ. ಈ ಅಕಾಲಿಕ ಮಳೆಯಿಂದ ಕಾಫಿ ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ. ಈಗಾಗಲೇ ಗಿಡಗಳಲ್ಲಿ ಕಾಫಿ ಹಣ್ಣಾಗಿದ್ದು, ಕುಯಿಲು ಕಾರ್ಯ ನಡೆಸಲಾಗುತ್ತಿದೆ. ಇದೀಗ ಮಳೆ ಸುರಿದರೆ ಕಾಫಿ ಹಣ್ಣು ಉದುರುವ ಆತಂಕ ಬೆಳೆಗಾರರನ್ನು ಕಾಡುತ್ತಿದೆ. ಅತಿಯಾದ ಮಳೆಗೆ ಕಾಫಿ ಕಾಯಿಗಳು ಉದುರಿದ್ದು, ಅಳಿದುಳಿದ ಫಸಲು ಕೂಡ ಮಣ್ಣು ಪಾಲಾಗುವ ಭಯ ಬೆಳೆಗಾರರನ್ನು ಕಾಡುತ್ತಿದೆ.

ವಿರಾಜಪೇಟೆಯಲ್ಲಿ ಭಾರೀ ಮಳೆ: ವಿರಾಜಪೇಟೆ ತಾಲೂಕಿನಲ್ಲಿ ಮಂಗಳವಾರ ಸಂಜೆ ಧಾರಾಕಾರ ಮಳೆ ಸುರಿಯಿತು. ಬೆಳಗ್ಗೆಯಿಂದ ಮೋಡ ಕವಿದ ವಾತಾವರಣವಿತ್ತು. ಸಂಜೆ ಜೋರಾಗಿ ಮಳೆ ಸುರಿಯಿತು. ಇಂದು ಸುರಿದ ಮಳೆ ಕಾಫಿ ಬೆಳೆಗಾರರಲ್ಲಿ ಆತಂಕವನ್ನುಂಟು ಮಾಡಿದೆ. ಮಳೆಯಿಂದ ಕರೆಂಟ್ ಕೈಕೊಟ್ಟಿದ್ದು, ತಾಲೂಕಿನ ಕೆಲಭಾಗ ಕಗ್ಗತ್ತಲಿನಿಂದ ಕೂಡಿತ್ತು.

ನಾಳೆ ಚಾ.ನಗರದಲ್ಲಿ ಕಾಂಗ್ರೆಸ್ ಪ್ರಜಾಧ್ವನಿ



ಚುನಾವಣಾ ಪ್ರಚಾರಕ್ಕೆ ಡಿಕೆಸಿ, ಸಿದ್ದು ಟೀಂ

ಮುಂಬರುವ ವಿಧಾನಸಭಾ ಚುನಾವಣಾ ಪ್ರಚಾರಕ್ಕೆ ರಾಜ್ಯಾದ್ಯಂತ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರ ಟೀಂ ಸಿದ್ಧವಾಗಿದೆ ಎಂದು ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಬಿ. ಮರಿಸ್ವಾಮಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜ.11ರಿಂದ ಪ್ರಾರಂಭವಾಗಿರುವ ಪ್ರಜಾಧ್ವನಿ ಬಸ್ ಯಾತ್ರೆಯು ಜ.29ಕ್ಕೆ ಅಂತ್ಯಗೊಳ್ಳಲಿದ್ದು, ನಂತರ ಡಿ.ಕೆ. ಶಿವಕುಮಾರ್ ನೇತೃತ್ವದ ತಂಡ ದಕ್ಷಿಣ ಕರ್ನಾಟಕದಲ್ಲಿ ಹಾಗೂ ಸಿದ್ದರಾಮಯ್ಯ ನೇತೃತ್ವದ ತಂಡ ಉತ್ತರ ಕರ್ನಾಟಕದಲ್ಲಿ ಪ್ರಚಾರ ನಡೆಸಲಿದೆ ಎಂದರು.

ಚಾಮರಾಜನಗರ, ಜ.24– ಕಾಂಗ್ರೆಸ್‌ನಿಂದ ರಾಜ್ಯಾದ್ಯಂತ ಹಮ್ಮಿಕೊಂಡಿರುವ ಪ್ರಜಾಧ್ವನಿ ಬಸ್ ಯಾತ್ರೆ ಜ.26ರ ಗುರುವಾರ ಚಾಮರಾಜನಗರ ಜಿಲ್ಲಾ ಕೇಂದ್ರಕ್ಕೆ ಆಗಮಿಸಲಿದ್ದು, ಇದಕ್ಕಾಗಿ ಜಿಲ್ಲಾ ಕಾಂಗ್ರೆಸ್‌ನಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಬಸ್ ಯಾತ್ರೆಯು ನಗರಕ್ಕೆ ಆಗಮಿಸಲಿದ್ದು, ಮೊದಲಿಗೆ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲಾಗುವುದು. ಆ ನಂತರ ತೆರೆದ ವಾಹನದಲ್ಲಿ ಮೆರವಣಿಗೆ ನಡೆಯಲಿದೆ ಎಂದು ತಿಳಿಸಿದರು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಳ್ಳಲಿದ್ದು, ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ. ಆನಂತರ ಸಂತೇಮರಹಳ್ಳಿ ರಸ್ತೆಯ ರೇಷ್ಮೆ ಕಾರ್ಖಾನೆ ಹತ್ತಿರದ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಯಲಿದೆ ಎಂದರು.

> ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ದುರಾಡಳಿತವನ್ನು ಜನರಿಗೆ ತಿಳಿಸುವುದರ ಜೊತೆಗೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಡೆದಂತಹ ಅಭಿವೃದ್ಧಿ ಕೆಲಸಗಳನ್ನು ತಿಳಿಸುವ ಉದ್ದೇಶದಿಂದ ಪ್ರಜಾಧ್ವನಿ ಬಸ್‌ಯಾತ್ರೆ ಹಮ್ಮಿಕೊಳ್ಳಲಾಗಿದೆ.
> -ಸಿ. ಪುಟ್ಟರಂಗಶೆಟ್ಟಿ, ಶಾಸಕರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಸೇರಿದಂತೆ ರಾಜ್ಯ ಮಟ್ಟದ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ನಂತರ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಕೆಪಿಸಿಸಿ ಹಾಗೂ ಎಐಸಿಸಿ ಆದೇಶದ ಮೇರೆಗೆ ಜಿಲ್ಲೆಯಲ್ಲಿ ಪ್ರಜಾಧ್ವನಿ ಸಮಾವೇಶ ಆಯೋಜಿಸಲಾಗಿದ್ದು, ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರದಿಂದ ಅಂದಾಜು 60 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು. ಕಾಂಗ್ರೆಸ್ ಸರ್ಕಾರ ನೀಡಿದ 165 ಭರವಸೆಗಳನ್ನು ಈಡೇರಿಸುವ ಮೂಲಕ ನುಡಿದಂತೆ ನಡೆದಿದ್ದು, ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ನಡೆದಂತಹ ಅಭಿವೃದ್ಧಿ ಕೆಲಸಗಳನ್ನು ಜನರಿಗೆ ಮನವರಿಕೆ ಮಾಡುವ ಜೊತೆಗೆ ಹೊಸ ಪ್ರಣಾಳಿಕೆ ಘೋಷಿಸುವ ಉದ್ದೇಶದಿಂದ ಸಮಾವೇಶ ನಡೆಯಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಮಾಜಿ ಅಧ್ಯಕ್ಷ ಉಮೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್, ಮುಖಂಡರಾದ ಮಹಮದ್ ಅಸ್ಗರ್ ಮುನ್ನಾ, ಮಹದೇವನಾಯಕ, ಕಾಂಗ್ರೆಸ್‌ನ ಮಾಧ್ಯಮ ಪ್ರಮುಖ್ ವಕೀಲ ಅರುಣ್‌ಕುಮಾರ್ ಹಾಜರಿದ್ದರು.

ಕೊಳ್ಳೇಗಾಲ ಕಾಲೇಜಿನಲ್ಲಿ ಅಪಾಯಕಾರಿ ಕಾಡು ಹೆಜ್ಜೇನು ಗೂಡು

ಕೊಳ್ಳೇಗಾಲ, ಜ.24– ಕಾಡು ಜೀರ (ಕಾಡು ಹೆಜ್ಜೇನು) ಕೀಟ ಅತ್ಯಂತ ಅಪಾಯಕಾರಿ ಕೀಟಗಳ ಪ್ರಬೇಧ. ದುರ್ಗಮ ಅರಣ್ಯ ಪ್ರದೇಶಗಳಲ್ಲಿ ಗೂಡು ಕಟ್ಟಿಕೊಂಡು ವಾಸಿಸುವ ಕೀಟವಿದು. ಈ ಕೀಟಗಳು




ಕಚ್ಚಿದರೆ ಮೈ ಕೈ ಉರಿ ಕಾಣಿಸಿಕೊಳ್ಳುತ್ತೆ ಜ್ವರ ಬಾಧಿಸುತ್ತೆ ಜೊತೆಗೆ 10ಕ್ಕೂ ಹೆಚ್ಚು ಹುಳುಗಳು ಕಚ್ಚಿದರೆ ಸಾವು ಖಚಿತ ಎಂಬ ಮಾತಿದೆ. ಹಾಗಾಗಿ ಇದು ಅತ್ಯಂತ ಅಪಾಯಕಾರಿ ಕೀಟ ಎಂದು ಹೇಳಲಾಗುತ್ತದೆ. ಈ ಕೀಟವನ್ನು ಕಾಡು ಜೀರ, ಕಾಡಿನಲ್ಲಿ ವಾಸಿಸುವ ವಿಷಕಾರಿ ಹೆಜ್ಜೇನು ಎಂದು ಕೂಡ ಕರೆಯಲಾಗುತ್ತದೆ.

ಕೊಳ್ಳೇಗಾಲದ ಮಹದೇಶ್ವರ ಪ್ರಥಮ ದರ್ಜೆ ಕಾಲೇಜಿನ ಮರವೊಂದಕ್ಕೆ ಈ ಕೀಟ ಗೂಡು ಕಟ್ಟಿದ್ದು, ಆತಂಕಕ್ಕೆ ಮನೆ ಮಾಡಿದೆ. ಕಳೆದ 20–25 ದಿನಗಳ ಹಿಂದಿನಿಂದ ಈ ಗೂಡು ಕಟ್ಟಿದ್ದು, ಪ್ರಾರಂಭದಲ್ಲಿ ಸಣ್ಣ ಪಕ್ಷಿಯ ಗೂಡಿನಂತೆ ಮಣ್ಣಿನಿಂದ ಗೂಡು ನಿರ್ಮಿಸಿದ್ದು, ಈಗ ಕುಂಬಳಕಾಯಿ ಗಾತ್ರವನ್ನೇ ಹೋಲುತ್ತಿದೆ. ಈ ಪ್ರಬೇಧ ದಾವಣಗೆರೆಯ ಮಾವಿನ ಮರವೊಂದರಲ್ಲಿ ಕಂಡು ಬಂದಿತಂತೆ. ಬಳಿಕ ಅರಣ್ಯಾಧಿಕಾರಿಗಳ ಸಮ್ಮುಖದಲ್ಲಿ ತೆರವು ಮಾಡಲಾಗಿತ್ತು. ಕಾಡಿನಲ್ಲಿ ಗೂಡು ಕಟ್ಟುವ ಈಪ್ರಬೇಧ ಇತ್ತೀಚಿನ ದಿನಗಳಲ್ಲಿ ಪಟ್ಟಣದತ್ತ ವಲಸೆ ಬಂದು ಗೂಡು ಕಟ್ಟುತ್ತಿರುವುದು ಆತಂಕಕ್ಕೆ ಕಾರಣವಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ಕಾಲೇಜಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ.

ಪ್ರಾಂಶುಪಾಲರಿಂದ ಪತ್ರ: ಈ ಸಂಬಂಧ ಪ್ರಾಂಶುಪಾಲರಾದ ಜಯಲಕ್ಷ್ಮಿ ಅವರು, ನಮ್ಮ ಕಾಲೇಜಿನ ಮರದಲ್ಲಿ ಕಾಡು ಜೀರ ಹುಳು ಗೂಡು ಕಟ್ಟಿದ್ದು, ಇದು ಅತ್ಯಂತ ಅಪಾಯಕಾರಿಯಾಗಿದೆ. ಕಾಲೇಜಿನ ವಿದ್ಯಾರ್ಥಿಗಳ ಸುರಕ್ಷತೆಯ ದೃಷ್ಟಿಯಿಂದ ಈ ಗೂಡು ತೆರವುಗೊಳಿಸುವಂತೆ ಅರಣ್ಯ ಇಲಾಖಾಧಿಕಾರಿಗಳಿಗೆ ಪತ್ರ ಬರೆದು ಮನವಿ ಮಾಡಿರುವುದಾಗಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ಕೀಟ ಪ್ರಬೇಧದ ಗೂಡು ವಿದ್ಯಾರ್ಥಿಗಳು ಹಾಗೂ ಕಾಲೇಜು ಸಿಬ್ಬಂದಿಗಳಲ್ಲಿ ಆತಂಕ ಮೂಡಿಸಿದ್ದು, ತಕ್ಷಣ ಜರೂರು ಕ್ರಮ ಆಗಬೇಕು ಎಂದು ಸಾರ್ವಜನಿಕರು, ಪೋಷಕರು ಆಗ್ರಹಿಸಿದ್ದಾರೆ.

ಚಾ.ನಗರದ ಎಲ್ಲಾ ವಾರ್ಡ್‌ಗಳಲ್ಲಿ ಖಾತಾ ಆಂದೋಲನ ನಡೆಸಲು ಆಗ್ರಹ



ಚಾಮರಾಜನಗರ, ಜ.24– ನಗರಸಭೆ ವ್ಯಾಪ್ತಿಯ ಎಲ್ಲಾ 31 ವಾರ್ಡ್‌ಗಳಲ್ಲಿ ಖಾತಾ ಆಂದೋಲನ ನಡೆಸಬೇಕು ಎಂದು ಸದಸ್ಯರು ಆಗ್ರಹಿಸಿದರು.

ನಗರದ ನಗರಸಭೆ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷೆ ಆಶಾ ನಟರಾಜು ನೇತೃತ್ವದಲ್ಲಿ ನಡೆದ ಸಾಮಾನ್ಯ ಸಭೆಯ ಆರಂಭದಲ್ಲಿ ಮಾತನಾಡಿದ ಸದಸ್ಯರು, ನಗರದ ಏಳನೇ ವಾರ್ಡ್‌ನಲ್ಲಿ ಮಾತ್ರ ಖಾತಾ ಆಂದೋಲನ ನಡೆಸಲಾಗಿದ್ದು, ಉಳಿದ ವಾರ್ಡ್‌ಗಳಲ್ಲಿ ನಡೆಸಿಲ್ಲ. ಬಹುತೇಕ ಎಲ್ಲಾ ವಾರ್ಡ್‌ಗಳಲ್ಲೂ 60ರಿಂದ 70 ವರ್ಷಗಳಿಂದ ಖಾತೆಯಾಗಿಲ್ಲ. ಇದರಿಂದ ಜನರಿಗೆ ತೊಂದರೆಯಾಗಿದ್ದು, ಕೂಡಲೇ ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಖಾತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ತಿಳಿಸಿದರು.

ಸದಸ್ಯರಾದ ಬಸವಣ್ಣ, ಕಲೀಲ್ ಉಲ್ಲಾ ಮಾತನಾಡಿ, ಈಗಾಗಲೇ ಇ–ಸ್ವತ್ತಿಗಾಗಿ ನಗರಸಭೆಗೆ ಅರ್ಜಿ ಸಲ್ಲಿಸಲಾಗಿದ್ದು, ಇವುಗಳನ್ನು ಆದಷ್ಟು ಬೇಗ ಇತ್ಯರ್ಥಪಡಿಸಬೇಕು ಎಂದು ತಿಳಿಸಿದರು.

ಪೌರಾಯುಕ್ತ ಎಸ್.ವಿ. ರಾಮದಾಸ್ ಮಾತನಾಡಿ, ಖಾತೆಗೆ ಅರ್ಜಿ ಸಲ್ಲಿಸಿ ಖಾತೆಗಳಾಗದಿರುವ ಬಗ್ಗೆ ಹಲವು ದೂರುಗಳು ಬಂದಿದ್ದು, ಬಾಕಿ ಇರುವ ಅರ್ಜಿಗಳನ್ನು ಶೀಘ್ರವೇ ಇತ್ಯರ್ಥ ಪಡಿಸಲಾಗುವುದು. ಈ ನಿಟ್ಟಿನಲ್ಲಿ ಸಭೆ ನಡೆಸಿ ಅಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಲಾಗುವುದು ಎಂದು ತಿಳಿಸಿದರು.

ಮೂಲ ಸೌಲಭ್ಯಕ್ಕೆ ಆಗ್ರಹ: ನಗರಸಭಾ ವ್ಯಾಪ್ತಿಯ ಮೂರನೇ ವಾರ್ಡ್‌ನಲ್ಲಿರುವ ಆಶ್ರಯ ಬಡಾವಣೆಗೆ ಮೂಲ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿ ಸದಸ್ಯರಾದ ಮಹಮ್ಮದ್ ಅಮೀಕ್, ಎಂ. ಮಹೇಶ್, ತೌಸಿಯಾಬಾನು, ಕಲೀಲ್ ಉಲ್ಲಾ ಸೇರಿದಂತೆ ಇತರೆ ಸದಸ್ಯರು ಪ್ರತಿಭಟನೆ ನಡೆಸಿದರು. ಬಡಾವಣೆಯಲ್ಲಿ ಈವರೆಗೆ ಕುಡಿಯುವ ನೀರು ಕಲ್ಪಿಸಿಲ್ಲ, ಸಮರ್ಪಕ ವಿದ್ಯುತ್ ಸೌಲಭ್ಯವಿಲ್ಲ, ಚರಂಡಿ ವ್ಯವಸ್ಥೆ ಇಲ್ಲ ಎಂದೆಲ್ಲಾ ದೂರಿ ನಗರಸಭೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಪೌರಾಯುಕ್ತ ರಾಮದಾಸ್ ಅವರು ಸಮಸ್ಯೆ ಪರಿಹರಿಸುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಹಿಂಪಡೆದರು. ಸಭೆಯಲ್ಲಿ ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಉಪಾಧ್ಯಕ್ಷೆ ಪಿ. ಸುಧಾ ಸೇರಿದಂತೆ ಇತರರು ಇದ್ದರು.

ಸಾರಿಗೆ ನೌಕರರ ಧರಣಿ ಸತ್ಯಾಗ್ರಹ




ಚಾಮರಾಜನಗರ, ಜ.24– ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ವತಿಯಿಂದ ನಗರದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಧರಣಿ ಸತ್ಯಾಗ್ರಹ ನಡೆಸಿ, ನಂತರ ಸಾರಿಗೆ ಬಸ್ ನಿಲ್ದಾಣದಲ್ಲಿರುವ ವಿಭಾಗೀಯ ನಿಯಂತ್ರಣಾಧಿಕಾರಿ ಕಚೇರಿಗೆ ತೆರಳಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ ಅವರ ಮುಖಾಂತರ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು.


ಧರಣಿ ಸತ್ಯಾಗ್ರಹದ ನೇತೃತ್ವ ವಹಿಸಿದ್ದ ಜಂಟಿ ಕ್ರಿಯಾ ಸಮಿತಿ ಚಾಮರಾಜನಗರ ವಿಭಾಗದ ಅಧ್ಯಕ್ಷ ಕೆ.ಆರ್.ನಾಗರಾಜು ಮಾತನಾಡಿ, ಮೂಲವೇತನಕ್ಕೆ ಬಿಡಿಎ ವಿಲೀನಗೊಳಿಸಿ ಪರಿಷ್ಕೃತ ಮೂಲ ವೇತನದ ಶೇ.25 ರಷ್ಟನ್ನು ಹೆಚ್ಚಳ ಮಾಡಿ, ವೇತನ ಶ್ರೇಣಿಯನ್ನು ಸಿದ್ದಪಡಿಸತಕ್ಕದ್ದು, ಇನ್ಕ್ರಿಮೆಂಟ್ ದರ ಪರಿಷ್ಕೃತ ಮೂಲವೇತನ ಶೇ. 3 ಇರತಕ್ಕದ್ದು. ಆಯ್ಕೆ ಶ್ರೇಣಿ ಹಾಗೂ ಉನ್ನತ ಶ್ರೇಣಿಗಳ ವೇತನ ಶ್ರೇಣಿಯನ್ನೂ ಸಹ ಮೇಲೆ ತಿಳಿಸಿರುವ ರೀತಿಯಲ್ಲಿಯೇ ವೇತನ ಶ್ರೇಣಿಯನ್ನು ಸಿದ್ಧಪಡಿಸಬೇಕು. ಆಯ್ಕೆ ಶ್ರೇಣಿ ಹಾಗೂ ಉನ್ನತ ಶ್ರೇಣೀಗಳ ವೇತನ ಶ್ರೇಣಿಗಳ ಇನ್ಕ್ರಿಮೆಂಟ್ ದರ ಪರಿಷ್ಕೃತ ಆಯ್ಕೆ ಶ್ರೇಣಿ ಹಾಗೂ ಉನ್ನತ ಶ್ರೇಣಿಗಳ ಮೂಲ ವೇತನದ ಶೇ. 3 ಇರಬೇಕು. ಆಯ್ಕೆ ಶ್ರೇಣಿ ಬಡ್ತಿಯನ್ನು ಸೇವಾವಧಿಯ ಪ್ರತಿ 10 ವರ್ಷಕ್ಕೊಮ್ಮೆ ನೀಡಬೇಕು ಎಂದು ಆಗ್ರಹಿಸಿದರು.

ಚಾಲಕರು, ನಿರ್ವಾಹಕರು, ತಾಂತ್ರಿಕ ಹಾಗೂ ಆಡಳಿತ ಸಿಬ್ಬಂದಿಗಳಿಗೂ ಮತ್ತು ಇತರ ಎಲ್ಲಾ ನೌಕರರಿಗೂ ಹಾಲಿ ಇರುವ ಬಾಟಾ, ಮಾಸಿಕ/ದೈನಂದಿನ ಭತ್ಯೆಗಳನ್ನು ಐದುಪಟ್ಟು ಹೆಚ್ಚಿಸಬೇಕು. ಹೊಲಿಗೆ ಭತ್ಯೆ, ಷೂ, ಜೆರ್ಸಿ, ರೈನ್ ಕೋಟ್ ಇತ್ಯಾದಿಗಳಿಗೆ ಕೊಡಲಾಗುವ ಮೊತ್ತವನ್ನು ಮೂರು ಪಟ್ಟು ಹೆಚ್ಚಿಸಬೇಕು. ಎಲ್ಲಾ ನಿರ್ವಾಹಕರಿಗೂ ಕ್ಯಾಷಿಯರ್‌ಗಳಿಗೆ ಸಮಾನವಾದ ಕ್ಯಾಷ್ ಅಲೋವೆನ್ಸ್ ನೀಡಬೇಕು. ಇಎಸ್‌ಐ ಮಾದರಿಯಲ್ಲಿ ಆಡಳಿತ ವರ್ಗದವರಿಂದ ನೌಕರರ ಮೂಲ ವೇತನ ಶೇ3.5 ಹಾಗೂ ಕಾರ್ಮಿಕರಿಂದ ಶೇ.0.5 ವಂತಿಗೆ ಸಂಗ್ರಹಿಸಿ ಟ್ರಸ್ಟ್ ರಚಿಸಿ ಈ ಮೂಲಕ ಸಾರಿಗೆ ನೌಕರರಿಗೆ ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡುವಂತೆ ಯೋಜನೆ ರೂಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಂಟಿ ಕ್ರಿಯಾ ಸಮಿತಿಯ ಚಾಮರಾಜನಗರ ವಿಭಾಗದ ಪ್ರಧಾನ ಕಾರ್ಯದರ್ಶಿ ರಾಜೇಶ್ ಮಡಹಳ್ಳಿ, ಖಜಾಂಚಿ ಬಸವರಾಜೇಗೌಡ, ಎಸ್‌ಸಿ, ಎಸ್‌ಟಿ ವಿಭಾಗದ ಗೌರವ ಅಧ್ಯಕ್ಷ ರಂಗ ಸ್ವಾಮಿ, ಅಧ್ಯಕ್ಷ ಎಂ.ಸಿ. ಸಿದ್ದರಾಜು ಇತರರು ಭಾಗವಹಿಸಿದ್ದರು.

ತಾಯಿ, ಮಗಳು ನಾಪತ್ತೆ





ಚಾಮರಾಜನಗರ, ಜ.24– ಚಂದಕವಾಡಿ ಗ್ರಾಮದ ನಿವಾಸಿಯಾದ ಉಮಾ ಮತ್ತು ಅವರ ಮಗಳು ಅನುಶ್ರೀ ಕಾಣೆಯಾಗಿದ್ದು, ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಳಿವು ದೊರೆತಲ್ಲಿ ಎಸ್ಪಿ ದೂ.ಸಂ 08226–222243, ಪೂರ್ವ ಪೊಲೀಸ್ ಠಾಣೆ ದೂ.ಸಂ 08226–222058, ಜಿಲ್ಲಾ ನಿಯಂತ್ರಣ ಕೊಠಡಿ ದೂ.ಸಂ. 08226–222383 ಸಂಪರ್ಕಿಸುವಂತೆ ಪೂರ್ವ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ: ನಗರದಲ್ಲಿ ಗಮನಸೆಳೆದ ಅರಿವು ಜಾಥಾ

ಚಾಮರಾಜನಗರ, ಜ.24– ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ನಗರದಲ್ಲಿ ಅರಿವು ಜಾಥಾ ಕಾರ್ಯಕ್ರಮ ನಡೆಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಮಕ್ಕಳ ಕಲ್ಯಾಣ ಸಮಿತಿ, ಬಾಲನ್ಯಾಯ ಮಂಡಳಿ, ಶ್ರೀ ವರಮಹಾಲಕ್ಷ್ಮಿ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆ, ಮೊಬಿಲಿಟಿ ಇಂಡಿಯಾ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಜಾಥಾಗೆ ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ. ಶ್ರೀಧರ ಅವರು ಚಾಲನೆ ನೀಡಿದರು. ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಿಂದ ಹೊರಟ ಜಾಥಾ ಜೈಭುವನೇಶ್ವರಿ ವೃತ್ತ, ಬಿ. ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತಲುಪಿತು. ಬಳಿಕ ಗಣ್ಯರು ಜಿಲ್ಲಾಡಳಿತ ಭವನದ ಆವರಣದಲ್ಲಿ ಗಿಡ ನೆಟ್ಟರು.

ತದ ನಂತರ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಚೇರಿ ಸಭಾಂಗಣದಲ್ಲಿ ಬೇಟಿ ಬಚಾವೊ ಬೇಟಿ ಪಡಾವೋ ಮತ್ತು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ–2023 ರ ಅಂಗವಾಗಿ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಗೀತಾ ಲಕ್ಷ್ಮಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ. ಮಂಜುನಾಥ ಪ್ರಸನ್ನ, ಶ್ರೀ ವರಮಹಾಲಕ್ಷ್ಮಿ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆ ಅಧ್ಯಕ್ಷ ಜಿ. ಬಂಗಾರು, ಕಾರ್ಮಿಕ ಇಲಾಖೆಯ ಎಂ. ಮಹೇಶ್, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗೋವಿಂದರಾಜು, ಮೊಬಿಲಿಟಿ ಇಂಡಿಯಾದ ಮುಖ್ಯಸ್ಥ ರಾಜಣ್ಣ ಉಪಸ್ಥಿತರಿದ್ದರು.



ಒಂದನೇ ಪುಟದಿಂದ

ರಾಜ್ಯ ವಿಧಾನಸಭಾ ಚುನಾವಣೆ

ಈ ಬಾರಿಯು ರಾಜ್ಯ ಸರ್ಕಾರದ ಸರ್ಕಾರಿ ನೌಕರರ ಜೊತೆ ಕೇಂದ್ರ ಸರ್ಕಾರಿ ನೌಕರರನ್ನು ಚುನಾವಣೆಗೆ ಬಳಕೆ ಮಾಡಿಕೊಳ್ಳಲಿದೆ. ಕಳೆದ ಬಾರಿ ಮೇ 12ರಂದು ಒಂದೇ ಹಂತದಲ್ಲಿ 222 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ಹಾಗೂ ಉಳಿದ ಎರಡು ಕ್ಷೇತ್ರಗಳಿಗೆ ಮೇ 18 ಹಾಗೂ ಜೂನ್ ತಿಂಗಳಲ್ಲಿ ಮತ್ತೊಂದು ಕ್ಷೇತ್ರಕ್ಕೆ ಚುನಾವಣೆ ನಡೆದಿತ್ತು. ಮೇ 15ರಂದು ಫಲಿತಾಂಶ ಪ್ರಕಟವಾಗಿ ಅತಂತ್ರ ವಿಧಾನ ಸಭೆ ಅಸ್ತಿತ್ವಕ್ಕೆ ಬಂದಿತು. ಮಾರ್ಚ್ ಕೊನೆಯ ಭಾಗದಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣಾ ವೇಳಾಪಟ್ಟಿ ಪ್ರಕಟವಾಗಲಿದೆ ಎಂಬ ನಿರೀಕ್ಷೆಯಲ್ಲಿ ಆಡಳಿ ತಾರೂಢ ಬಿಜೆಪಿ ಪ್ರತಿಪಕ್ಷ ಕಾಂಗ್ರೆಸ್ ಹಾಗೂ ಜೆಡಿಎಸ್ ಮತದಾರರನ್ನು ಓಲೈಸಲು ಬೀದಿಗಿಳಿದು ಪ್ರಚಾರ ಆರಂಭಿಸಿವೆ. ಮತದಾರರನ್ನು ಸೆಳೆಯಲು ಭರವಸೆಗಳ ಮಹಾಪೂರವನ್ನೇ ಹರಿಸುತ್ತಿವೆ.

ಮಚ್ಚಿನಿಂದ ವ್ಯಕ್ತಿ ಮೇಲೆ ಭೀಕರ ಹಲ್ಲೆ

ನಡೆಸಲಾಗಿದೆ. ಹಲ್ಲೆ ನಡೆಸಿದ ಪರಿಯಿಂದ ನೆರೆದಿದ್ದ ನೂರಾರು ಮಂದಿ ಭಯಭೀತರಾಗಿ, ಚಿಲ್ಲಾಪಿಲ್ಲಿಯಾಗಿದ್ದಾರೆ. ಕೆಲವರು, ಹಲ್ಲೆ ನಡೆದ ವ್ಯಕ್ತಿ ಮೇಲೆ ಕಲ್ಲು ತೂರಿ, ಹಿಡಿದು ಪೊಲೀಸರಿಗೊಪ್ಪಿಸಿ, ಹಲ್ಲೆಗೀಡಾದವರ ಕೂಡಲೇ ಆಸ್ಪತ್ರೆಗೆ ಸಾಗಿಸಿದ್ದಾರೆ.

ತಾಲೂಕಿನ ಕೊಪ್ಪ ಹೋಬಳಿ ಮರಳಗೆ ಗ್ರಾಮದ ನಿವಾಸಿ ಚನ್ನರಾಜು(45) ಹಲ್ಲೆಗೊಳಗಾದವರಾಗಿದ್ದು, ಅದೇ ಗ್ರಾಮದ ನಂದನ್ ಭೀಕರವಾಗಿ ಹಲ್ಲೆ ನಡೆಸಿದ್ದಾನೆ.

ವಿವರ: ಮರಳಗೆ ಗ್ರಾಮದ ಜಮೀನು ವಿವಾದ ಕೆಲವು ವರ್ಷಗಳಿಂದ ಸ್ಥಳೀಯ ತಹಶೀಲ್ದಾರ್ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿತ್ತು. ಅದಕ್ಕೆ ಸಂಬಂಧಿಸಿದಂತೆ ಚನ್ನರಾಜು ಹಾಗೂ ನಂದನ್ ಮಂಗಳವಾರ ತಾಲೂಕು ಕಚೇರಿಯ ತಹಶೀಲ್ದಾರ್ ಕೋರ್ಟ್‌ಗೆ ಹಾಜರಾಗಿದ್ದರು. ಕಲಾಪ ಇನ್ನೂ ಆರಂಭಗೊಳ್ಳದ ಹಿನ್ನೆಲೆಯಲ್ಲಿ ತಹಶೀಲ್ದಾರ್ ಕೊಠಡಿ ಬಳಿ ಕಾಯುತ್ತಿದ್ದರು. ಈ ವೇಳೆ ಏಕಾಏಕಿ ನಂದನ್, ಚನ್ನರಾಜು ಕಣ್ಣಿಗೆ ಖಾರದ ಪುಡಿ ಎರಚಿ, ತಾನು ತಂದಿದ್ದ ಮಚ್ಚಿನಿಂದ ಹಲ್ಲೆಗೆ ಮುಂದಾಗಿದ್ದಾನೆ. ಈ ವೇಳೆ ತಪ್ಪಿಸಿಕೊಳ್ಳಲು ಚನ್ನರಾಜು ತಾಲೂಕು ಕಚೇರಿ ಮೊದಲ ಮಹಡಿಯಿಂದ ಓಡಲಾರಂಭಿಸಿ, ಕಚೇರಿ ಮುಂದಿನ ಆವರಣದವರೆಗೂ ಬಂದಿದ್ದಾನೆ. ಆದರೆ ನಂದನ್ ಅಟ್ಟಾಡಿಸಿಕೊಂಡು, ಮಚ್ಚು ಬೀಸಿದ್ದಾನೆ. ಈ ವೇಳೆ ಚನ್ನರಾಜು ವಾಹನ ನಿಲುಗಡೆ ಸ್ಥಳದಲ್ಲಿ ಬಂದು ಕೆಳಗೆ ಬಿದ್ದಿದ್ದು, ಹಿಂದೆ-ಮುಂದೆ ನೋಡದೇ ನಂದನ್ 20ಕ್ಕೂ ಹೆಚ್ಚು ಬಾರಿ ಮಚ್ಚು ಬೀಸಿದ್ದಾನೆ. ತೀವ್ರ ರಕ್ತಸ್ರಾವದಿಂದ ಚನ್ನರಾಜು ನರಳಾಡ ಲಾರಂಭಿಸುತ್ತಿದ್ದಂತೆಯೇ ಅಲ್ಲಿದ್ದ ಸಾರ್ವಜನಿಕರು ಸಮಯಪ್ರಜ್ಞೆ ಮೆರೆದು ಹಲ್ಲೆಕೋರನ ಮೇಲೆ ಕಲ್ಲು ತೂರಿ, ನಂತರ ಹಿಡಿದು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ವೇಳೆ ತೀವ್ರವಾಗಿ ಗಾಯಗೊಂಡ ಚನ್ನರಾಜು ಸ್ಥಿತಿ ಗಂಭೀರವಾಗಿದ್ದು, ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಮಂಡ್ಯದ ಮಿಮ್ಸ್‌ಗೆ ದಾಖಲಿಸಲಾಗಿದೆ. ಸಾರ್ವಜನಿಕರ ಹಲ್ಲೆಯಿಂದ ಗಾಯಗೊಂಡ ಆರೋಪಿ ನಂದನ್‌ನನ್ನು ಮದ್ದೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಚನ್ನರಾಜು ಅವರ ಪತ್ನಿ ಪದ್ಮ ನೀಡಿದ ದೂರಿನ ಮೇರೆಗೆ ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಸ್ಥಳಕ್ಕೆ ತಹಶೀಲ್ದಾರ್ ಟಿ.ಎನ್.ನರಸಿಂಹಮೂರ್ತಿ, ಮದ್ದೂರು ಗ್ರಾಮಾಂತರ ವೃತ್ತ ನಿರೀಕ್ಷಕ ಮನೋಜ್‌ಕುಮಾರ್, ಎಸ್‌ಐಗಳಾದ ಉಮೇಶ್, ರವಿ ಭೇಟಿ ನೀಡಿ ಪರಿಶೀಲಿಸಿದರು.

ಹಳೇ ದ್ವೇಷದಿಂದ ಹಲ್ಲೆ: ಸ್ಥಳದಲ್ಲಿದ್ದ ಹಲ್ಲೆಗೊಳಗಾದ ಚನ್ನರಾಜು ಪತ್ನಿ ಪದ್ಮಮ್ಮ ಮಾತನಾಡಿ, ನನ್ನ ಮಗಳು ಪ್ರೀತಿಸಿದವನನ್ನು ನಾವು ನಿರಾಕರಿಸಿದ್ದೆವು. ಆದರೆ, ನಮ್ಮನ್ನು ಲೆಕ್ಕಿಸದೇ ನನ್ನ ಮಗಳನ್ನು ಕರೆದುಕೊಂಡು ಹೋಗಿ ಯುವಕನೊಬ್ಬನ ಜೊತೆ ನಂದನ್ ಸೇರಿದಂತೆ ಇನ್ನಿತರರು ಮದುವೆ ಮಾಡಿಸಿದ್ದರು. ಈ ವಿಚಾರವನ್ನು ಸ್ವತಃ ನನ್ನ ಮಗಳೆ ತಿಳಿಸಿದ್ದಳು. ಅಲ್ಲಿಂದ ನಮಗೂ ಅವರ ನಡುವೆ ದ್ವೇಷ ಬೆಳೆದಿತ್ತು. ಈ ವಿಚಾರವಾಗಿ ಆಗಾಗ್ಗೆ ಜಗಳ ನಡೆಯುತ್ತಿತ್ತು. ನಮ್ಮನ್ನು ಕೊಲ್ಲುವುದಾಗಿ ನಂದನ್ ಬೆದರಿಕೆ ಹಾಕಿದ್ದ. ಈ ಹಿನ್ನೆಲೆಯಲ್ಲಿ ನಂದನ್ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿದ್ದೆವು ಎಂದರು. ನಮಗೆ ಪಿತ್ರಾರ್ಜಿತವಾಗಿ ಬಂದಿದ್ದ ಜಮೀನನ್ನು ಪತಿ ಚನ್ನರಾಜು, ನನ್ನ ಹಾಗೂ ನನ್ನ ಮಗಳ ಹೆಸರಿಗೆ ಖಾತೆ ಮಾಡಿಸಿದ್ದರು. ನಮಗೂ ಹಾಗೂ ನಂದನ್‌ಗೂ ಯಾವುದೇ ಸಂಬಂಧವಿಲ್ಲದಿದ್ದರೂ ನಂದನ್ ಜಮೀನಿನಲ್ಲಿ ನನಗೂ ಪಾಲು ಬರಬೇಕೆಂದು ಕೇಸ್ ಹಾಕಿದ್ದ. ಈ ಸಂಬಂಧ ಗ್ರಾಮದಲ್ಲಿ ರಾಜೀ ಪಂಚಾಯಿತಿ ನಡೆದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಕೊನೆಗೆ ತಹಶೀಲ್ದಾರ್ ಕೋರ್ಟ್‌ಗೆ ವ್ಯಾಜ್ಯ ದಾಖಲಿಸಿದ್ದೆವು. ಮಂಗಳವಾರ ಕೋರ್ಟ್ ಇದ್ದ ಕಾರಣ ತಾಲೂಕು ಕಚೇರಿಗೆ ಆಗಮಿಸಿದ್ದೆವು. ಈ ವೇಳೆ ನಂದನ್ ನನ್ನ ಗಂಡ ಚನ್ನರಾಜು ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದ. ಅದನ್ನು ತಡೆಯಲು ಹೋದ ನನ್ನ ಕೈ, ಕಿವಿ, ತಲೆ, ಬೆನ್ನಿಗೆ ತೀವ್ರ ಪೆಟ್ಟಾಗಿದೆ. ಮನಸ್ಸೋ ಇಚ್ಛೆ ನನ್ನ ಗಂಡನ ಮೇಲೆ ಹಲ್ಲೆ ನಡೆಸುತ್ತಿದ್ದಾಗ ನನ್ನ ಗಂಡನನ್ನು ರಕ್ಷಿಸುವಂತೆ ಅಂಗಲಾಚಿ ಕಾಲುಹಿಡಿದು ಬೇಡಿಕೊಂಡರೂ ಯಾರೂ ಬಿಡಿಸಲಿಲ್ಲ. ವಕೀಲರೊಬ್ಬರು ಕಲ್ಲಿನಲ್ಲಿ ಹೊಡೆದಾಗ ನಂದನ್ ಹಲ್ಲೆ ಮಾಡುವುದನ್ನು ನಿಲ್ಲಿಸಿದ. ಹೀಗಾಗಿ ನಂದನ್ ವಿರುದ್ಧ ಸೂಕ್ತ ಕ್ರಮ ಕೈಗೊಂಡು ನ್ಯಾಯ ದೊರಕಿಸಿಕೊಡಬೇಕು ಎಂದು ಪದ್ಮ ಒತ್ತಾಯಿಸಿದರು.

ಮಿಮ್ಸ್‌ಗೆ ಎಸ್ಪಿ ಭೇಟಿ: ಮಂಡ್ಯದ ಮಿಮ್ಸ್‌ಗೆ ಭೇಟಿ ನೀಡಿದ ಎಸ್.ಪಿ.ಯತೀಶ್, ಚನ್ನರಾಜು ಆರೋಗ್ಯ ಸ್ಥಿತಿ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದರು.

ಅನಾಹುತ ನಡೆದರೆ ಅಧಿಕಾರಿಗಳ ತಲೆದಂಡ

ಮುಖ್ಯಮಂತ್ರಿಗಳು ನಿರ್ಧರಿಸಲಿದ್ದಾರೆ. ನಾನಿಲ್ಲಿ ನೊಂದವರಿಗೆ ಸಾಂತ್ವನ ಹೇಳಲು ಬಂದಿದ್ದೇನೆ. ಈ ಸಂದರ್ಭದಲ್ಲಿ ಪರಿಹಾರದ ಬಗ್ಗೆ ಚರ್ಚಿಸುವುದು ಸರಿಯಲ್ಲ ಎಂದರು.

ಪೊದೆಗಳ ತೆರವುಗೊಳಿಸಿ: ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, ಗ್ರಾಮಗಳಲ್ಲಿರುವ ಪೊದೆಗಳನ್ನು ತೆರವುಗೊಳಿಸಲು ತಾಲೂಕು ಆಡಳಿತ, ಅರಣ್ಯ ಇಲಾಖೆ ಹಾಗೂ ಗ್ರಾಪಂಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರು ಕೂಡ ತಮ್ಮ ನಿವೇಶನಗಳನ್ನು ಸ್ವಚ್ಛಗೊಳಿಸಬೇಕು. ಎಲ್ಲಾ ಕೆಲಸವನ್ನೂ ನಾವು ಅಧಿಕಾರಿಗಳ ಮೇಲೆ ಹಾಕಲು ಸಾಧ್ಯವಿಲ್ಲ. ಇದರಲ್ಲಿ ಪ್ರತಿಯೊಬ್ಬರ ಜವಾಬ್ದಾರಿಯೂ ಇದೆ ಎಂದು ಸಲಹೆ ನೀಡಿದರು. ಇದೇ ವೇಳೆ ಚಿರತೆ ಮೇಕೆಯೊಂದನ್ನು ತಿಂದಿರುವ ಬಗ್ಗೆ ದೂರು ಸಲ್ಲಿಸಿ ಪರಿಹಾರಕ್ಕೆ ಮನವಿ ಮಾಡಿದರೂ ಕ್ರಮ ಕೈಗೊಂಡಿಲ್ಲ ಎಂದು ಸಾರ್ವಜನಿಕರು ದೂರಿದ್ದರಿಂದ ಕೂಡಲೇ ಈ ಬಗ್ಗೆ ಕ್ರಮ ವಹಿಸಬೇಕೆಂದು ವಲಯ ಅರಣ್ಯಾಧಿಕಾರಿ ನದೀಮ್ ಅವರಿಗೆ ಶಾಸಕರು ತಾಕೀತು ಮಾಡಿದರು.

ಸಿದ್ದಮ್ಮ ಕುಟುಂಬಕ್ಕೆ ಪರಿಹಾರ: ಇದಕ್ಕೂ ಮುನ್ನಾ ಸಚಿವರು ಕನ್ನಾಯಕನಹಳ್ಳಿಗೆ ತೆರಳಿ ಮೃತ ಸಿದ್ದಮ್ಮನ ಕುಟುಂಬದವರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರಲ್ಲದೆ ಪರಿಹಾರದ 15 ಲಕ್ಷ ರೂ. ಚೆಕ್ ನೀಡಿದರು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಡಿವೈಎಸ್ಪಿ ಗೋವಿಂದರಾಜು, ತಹಶೀಲ್ದಾರ್ ಸಿ.ಜಿ.ಗೀತಾ, ತಾಪಂ ಇಒ ಕೃಷ್ಣ, ಮಾಜಿ ಶಾಸಕ ಸಿ.ರಮೇಶ್, ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ತಾಲೂಕು ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಜೆಡಿಎಸ್ ಅಧ್ಯಕ್ಷ ಚೆನ್ನಸ್ವಾಮಿ, ಮುಗೂರು ಶಿವಮೂರ್ತಿ, ಕೆಬ್ಬೆಹುಂಡಿ ಶಿವಕುಮಾರ್, ಕುರುಬೂರು ಶಿವು, ಜಯಪಾಲ್ ಭರಣಿ, ರಾಜಣ್ಣ, ಶಿವಕುಮಾರ್ ಬಡ್ಡು, ಉಕ್ಕಲಗೆರೆ ಕುಮಾರ್, ಸಾಮ್ರಾಟ್ ಸುಂದರೇಶನ್, ಸೋಸಲೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನರಗ್ಯಾತನಹಳ್ಳಿ ಪುಟ್ಟಸ್ವಾಮಿ ಹಾಗೂ ಗ್ರಾಮಸ್ಥರಿದ್ದರು.

ರಾಜಕಾರಣಿಗಳ ಹಸ್ತಕ್ಷೇಪ ಸರಿಯಲ್ಲ

ಧರ್ಮ. ಆ ಹಿನ್ನೆಲೆಯಲ್ಲಿ, ಪ್ರತಿ ಧರ್ಮವನ್ನು ಗೌರವಿಸುವ, ಶಾಂತಿಯುತ ಸಹಬಾಳ್ವೆಯನ್ನು ತರುವ ಪ್ರಯತ್ನಗಳಿರಬೇಕು. ಧರ್ಮ ಮತ್ತು ಭಾಷೆಯ ಮೂಲಕ ಹೋದರೆ ದೇಶ ನಾಶವಾಗುತ್ತದೆ. ದುರದೃಷ್ಟವಶಾತ್ ಪ್ರಜಾಪ್ರಭುತ್ವದ ನಾಲ್ಕು ಆಧಾರ ಸ್ತಂಭಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮಗಳು ದುರಾಸೆಯ ಜನರ ಕೈಯ್ಯಲ್ಲಿವೆ ಎಂದು ಎಚ್ಚರಿಸಿದರು. ಮೊದಲಿನಿಂದಲೂ ದೇಶಾದ್ಯಂತ ಹಗರಣಗಳ ಸರಣಿಯನ್ನು ಕೇಳುತ್ತಿದ್ದೇವೆ. ಜೀಪ್ ಹಗರಣ, ಬೋಫೋರ್ಸ್, ಕಾಮನ್‌ವೆಲ್ತ್ ಗೇಮ್ಸ್, 2ಜಿ ಇತ್ಯಾದಿ ಹಗರಣಗಳಿಂದ ದೇಶಕ್ಕೆ ಕೋಟ್ಯಾಂತರ ನಷ್ಟವಾಗಿದೆ. ವಿಪಕ್ಷಗಳು ಆಡಳಿತ ಪಕ್ಷವನ್ನು 40 ಪರ್ಸೆಂಟ್ ಸರ್ಕಾರ ಎಂದು ಜರಿಯುತ್ತವೆ. ಆದರೆ ನಿಮ್ಮ ಸರ್ಕಾರದಲ್ಲಿ ಎಷ್ಟು ಪರ್ಸೆಂಟ್ ಇತ್ತು ಎಂದು ಕೇಳಿದರೆ ಉತ್ತರ ಸಿಗಲ್ಲ. ಇಂತಹ ಸಮಾಜವನ್ನು ಬದಲಿಸಲು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಜೊತೆಗೆ ಮಾಧ್ಯಮಗಳಿಗೂ ಜವಾಬ್ದಾರಿ ಇದೆ. ವ್ಯವಸ್ಥೆಯನ್ನು ಶುದ್ಧೀಕರಿಸಲು ಯಾವುದೇ ರಾಜಕೀಯ ನಾಯಕರು ತಲೆಕೆಡಿಸಿಕೊಂಡಿಲ್ಲ. ಬದಲಿಗೆ, ಆರೋಪ–ಪ್ರತ್ಯಾರೋಪದಲ್ಲಿ ತೊಡಗಿ, ಅಧಿಕಾರ ಹಿಡಿಯಲು ಯತ್ನಿಸುತ್ತಿದ್ದಾರೆ ಎಂದು ಹೇಳಿದರು.

ರಾಜಕಾರಣಿಗಳೇನೂ ದೇವಲೋಕದಿಂದ ಬಂದವರಲ್ಲ. ಇವರು ಕಾನೂನನ್ನು ಮಾಡುತ್ತಾರೆ. ಎಲ್ಲವನ್ನೂ ಆಡಳಿತ ನೋಡಿಕೊಳ್ಳುತ್ತದೆ. ಆದರೆ ಲೋಕಾಯುಕ್ತವನ್ನು ಮುಚ್ಚಿ ಎಸಿಬಿ ತಂದರು. ಎಸಿಬಿ ಬಂದ ಮೇಲೆ ಎಷ್ಟು ರಾಜಕಾರಣಿಗಳ ಮೇಲೆ ಕ್ರಮ ಜರುಗಿಸಿದೆ. ಎಷ್ಟು ಜನರಿಗೆ ಶಿಕ್ಷೆ ಕೊಡಿಸಿದೆ ಎಂದು ಪ್ರಶ್ನಿಸಿದರು.

ಮಾನವೀಯತೆ ಗುಣ ಬೆಳೆಸಿಕೊಳ್ಳಬೇಕು: ಇಂದು ಎಲ್ಲಾ ಹುದ್ದೆಗಳಲ್ಲೂ ದುರಾಸೆ ಹುಟ್ಟಿಕೊಂಡು, ಮಾನವೀಯತೆ ಮರೆಯಾಗುತ್ತಿದೆ. ಹುಟ್ಟುವಾಗ ಮಾನವನಾಗಿ ಹುಟ್ಟದಿದ್ದರೂ ಪರವಾಗಿಲ್ಲ. ಆದರೆ, ಬೆಳೆಯುವಾಗ ಮಾನವೀಯತೆ ಗುಣಗಳನ್ನು ಅಳವಡಿಸಿಕೊಂಡು ಬದುಕಬೇಕು ಎಂದರು. ಈ ಹಿಂದೆ ಜೈಲಿಗೆ ಹೋಗಿ ಬಂದ ವ್ಯಕ್ತಿಯನ್ನು ಜನ ಭೇಟಿ ಮಾಡುತ್ತಿರಲಿಲ್ಲ. ಆದರೆ ಇಂದು ಜೈಲಿನಿಂದ ಹೊರ ಬರುವವರನ್ನು ಅದ್ಧೂರಿಯಾಗಿ ಪಟಾಕಿ ಸಿಡಿಸಿ ಸ್ವಾಗತಿಸಲಾಗುತ್ತದೆ. ಮುಖ್ಯಮಂತ್ರಿಯಂತಹ ಹುದ್ದೆ ನೀಡಲಾಗುತ್ತಿದೆ. ಅಂಥವರಿಗೆ ಪ್ರಬಲ ಖಾತೆಗಳನ್ನು ನೀಡಲಾಗುತ್ತಿದೆ. ಹೀಗಾದರೆ ಭ್ರಷ್ಟರಿಂದ ರಾಜ್ಯವನ್ನು ಅಭಿವೃದ್ಧಿಪಡಿಸಲು ಹೇಗೆ ಸಾಧ್ಯ, ಶಾಂತಿ, ಸೌಹಾರ್ದತೆ ಇರಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಸರ್ಕಾರದಲ್ಲಿ ಲೂಟಿಕೋರರ ಗುಂಪೇ ಇದೆ. ಸಾರ್ವಜನಿಕರ ಕಲ್ಯಾಣದ ಬಗ್ಗೆ ಒಂದು ಮಾತನ್ನೂ ಆಡದೆ ಬರೀ, ರಾಜ್ಯ ಒಡೆಯುವ, ಆರೋಪ, ಪ್ರತ್ಯಾರೋಪಗಳ ಸುರಿಮಳೆಯಲ್ಲಿ ತೊಡಗಿದ್ದಾರೆ ಎಂದು ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ಸಂವಾದದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ನಗರ ಕಾರ್ಯದರ್ಶಿ ರಂಗಸ್ವಾಮಿ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್ ಉಪಸ್ಥಿತರಿದ್ದರು.

ಮೈಸೂರಲ್ಲಿ ಸಾರಿಗೆ ನೌಕರರ ಮುಷ್ಕರ ಧರಣಿಗೆ ಸೀಮಿತ

● ನಿಗದಿಯಂತೆ ಬಸ್‌ಗಳ ಸಂಚಾರ ● ಎಲ್ಲಿಯೂ ಪ್ರಯಾಣಿಕರಿಗೆ ಯಾವ ತೊಂದರೆಯೂ ಇಲ್ಲ

ಮೈಸೂರು,ಜ.24(ಎಂಟಿವೈ)– ವೇತನ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಸಾರಿಗೆ ಸಂಸ್ಥೆ ನೌಕರರ ಜಂಟಿ ಕ್ರಿಯಾ ಸಮಿತಿ ಕರೆ ನೀಡಿದ್ದ ಮುಷ್ಕರ ಮೈಸೂರಲ್ಲಿ ಧರಣಿಗಷ್ಟೇ ಸೀಮಿತವಾಗಿದ್ದರಿಂದ, ಸಾರಿಗೆ ಬಸ್‌ಗಳ ಸಂಚಾರದಲ್ಲಿ ಯಾವುದೇ ವ್ಯತ್ಯಯವೂ ಉಂಟಾಗಲಿಲ್ಲ. ಪ್ರಯಾಣಿಕರಿಗೂ ಯಾವುದೇ ತೊಂದರೆಯೂ ಆಗಲಿಲ್ಲ.



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಧರಣಿ ಸತ್ಯಾಗ್ರಹಕ್ಕೆ ಕರೆ ನೀಡಿದ್ದು, ಮೈಸೂರಿನಲ್ಲಿ ಸಾರಿಗೆ ಸಂಸ್ಥೆಯ ನೌಕರರು ಬಸ್ ಸಂಚಾರಕ್ಕೆ ಅಡ್ಡಿಯಾಗದಂತೆ ಶಾಂತಿಯುತ ಧರಣಿ ನಡೆಸಿದ್ದರಿಂದ ಮಂಗಳವಾರ ಮುಂಜಾನೆಯಿಂದಲೇ ಮೈಸೂರು ನಗರ ಹಾಗೂ ಗ್ರಾಮೀಣ ಪ್ರದೇಶಕ್ಕೆ ಎಂದಿನಂತೆ ಬಸ್‌ಗಳು ಸಂಚರಿಸಿದವು.

ಮುಷ್ಕರದ ಅಂಗವಾಗಿ ಮೈಸೂರಿನ ಬನ್ನಿಮಂಟಪದ ಮೈಸೂರು ವಿಭಾಗೀಯ ಕಚೇರಿ ಬಳಿ ಹಲವು ಮಂದಿ ಸಾರಿಗೆ ಸಂಸ್ಥೆಯ ನೌಕರರು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಧರಣಿ ನಡೆಸಿ, ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹಕ್ಕೊತ್ತಾಯ ಮಾಡಿದರು..

2016ರಲ್ಲಿ ಆದ ಒಪ್ಪಂದದಂತೆ 4 ವರ್ಷಕ್ಕೊಮ್ಮೆ ಮೂಲ ವೇತನ ಶೇ.25 ಹೆಚ್ಚಳ ಮಾಡುವುದು. 2020ರ ಜ.1ರಂದು ಸಭೆ ನಡೆಸಿ, ಒಪ್ಪಂದದಂತೆ ನಾನಾ ಬೇಡಿಕೆಗಳ ಈಡೇರಿಸಬೇಕಿತ್ತು. ಆದರೆ, ಕೋವಿಡ್ ನೆಪವೊಡ್ಡಿ 3 ವರ್ಷದಿಂದ ವೇತನ ಹೆಚ್ಚಿಸದೇ ಅನ್ಯಾಯ ಮಾಡಲಾಗಿದೆ ಸಾರಿಗೆ ಸಂಸ್ಥೆಗಳ ಸ್ವಾವಲಂಬನೆ ಮತ್ತು ಸುಸ್ಥೂಲ ಕ್ರೋಢೀಕರಣಗಳ ಸಂಪೂರ್ಣ ಅಧ್ಯಯನಕ್ಕೆ ಶ್ರೀನಿವಾಸಮೂರ್ತಿ ಏಕ ಸದಸ್ಯ ಸಮಿತಿಯನ್ನು ಸರ್ಕಾರ ನೇಮಿಸಿದೆ. ಸಮಿತಿ ಮಧ್ಯಂತರ ವರದಿ ಹೊರಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವಂತೆ ಹೇಳಿದ್ದು, ಹತ್ತಾರು ವರ್ಷಗಳಿಂದ ನಿಗಮಕ್ಕಾಗಿ ದುಡಿದ ಸಿಬ್ಬಂದಿಗೆ ಅನ್ಯಾಯ ಮಾಡಿದಂತಾಗಿದೆ. ನೌಕರರ ಸಂಕಷ್ಟವನ್ನೂ ಶ್ರೀನಿವಾಸಮೂರ್ತಿ ಸಮಿತಿ ಅರ್ಥ ಮಾಡಿಕೊಳ್ಳಬೇಕು. ಸರ್ಕಾರ ಮಾನವೀಯತೆಯಿಂದ ನಡೆದುಕೊಂಡು, 14 ಬೇಡಿಕೆಗಳನ್ನೂ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಚಾಲಕರು, ಕಂಡಕ್ಟರ್ ಸೇರಿದಂತೆ ಎಲ್ಲ ನೌಕರರಿಗೆ ಮಾಸಿಕ, ದೈನಂದಿನ ಭತ್ಯೆ, ಪ್ರೋತ್ಸಾಹ ಭತ್ಯೆಗಳನ್ನು ಐದು ಪಟ್ಟು ಹೆಚ್ಚಿಸಬೇಕು. ಲೆಕ್ಕಾಧಿಕಾರಿಗಳಿಗೆ ನೀಡುವ ಸಂಬಳದಷ್ಟೇ ಭತ್ಯೆಯನ್ನೂ ನೀಡಬೇಕು. ಇಎಸ್‌ಐ ಮಾದರಿಯಲ್ಲಿ ಆಡಳಿತ ಸಿಬ್ಬಂದಿಯಿಂದ ಶೇ 3.5 ಹಾಗೂ ಕಾರ್ಮಿಕರಿಂದ ಶೇ.0.5 ವಂತಿಗೆ ಸಂಗ್ರಹಿಸಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡುವ ಯೋಜನೆ ರೂಪಿಸಬೇಕು ಎಂದರು.

ಮೂಲ ವೇತನಕ್ಕೆ ಡಿಎ ವಿಲೀನಗೊಳಿಸಿ ಪರಿಷ್ಕೃತ ಮೂಲ ವೇತನದ ಶೇ.25ರಷ್ಟು ಹೆಚ್ಚಳ ಮಾಡಿ ಹೊಸ ವೇತನ ಶ್ರೇಣಿ ಸಿದ್ಧಪಡಿಸುವುದು, ಚಾಲಕರು, ನಿರ್ವಾಹಕರು, ತಾಂತ್ರಿಕ ಹಾಗೂ ಆಡಳಿತ ಸಿಬ್ಬಂದಿ ಸೇರಿದಂತೆ ಎಲ್ಲಾ ನೌಕರರಿಗೂ ಬಾಟ, ಭತ್ಯೆಗಳನ್ನು 5 ಪಟ್ಟು ಹೆಚ್ಚಿಸುವುದು, ಹೊಲಿಗೆ ಭತ್ಯೆ, ಶೂ, ಜರ್ಸಿ, ರೈನ್ ಕೋಟ್ ಇತ್ಯಾದಿ ಭತ್ಯೆಯನ್ನು 3 ಪಟ್ಟು ಹೆಚ್ಚಿಸುವುದು, ಸೂಕ್ತ ಕ್ಯಾಷ್ ಅಲೋಯನ್ಸ್ ನೀಡುವುದು, ಇಎಸ್‌ಐ ಮಾದರಿಯಲ್ಲಿ ವಂತಿಗೆ ಸಂಗ್ರಹಿಸಿ ಟ್ರಸ್ಟ್ ಮೂಲಕ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಯೋಜನೆ ರೂಪಿಸುವಂತೆ ಆಗ್ರಹಿಸಿದರು.

ಯಾವುದೇ ಪ್ರಯಾಣಿಕರಿಗೆ ತೊಂದರೆಯಾಗದಂತೆ ಒಂದು ದಿನದ ಮುಷ್ಕರ ನಡೆಸಿದ್ದೇವೆ. ಸರ್ಕಾರವು ನೌಕರರ ಸಂಘಟನೆಗಳನ್ನು ನಿರ್ಲಕ್ಷಿಸಿ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳುವಂತಿಲ್ಲವೆಂದು ಹೇಳಿದೆ. ಸಾರಿಗೆ ಸಚಿವ ಶ್ರೀರಾಮುಲು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೌಕರರ ದನಿಯನ್ನು ಆಲಿಸುತ್ತಿಲ್ಲ. ಅಗತ್ಯ ವಸ್ತುಗಳ ಬೆಲೆಯೂ ಹೆಚ್ಚಳವಾಗಿದೆ. ಸಂಸ್ಥೆ ನೌಕರರಿಗೆ ನೀಡುತ್ತಿರುವ ವೇತನ ಸಿಬ್ಬಂದಿಗಳ ಜೀವನ ನಿರ್ವಹಣೆಗೆ ಸಾಲುತ್ತಿಲ್ಲ. ನೌಕರರು ನೆಮ್ಮದಿಯಿಂದ ಕೆಲಸ ಮಾಡಲು ಆಗುತ್ತಿಲ್ಲ. 2019ರಲ್ಲಿಯೇ ಅರ್ಜಿ ಸಲ್ಲಿಸಿದ್ದರೂ ಒಪ್ಪಂದ ಜಾರಿಗೊಳಿಸಿಲ್ಲ ಎಂದು ಕಿಡಿಕಾರಿದರು.

ನಿಗಮಗಳಲ್ಲಿ ಖಾಲಿ ಹುದ್ದೆಗಳಿದ್ದು, ನೌಕರರಿಗೆ ಒತ್ತಡ ಹೆಚ್ಚಾಗುತ್ತಿದೆ. ಕೂಡಲೇ ನೇಮಕಾತಿ ನಡೆಯಬೇಕು. ಗುತ್ತಿಗೆ ಆಧಾರದಲ್ಲಿ ನೇಮಕಾತಿ ನಡೆಯಬಾರದು. ಭವಿಷ್ಯ ನಿಧಿ ಪಿಂಚಣಿ ಬದಲು ನಿಗಮವೇ ತುಟ್ಟಿಭತ್ಯೆಗೆ ಸೇರಿದ ಪಿಂಚಣಿ ಯೋಜನೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ಬಳಿಕ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಜಂಟಿ ಸಮಿತಿ ರಾಜ್ಯಾಧ್ಯಕ್ಷ ಮಲ್ಲಯ್ಯ, ರಾಜ್ಯ ಕಾರ್ಯಾಧ್ಯಕ್ಷ ಎಂ.ವಿಜಯಕುಮಾರ್, ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ವಿ.ಶಿವಕುಮಾರ್, ಎಸ್.ಡಿ.ಬಂಡಿ, ಮಧುಸೂಧನ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಬುಡಕಟ್ಟು ಯುವ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಕ್ಕೆ ತೆರೆ

ಪ್ರತಿಭೆ ಮೆರೆದವರಿಗೆ ಬಹುಮಾನ ವಿತರಣೆ



ಮೈಸೂರು,ಜ.24(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜು ಸಭಾಂಗಣದಲ್ಲಿ ಕಳೆದ 7 ದಿನಗಳಿಂದ ನಡೆಯುತ್ತಿದ್ದ 14ನೇ ಬುಡಕಟ್ಟು ಯುವ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ ಮಂಗಳವಾರ ಸಂಪನ್ನಗೊಂಡಿತು.

ಕೇಂದ್ರ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಗೃಹ ವ್ಯವಹಾರಗಳ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ ಸಂಯುಕ್ತಾಶ್ರಯದಲ್ಲಿ ನಡೆದ ಬುಡಕಟ್ಟು ಯುವ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳ, ವಿವಿಧ ಬುಡಕಟ್ಟು ಸಮುದಾಯಗಳ ಕಲೆ, ಸಂಸ್ಕೃತಿ ಅನಾವರಣಗೊಂಡವು.

ಬೇರೆ ಬೇರೆ ರಾಜ್ಯಗಳ ಬುಡಕಟ್ಟು ಸಂಸ್ಕೃತಿ, ಕಲೆ, ಆಹಾರ ಪದ್ಧತಿಗಳು, ಆಚಾರ–ವಿಚಾರ, ಉಡುಗೆ–ತೊಡುಗೆ, ಸ್ಥಳ ಪರಿಚಯ, ಭಾಷಾ ಕಲಿಕೆ ಮತ್ತು ಅಭಿವೃದ್ಧಿ ಕಾರ್ಯಕ್ರಮ ನಡೆದವು. ಛತ್ತೀಸ್‌ಗಢ, ಜಾರ್ಖಂಡ್, ಒಡಿಶಾ, ತೆಲಂಗಾಣ, ಮಹಾರಾಷ್ಟ್ರ, ಬಿಹಾರ ಸೇರಿದಂತೆ ವಿವಿಧ ರಾಜ್ಯಗಳ 200 ಯುವ ಜನರು ಮತ್ತು 20 ಮಂದಿ ಉಸ್ತುವಾರಿ ಅಧಿಕಾರಿಗಳು ಭಾಗವಹಿಸಿ ಸಾಂಸ್ಕೃತಿಕ ವಿನಿಮಯ ಮಾಡಿಕೊಂಡರು. ದೇಶಭಕ್ತಿ ಮತ್ತು ರಾಷ್ಟ್ರ ನಿರ್ಮಾಣ ವಿಷಯದ ಭಾಷಣಸ್ಪರ್ಧೆ, ಜಾನಪದ ನೃತ್ಯ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಭಾಷಣ ಸ್ಪರ್ಧೆ: ಛತ್ತೀಸ್‌ಗಢದ ಪಂಕಜ್ ಸಿನ್ಹಾ (ಪ್ರಥಮ), ಒಡಿಸ್ಸಾದ ತರುಣ್ ಮಹಿನಿ (ದ್ವಿತೀಯ), ಜಾರ್ಖಂಡ್ ಸಂದೀಪ್ ಕುಮಾರ್ ಯಾದವ್ (ತೃತೀಯ), ಆಶಿಸ್ (ನಾಲ್ಕನೇ), ತೆಲಂಗಾಣದ ಸಿಂಧು (ಐದನೇ) ಬಹುಮಾನ ಪಡೆದರು.

ಜಾನಪದ ನೃತ್ಯ: ಛತ್ತೀಸ್‌ಗಢದ ಡೊಂಗ್ರಿ ದಾಡೆ ಗುಂಪು ನೃತ್ಯ (ಪ್ರಥಮ), ತೆಲಂಗಾಣದ ಯುವಕರ ರೈತ ನೃತ್ಯ (ದ್ವಿತೀಯ), ಒಡಿಶಾದ ಗುಂಪು ನೃತ್ಯ (ತೃತೀಯ), ಛತ್ತೀಸ್‌ಗಢದ ಅಬ್ಜು ಮಾದೀಯಾ ಸಂಸ್ಕೃತಿ ಕೃತಿಯಾ (ನಾಲ್ಕನೇ), ಜಾರ್ಖಂಡ್‌ನ ಸಾತಾಲಿ ನೃತ್ಯ (ಐದನೇ) ಬಹುಮಾನ ಪಡೆಯಿತು.

ಆದಿವಾಸಿಗಳ ಪುನರ್ವಸತಿ: ಸಮಾರೋಪ ಸಮಾರಂಭದಲ್ಲಿ ಸಂಸದ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ ಪುನರ್ವಸತಿ ಕಲ್ಪಿಸುವ ಮಾನವೀಯ ದೃಷ್ಟಿಯಿಂದ ಆಯೋಜಿಸಿದ್ದ ಕಾರ್ಯಕ್ರಮವಾಗಿದೆ. ನಕ್ಸಲ್ ಚಟುವಟಿಕೆಗಳಿಂದ ತೊಂದರೆಗೆ ಸಿಲುಕಿದವರಿಗೆ ನೆರವಾಗಲು ಸಮಾಜದ ಮುಖ್ಯವಾಹಿನಿಗೆ ತರಲು 2006ರಿಂದಲೂ ಈ ಕಾರ್ಯಕ್ರಮ ಸಂಘಟಿಸಲಾಗುತ್ತಿದೆ. ಆತಿಥ್ಯಕ್ಕೆ ಹೆಸರಾದ ಮೈಸೂರಿನಲ್ಲಿ ಯುವ ಕಲಾವಿದರು ತಮ್ಮ ಸಂಸ್ಕೃತಿ, ಸಂಪ್ರದಾಯವನ್ನು ವಿನಿಮಯ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

ರಾಜ್ಯ ನೆಹರು ಯುವ ಕೇಂದ್ರ ಸಂಘಟನೆ ನಿರ್ದೇಶಕ ಎಂ.ಎನ್.ನಟರಾಜ್ ಮಾತನಾಡಿ, ಇದುವರೆಗೆ ವಿವಿಧೆಡೆ ನಡೆದಿರುವ ಬುಡಕಟ್ಟು ಯುವ ಕಾರ್ಯಕ್ರಮದಲ್ಲಿ 4 ಸಾವಿರಕ್ಕೂ ಹೆಚ್ಚು ಯುವಕರು ಪಾಲ್ಗೊಂಡಿದ್ದಾರೆ. 14ನೇ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಯುವಕರು ಆಚಾರ, ವಿಚಾರ, ಕಲೆ ಮತ್ತು ಸಂಸ್ಕೃತಿಯನ್ನು ಅನಾವರಣ ಮಾಡಿದ್ದಾರೆ. ಅಲ್ಲದೇ, ಸಂವಿಧಾನ ತಜ್ಞರೊಂದಿಗೆ ಸಂದರ್ಶನ ಮಾಡಿ, ಸಂವಿಧಾನದ ಆಶಯ, ಬುಡಕಟ್ಟು ಸಮುದಾಯದ ಹಕ್ಕುಗಳ ಬಗ್ಗೆ ತಿಳಿದುಕೊಂಡಿದ್ದಾರೆ ಎಂದರು.

ಬುಡಕಟ್ಟು ಸಂಸ್ಕೃತಿ ವಿನಿಮಯ ಕಾರ್ಯಕ್ರಮಕ್ಕಾಗಿ ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಶಿಬಿರಾರ್ಥಿಗಳು ಮೈಸೂರಿನ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ, ಸಂಭ್ರಮಿಸಿದ್ದಾರೆ. ಚಾಮುಂಡಿಬೆಟ್ಟ, ಮೈಸೂರು ಅರಮನೆ, ಬೃಂದಾವನ ಉದ್ಯಾನವನಕ್ಕೆ ಭೇಟಿ ನೀಡಿ ವೀಕ್ಷಿಸಿದ್ದಾರೆ. ಆ ಮೂಲಕ ತಮ್ಮ ಸಂಸ್ಕೃತಿ ವಿನಿಮಯ ಕಾರ್ಯಕ್ರಮವನ್ನು ಸಂಪನ್ನಗೊಳಿಸಿಕೊಂಡರು. ತಮ್ಮ ಜಾನಪದ ನೃತ್ಯಗಳನ್ನು ಪ್ರದರ್ಶಿಸಿ ರಂಜಿಸಿದ್ದಾರೆ ಎಂದು ನುಡಿದರು.

ಈ ವೇಳೆ ತೆಲಂಗಾಣದಿಂದ ಆಗಮಿಸಿದ್ದ ಶಿಬಿರಾರ್ಥಿ ಸಿಂಧು ಮಾತನಾಡಿ, ಮೈಸೂರಲ್ಲಿ ನಡೆದ ಬುಡಕಟ್ಟು ಯುವ ಕಾರ್ಯಕ್ರಮವನ್ನು ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಲಾಗಿತ್ತು ವಸತಿ, ಊಟ ಎಲ್ಲವೂ ಅಚ್ಚುಕಟ್ಟಿನಿಂದ ಕೂಡಿತ್ತು ಚಾಮುಂಡಿ ಬೆಟ್ಟ, ಬೃಂದಾವನ ಗಾರ್ಡನ್ ನೋಡಿದ್ದು ನೆನಪಿನಲ್ಲಿ ಉಳಿಯುತ್ತದೆ. ಇಂತಹ ಕಾರ್ಯಕ್ರಮಗಳು ಹೆಚ್ಚಾಗಿ ನಡೆದರೆ, ವಿವಿಧ ಪ್ರದೇಶದ ಸಂಸ್ಕೃತಿ, ಆಚಾರ–ವಿಚಾರ, ಭಾಷೆ, ಜೀವನ ಶೈಲಿ ಸೇರಿದಂತೆ ವಿವಿಧ ಮಹತ್ತರ ವಿಚಾರಗಳು ವಿನಿಮಯಗೊಂಡು ಸಹೋದರತೆ ಗಟ್ಟಿಗೊಳ್ಳುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಅಪ್ಪಣ್ಣ, ವರಕೋಡು ಪ್ರಕಾಶ್, ರಘುವೀರ್, ಚನ್ನಗಿರಿಗೌಡ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಬ್ಯಾಟರಿ ಕಳವು ಮಾಡಿದ್ದ ವ್ಯಕ್ತಿ ಬಂಧನ

ಲಕ್ಷಾಂತರ ರೂ. ಮೌಲ್ಯದ ಬ್ಯಾಟರಿಗಳ ವಶ

ಪಿರಿಯಾಪಟ್ಟಣ, ಜ.24– ಬ್ಯಾಟರಿ ಅಂಗಡಿ ಬಾಗಿಲು ಮುರಿದು ಬ್ಯಾಟರಿಗಳನ್ನು ಕಳವು ಮಾಡಿದ್ದ ಆರೋಪಿಯೋರ್ವನನ್ನು ಬಂಧಿಸಲಾಗಿದೆ ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ ತಿಳಿಸಿದರು.

ಮೈಸೂರಿನ ತನ್ವೀರ್ ಸೇಠ್ ನಗರದ ನಿವಾಸಿ ಬಷೀರ್ ಅಹಮ್ಮದ್ ಅವರ ಪುತ್ರ ಸಮೀರ್ ಅಹಮ್ಮದ್(44) ಬಂಧಿತ ಆರೋಪಿ. ಈತನಿಂದ ಸುಮಾರು 6 ಲಕ್ಷ ರೂ. ಬೆಲೆಬಾಳುವ ಬ್ಯಾಟರಿಗಳು ಹಾಗೂ ಕೃತ್ಯಕ್ಕೆ ಬಳಸಿದ್ದ ಗೂಡ್ಸ್ ಆಟೋವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪಟ್ಟಣದ ಪೊಲೀಸ್ ಠಾಣಾ ಆವರಣದಲ್ಲಿ ಮಾಹಿತಿ ನೀಡಿದರು.

ಈತ ಡಿ.25ರಂದು ರಾತ್ರಿ ಪಟ್ಟಣದ ಬಿ.ಎಂ.ರಸ್ತೆಯಲ್ಲಿರುವ ಎಸ್.ಆಟೋ ಎಲೆಕ್ಟ್ರಿಷಿಯನ್ ಅಂಗಡಿ ಬಾಗಿಲು ಮುರಿದು ಲಕ್ಷಾಂತರ ರೂ. ಬೆಲೆಬಾಳುವ ಎಕ್ಸೈಡ್, ಅಮೆರಾನ್ ಸೇರಿದಂತೆ ಇತರೆ ಕಂಪನಿಯ ಬ್ಯಾಟರಿಗಳನ್ನು ಗೂಡ್ಸ್ ಆಟೋಗೆ ತುಂಬಿಕೊಂಡು ಪರಾರಿಯಾಗಿದ್ದ. ಈ ಸಂಬಂಧ ಅಂಗಡಿ ಮಾಲೀಕ ಸಾದಿಕ್ ಅಹಮದ್ ಪಿರಿಯಾಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ಸಂಬಂಧ ತನಿಖೆ ಕೈಗೊಂಡಿದ್ದ ಪೊಲೀಸರು ಅಂಗಡಿಯಲ್ಲಿ ಅಳವಡಿಸಿದ್ದ ಸಿಸಿಟಿವಿ ಫುಟೇಜ್ ಆಧರಿಸಿ, ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

6 ಪ್ರಕರಣ ಪತ್ತೆ ಪ್ರಕರಣ ಸಂಬಂಧ ಆರೋಪಿಯನ್ನು ಹೆಚ್ಚಿನ ವಿಚಾರಣೆಗೊಳಪಡಿಸಿದಾಗ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ನಂಜನಗೂಡು, ಕೆ.ಆರ್.ನಗರ, ಮಂಡ್ಯ ಜಿಲ್ಲೆಯ ಮಳವಳ್ಳಿ, ಕೊಡಗು ಜಿಲ್ಲೆಯ ಕುಶಾಲನಗರ ಹಾಗೂ ಮೈಸೂರಿನಲ್ಲಿ ಒಂದು ಆಟೋ ಕಳವು ಪ್ರಕರಣದಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದೆ.

ಜ. 26 ರಿಂದ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಶಾಪಿಂಗ್ ಸಂಭ್ರಮ

nexus

ಮೈಸೂರು, ಜ. 24– ನಗರದ ಹಾಟೆಸ್ಟ್ ಶಾಪಿಂಗ್ ಹಬ್‌ಗಳಲ್ಲಿ ಒಂದಾದ ನೆಕ್ಸಸ್ ಸೆಂಟರ್ ಸಿಟಿ ಗಣರಾಜ್ಯೋತ್ಸವದ ಅಂಗವಾಗಿ 25 ಕ್ಕೂ ಹೆಚ್ಚು ಬ್ರಾಂಡ್‌ಗಳನ್ನು ಪ್ರದರ್ಶಿಸಲು ಸಿದ್ಧವಾಗಿದೆ. ನಾಲ್ಕು ದಿನಗಳ ಶಾಪಿಂಗ್ ಸಂಭ್ರಮವು ಜನವರಿ 26 ರಂದು ಪ್ರಾರಂಭ ವಾಗಲಿದ್ದು, ಜ.29 ರಂದು ಮುಕ್ತಾಯ ಗೊಳ್ಳುತ್ತದೆ. ವಿವಿಧ ವರ್ಗಗಳ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಬ್ರ್ಯಾಂಡ್‌ಗಳು ತಮ್ಮ ಬ್ರ್ಯಾಂಡ್ ಪೋರ್ಟ್ ಫೋಲಿಯೊ ಗಳಲ್ಲಿ ಭಾರೀ ರಿಯಾಯಿತಿಗಳನ್ನು ನೀಡುವ ಮೂಲಕ ಗಣರಾಜ್ಯೋತ್ಸವದಲ್ಲಿ ಭಾಗವಹಿಸುತ್ತವೆ. ಉನ್ನತ ಜೀವನಶೈಲಿ, ಫ್ಯಾಷನ್ ಮತ್ತು ಸೌಂದರ್ಯ ಬ್ರ್ಯಾಂಡ್‌ಗಳು ಆಯ್ದ ಉತ್ಪನ್ನ ಶ್ರೇಣಿಯ ಮೇಲೆ ಫ್ಲಾಟ್ ಶೇ. 50 ರಷ್ಟು ರಿಯಾಯಿತಿಯನ್ನು ನೀಡುತ್ತವೆ.

ಹೂಟಗಳ್ಳಿಯಲ್ಲಿ ಉಚಿತ ವೈದ್ಯಕೀಯ ತಪಾಸಣಾ ಶಿಬಿರ

ಮೈಸೂರು, ಜ. 24– ಲಯನ್ಸ್ ಕ್ಲಬ್ ಆಫ್ ಮೈಸೂರು ವೆಸ್ಟ್ ಹಾಗೂ ಆಶಾಕಿರಣ ಚಾರಿಟಬಲ್ ಟ್ರಸ್ಟ್ ಆಸ್ಪತ್ರೆ ವತಿಯಿಂದ ಮೈಸೂರಿನ ಹೂಟಗಳ್ಳಿಯ ಸುದರ್ಶನ್ ಶಾಲೆಯಲ್ಲಿ ಜ. 28 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ರವರೆಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಶಿಬಿರದಲ್ಲಿ ರಕ್ತದೊತ್ತಡ ಹಾಗೂ ಡಯಾಬಿಟಿಸ್ ಪರೀಕ್ಷೆ ಜೊತೆಗೆ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಿಂದ ಹೃದಯದ ತಪಾಸಣೆ, ಪ್ರಗತಿ ಕಣ್ಣಿನ ಆಸ್ಪತ್ರೆಯಿಂದ ಕಣ್ಣು ತಪಾಸಣೆ, ಜೆಎಸ್‌ಎಸ್ ಆಸ್ಪತ್ರೆಯಿಂದ ದಂತ ರೋಗ ತಪಾಸಣೆ, ಡಾ. ಅನಂತ್ ಅವರಿಂದ ಗಂಟಲು, ಮೂಗು ಹಾಗೂ ಕಿವಿಗೆ ಸಂಬಂಧಿಸಿದ ತಪಾಸಣೆ ಹಾಗೂ ಮಾನಸ ಆರ್ಥೋ ಆಸ್ಪತ್ರೆಯಿಂದ ಮೂಳೆ ರೋಗಕ್ಕೆ ಸಂಬಂಧಿಸಿದ ಸಲಹೆ ದೊರೆಯುತ್ತದೆ.

ಶಿಬಿರದಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ಮಾಡಿಸಲಿಕ್ಕೆ ಅನುವು ಮಾಡಿಕೊಡಲಾಗಿದೆ. ಇದನ್ನು ಮಾಡಿಸಲು ಆಧಾರ್ ಪ್ರತಿ ಹಾಗೂ ಮೊಬೈಲ್ ತರಬೇಕೆಂದು ಕೋರಲಾಗಿದೆ.

— ಉದ್ಯೋಗ, ರಾಜಕೀಯ ಕ್ಷೇತ್ರದಲ್ಲೂ '2ಎ ಮೀಸಲಾತಿ' ನೀಡಲು ಒತ್ತಾಯ —

ಜ.27ರಂದು ಬೆಂಗಳೂರಲ್ಲಿ 'ಬಲಿಜ ಸಂಕಲ್ಪ ಯಾತ್ರೆ'; ಮೈಸೂರು–ಚಾ.ನಗರದಿಂದ ಕನಿಷ್ಠ 5 ಸಾವಿರ ಮಂದಿ ಭಾಗಿ

ಮೈಸೂರು,ಜ.24(ಪಿಎಂ)– ಬಲಿಜ ಸಮುದಾಯಕ್ಕೆ ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲೂ '2ಎ ಮೀಸಲಾತಿ' ಸೌಲಭ್ಯ ಕಲ್ಪಿಸಲು ಒತ್ತಾಯಿಸಿ ಕರ್ನಾಟಕ ಪ್ರದೇಶ ಬಲಿಜ ಸಂಘದ ವತಿಯಿಂದ ಜ.27ರಂದು 'ಬಲಿಜ ಸಂಕಲ್ಪ ಯಾತ್ರೆ' ಶೀರ್ಷಿಕೆಯಡಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಹೋರಾಟ ಹಮ್ಮಿಕೊಂಡಿದ್ದು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಸಮುದಾಯದ ಕನಿಷ್ಠ 5 ಸಾವಿರ ಮಂದಿ ಸದರಿ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಮುದಾಯದ ಮುಖಂಡ ಹಾಗೂ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, 1994ರಲ್ಲಿ ಬಲಿಜ ಸಮುದಾಯಕ್ಕಿದ್ದ '2ಎ ಮೀಸಲಾತಿ' ಸೌಲಭ್ಯ ಕೈಬಿಡಲಾಯಿತು. ಬಳಿಕ ಹೋರಾಟದ ಫಲವಾಗಿ 2011ರಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ '2ಎ ಮೀಸಲಾತಿ' ಸಮುದಾಯಕ್ಕೆ ಲಭಿಸಿತು. ಆದರೆ ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲಿ '3ಎ'ಗೆ ಸೇರಿಸಲಾಗಿದೆ. ನಮ್ಮ ಸಮುದಾಯಕ್ಕೆ ಪೂರ್ಣ ಪ್ರಮಾಣದಲ್ಲಿ '2ಎ ಮೀಸಲಾತಿ' ಸೌಲಭ್ಯ ಕಲ್ಪಿಸಲು ಒತ್ತಾಯಿಸಿ ಈ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

1972ರಲ್ಲಿ ಅಂದಿನ ಮುಖ್ಯಮಂತ್ರಿ ಡಿ.ದೇವರಾಜ ಅರಸ್, ಹಾವನೂರು ಆಯೋಗ ರಚಿಸಿ ಅದರ ವರದಿಗೆ ವಿಧಾನ ಸಭೆ–ವಿಧಾನ ಪರಿಷತ್‌ನಲ್ಲಿ ಅಂಗೀಕಾರ ಪಡೆದು ದೇಶದಲ್ಲೇ ಮೊಟ್ಟ ಮೊದಲಿಗೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿದರು. ಹಿಂದುಳಿದ ವರ್ಗಗಳಿಗೆ 1994ರಲ್ಲಿ ವರ್ಷದ ಅವಧಿಗೆ ಸೀಮಿತವಾಗಿ ಪರಿಷ್ಕರಿಸಿ ಜಾರಿಗೊಳಿಸಿದ ಮೀಸಲಾತಿ ಪ್ರಮಾಣವೇ ಈಗಲೂ ಚಾಲ್ತಿಯಲ್ಲಿದೆ. ಜೊತೆಗೆ ಇದಕ್ಕೆ ವಿಧಾನಸಭೆ–ವಿಧಾನ ಪರಿಷತ್‌ನಲ್ಲಿ ಅಂಗೀಕಾರ ಪಡೆದಿಲ್ಲ. ಇದೇ ಸಂದರ್ಭದಲ್ಲಿ ವೈಜ್ಞಾನಿಕ ಕಾರಣವಿಲ್ಲದೇ ಬಲಿಜ ಸಮುದಾಯವನ್ನು '2ಎ'ಯಿಂದ ತೆಗೆದು '3ಎ'ಗೆ ವರ್ಗಾಯಿಸಲಾಯಿತು. ಹೋರಾಟದ ಫಲವಾಗಿ 2011ರಲ್ಲಿ ಸಮುದಾಯಕ್ಕೆ ಶಿಕ್ಷಣದಲ್ಲಿ '2ಎ' ಮೀಸಲು ದೊರೆಯಿತು ಎಂದು ವಿವರಿಸಿದರು.

ಇದೀಗ ಹಮ್ಮಿಕೊಂಡಿರುವ ಬಲಿಜ ಸಂಕಲ್ಪ ಯಾತ್ರೆಯಲ್ಲಿ ಮೈಸೂರು–ಚಾಮರಾಜನಗರ ಜಿಲ್ಲೆಗಳು ಸೇರಿದಂತೆ ಕನಿಷ್ಠ 5 ಸಾವಿರ ಮಂದಿ ಸಮುದಾಯದ ಬಾಂಧವರು ಪಾಲ್ಗೊಳ್ಳಲಿದ್ದಾರೆ. ಸಮಾಜದ ಬಾಂಧವರು ಮೈಸೂರಿನ ಸರಸ್ವತಿಪುರಂನ ಶ್ರೀ ಯೋಗಿ ನಾರೇಯಣ ಬಲಿಜ ಸಂಘದ ಹಾಸ್ಟೆಲ್‌ಗೆ ಭೇಟಿ ನೀಡಿ, ಜ.25ರ ಸಂಜೆ 5ರೊಳಗೆ ನೋಂದಣಿ ಮಾಡಿಕೊಂಡರೆ ಬೆಂಗಳೂರು ಹೋರಾಟದಲ್ಲಿ ಅವರು ಪಾಲ್ಗೊಳ್ಳಲು ಎಲ್ಲಾ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.


ವಿಧಾನಸಭೆ, ಪರಿಷತ್, ಮೈಸೂರು ಪಾಲಿಕೆಯಲ್ಲಿಯೂ ಒಬ್ಬ ಬಲಿಜ ಇಲ್ಲ. ಕೇಂದ್ರ ಸರ್ಕಾರದ ಮೀಸಲಾತಿ ಪಟ್ಟಿಯಲ್ಲಿ ನಮಗೆ ನ್ಯಾಯ ಸಿಕ್ಕಿದೆ. ರಾಜ್ಯದ ಮೀಸಲಾತಿ ಪಟ್ಟಿಯಲ್ಲಿ ಅನ್ಯಾಯವಾಗಿದೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗ 160 ಕೋಟಿ ರೂ. ವೆಚ್ಚದಲ್ಲಿ ಜನಗಣತಿ ಮಾಡಿಸಿದರು. ವರದಿಗೆ ಅನುಗುಣವಾಗಿ ಮೀಸಲಾತಿ ನಿಗದಿ ಮಾಡು ವಷ್ಟರಲ್ಲಿ ಚುನಾವಣೆ ಸಮೀಪಿಸಿದ ಹಿನ್ನೆಲೆಯಲ್ಲಿ ಅದು ಕಾರ್ಯಗತವಾಗಲಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜ್ಯದಲ್ಲಿ ಬಲಿಜ ಸಮುದಾಯ 50 ಲಕ್ಷ ಜನಸಂಖ್ಯೆ ಹೊಂದಿದೆ. ಅಂದು ಸಮುದಾಯದ ಲಕ್ಷಾಂತರ ಬಾಂಧವರು ಸೇರಿ ಹೋರಾಟ ಮಾಡಲಿದ್ದೇವೆ. ಇದು ಎಲ್ಲಾ ಪಕ್ಷಗಳಲ್ಲಿರುವ ಸಮುದಾಯದ ಮುಖಂಡರು ಒಗ್ಗಟ್ಟಿನಿಂದ ಮಾಡುತ್ತಿರುವ ಹೋರಾಟ. ಪಕ್ಷಾತೀತವಾಗಿ ನಡೆಯುತ್ತಿದೆ ಎಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು. ಶ್ರೀ ಯೋಗಿ ನಾರೇಯಣ ಬಲಿಜ ಸಂಘದ ಅಧ್ಯಕ್ಷ ಎಂ.ನಾರಾಯಣ, ಕಾರ್ಯದರ್ಶಿ ಹೆಚ್.ಆರ್.ಗೋಪಾಲ ಕೃಷ್ಣ, ಸಮುದಾಯದ ಮುಖಂಡರಾದ ಜಿ.ರಾಮು, ಕೆ.ಎನ್.ದಯಾನಂದ, ನಿಂಗರಾಜು, ಜಿ.ರಾಮು, ಎಂ.ಕೆ.ರಮೇಶ್, ರಾಘವೇಂದ್ರ ಮತ್ತಿತರರು ಗೋಷ್ಠಿಯಲ್ಲಿದ್ದರು.

ಚುನಾವಣೆಗಾಗಿ ಈಗಿನಿಂದಲೇ ಮದ್ಯ ದಾಸ್ತಾನು ಸಾಧ್ಯತೆ

ಪರಿಶೀಲಿಸುವಂತೆ ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಜಿಪಂ ಕಾರ್ಯದರ್ಶಿ ಕೃಷ್ಣಂರಾಜು ಸೂಚನೆ

ನಂಜನಗೂಡು, ಜ.24– ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಈಗಿನಿಂದಲೇ ಬಾರ್ ಮಾಲೀಕರು, ಅಕ್ರಮ ಮದ್ಯ ಮಾರಾಟಗಾರರು ಮದ್ಯ ದಾಸ್ತಾನು ಮಾಡಿಕೊಳ್ಳುವ ಸಾಧ್ಯತೆ ಇರುವುದರಿಂದ ಅಬಕಾರಿ ಅಧಿಕಾರಿಗಳು ತಾಲೂಕಿನ ಎಲ್ಲೆಡೆ ಪರಿಶೀಲಿಸುವಂತೆ ತಾಪಂ ಆಡಳಿತಾಧಿಕಾರಿ ಹಾಗೂ ಜಿಪಂ ಕಾರ್ಯದರ್ಶಿ ಕೃಷ್ಣಂರಾಜು ಸೂಚನೆ ನೀಡಿದರು.



ನಗರದ ತಾಪಂ ಕಚೇರಿ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣೆ ಹತ್ತಿರವಿರುವ ಕಾರಣ ಮದ್ಯ ದಾಸ್ತಾನು ಮಾಡಿಕೊಳ್ಳುವ ಸಾಧ್ಯತೆಯಿದೆ. ಆದ್ದರಿಂದ ಬಾರ್‌ಗಳಲ್ಲಿ ಅವರ ಬೇಡಿಕೆಗೆ ಅನುಗುಣವಾಗಿ ಮದ್ಯ ಮಾರಾಟವಾಗಿದೆಯೇ ಎಂಬುದನ್ನು ಪರಿಶೀಲನೆ ನಡೆಸಬೇಕು. ಅಲ್ಲದೆ ಗ್ರಾಮಗಳಲಿ ಅಕ್ರಮ ಮದ್ಯ ಮಾರಾಟದ ಹಾವಳಿ ತಡೆಗಟ್ಟಬೇಕು ಎಂದು ಸೂಚನೆ ನೀಡಿದರು.

ಇದಕ್ಕುತ್ತರಿಸಿದ ಅಬಕಾರಿ ಅಧಿಕಾರಿ ದೀಪು ಈಗಾಗಲೇ ತಾಲೂಕಿನಲ್ಲಿ 150 ಕಡೆ ದಾಳಿ ನಡೆಸಲಾಗಿದೆ. 128 ದೂರುಗಳನ್ನು ದಾಖಲಿಸಲಾಗಿದೆ. ಎಲ್ಲಡೆ ಪರಿಶೀಲಿಸಿ ಮದ್ಯ ವಿಲೇವಾರಿ ಆಗುವಂತೆ ಕ್ರಮ ವಹಿಸಲಾಗುವುದು ಎಂದರು.

ಸಾಮಾಜಿಕ ಅರಣ್ಯ ಇಲಾಖೆ ನರ್ಸರಿಯಲ್ಲಿ ಬೆಳೆಸಿರುವ ಗಿಡಗಳಿಗೂ ಅಭಿವೃದ್ಧಿ ಪಡಿಸಿರುವ ಅರಣ್ಯ ಪ್ರದೇಶಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಕಳೆದ ಬಾರಿ 92 ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ಅಭಿವೃದ್ಧಿಯಾಗಿರುವುದಾಗಿ ವರದಿಯಲ್ಲಿ ಹೇಳಲಾಗಿದೆ. ನರ್ಸರಿಯಲ್ಲಿ ಕಡಿಮೆ ಗಿಡಗಳನ್ನು ಬೆಳೆಸಲಾಗಿದೆ. ಅಲ್ಲದೆ ನರೇಗಾ ಯೋಜನೆಯಡಿ ಸಹ ಸಾಕಷ್ಟು ಗಿಡಗಳನ್ನು ಖರೀದಿಸಲಾಗಿದೆ. ಹಾಗಿದ್ದರೂ ಸಹ ಅರಣ್ಯ ಅಭಿವೃದ್ಧಿಯಾಗಿರುವುದಾಗಿ ನೀಡಿರುವ ವರದಿಯಲ್ಲಿ ವ್ಯತ್ಯಾಸವಿದೆ. ಕೂಡಲೇ ವಿಸ್ತೃತ ವರದಿ ನೀಡಿ ನಾವು ಪರಿಶೀಲನೆ ನಡೆಸುತ್ತೇವೆ ಎಂದು ಸಾಮಾಜಿಕ ಅರಣ್ಯಾಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಕಾರ್ಮಿಕ ಇಲಾಖೆಯ ಶ್ರಮಯೋಗಿ ಯೋಜನೆಯಡಿ ಎಷ್ಟು ನೋಂದಣಿಗೆ ಉದ್ದೇಶಿಸಲಾಗಿತ್ತು, ಎಷ್ಟು ಮಾಡಲಾಗಿದೆ ಎಂದು ಕಾರ್ಮಿಕ ಇಲಾಖೆ ಅಧಿಕಾರಿಯನ್ನು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅವರು ತಾಲೂಕಿನಲ್ಲಿ 18 ಸಾವಿರ ಕಟ್ಟಡ ಕಾರ್ಮಿಕರಿದ್ದು ಶ್ರಮಯೋಗಿ ಯೋಜನೆಯಡಿ 1400 ನೊಂದಣಿ ಮಾಡಲಾಗಿದೆ ಎಂದರು. ಇದರಿಂದ ಕೆಂಡಾಮಂಡಲರಾದ ಕೃಷ್ಣಂರಾಜು ನೀವು ಯಾವುದು ಸುಲಭ ಆ ಕೆಲಸಗಳನ್ನು ಮಾತ್ರ ಮಾಡುತ್ತೀರಿ. ಕಷ್ಟವಾದದನ್ನು ಬಿಡುತ್ತೀರಿ. ಹೀಗಾದರೆ ಸರ್ಕಾರದ ಯೋಜನೆಗಳು ಹೇಗೆ ಫಲಾನುಭವಿಗಳನ್ನು ಮುಟ್ಟಲು ಸಾಧ್ಯ? ಈ ಶ್ರಮ್ ಯೋಜನೆ ವ್ಯಾಪ್ತಿ ನರೇಗಾ ಕೂಲಿಕಾರರು ಬರುವುದರಿಂದ ಹೆಚ್ಚು ಜನರಿಗೆ ಈ ಶ್ರಮ್ ಕಾರ್ಡ್ ನೀಡಬೇಕು. ಜೊತೆಗೆ ಶ್ರಮಯೋಗಿ ಯೋಜನೆಗೆ ಹೆಚ್ಚು ಜನರನ್ನು ನೋಂದಣಿ ಮಾಡಬೇಕು ಎಂದರು.

ಕೃಷಿ ಸಹಾಯ ನಿರ್ದೇಶಕ ದೀಪಕ್ ಮಾತನಾಡಿ, ಕೃಷಿ ಕೆಲಸದ ವೇಳೆ ಹಾವು ಕಚ್ಚಿ ಸಾವಿಗೀಡಾದವರಿಗೆ ಇಲಾಖೆಯಿಂದ 2 ಲಕ್ಷ ಪರಿಹಾರ ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ತಾಪಂ ಇಓ ಶ್ರೀನಿವಾಸ್ ಮಾತನಾಡಿ, ವಿವಿಧ ಇಲಾಖೆಗಳಿಗೆ ಬಿಡುಗಡೆಯಾಗಿರುವ ಅನುದಾನಗಳನ್ನು ಉದ್ದೇಶಿತ ಯೋಜನೆಗಳಿಗೆ ಖರ್ಚು ಮಾಡಲಾಗಿದೆಯೇ, ಯೋಜನೆಗಳು ಪೂರ್ಣಗೊಂಡಿರುವುದೇ ಎಂಬುದರ ಪ್ರಗತಿ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಉಳಿಕೆ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ ಎಂದರು.

ಸಭೆಯಲ್ಲಿ ಉಪ ತಹಸೀಲ್ದಾರ್ ಭೈರಯ್ಯ, ತಾಲೂಕು ಯೋಜನಾಧಿಕಾರಿ ಗುರು ಮಹದೇವು, ರವಿಚಂದ್ರ ಸೇರಿದಂತೆ ವಿವಿಧ ಇಲಾಖೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಚಿಲ್ಕುಂದ ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ



ಹುಣಸೂರು, ಜ.24– ತಾಲೂಕಿನ ಚಿಲ್ಕುಂದ ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ನಡೆಯಿತು.

ಸಭೆ ಉದ್ಘಾಟಿಸಿ ಮಾತನಾಡಿದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಚುನಾವಣೆ ವೇಳೆ ನೀಡಿದ್ದ ಯಾವುದೇ ಭರವಸೆಗಳನ್ನು ಈಡೇರಿಸಿಲ್ಲ. ನಮ್ಮ ಕಾಂಗ್ರೆಸ್ ಪಕ್ಷ ಚುನಾವಣೆ ಪ್ರನಾಳಿಕೆಯಲ್ಲಿ ಘೋಷಿಸಿದ್ದ 165 ಭರವಸೆಗಳಲ್ಲಿ 163 ಅನ್ನು ಈಡೇರಿಸಿ, ಹೊಸ ಯೋಜನೆ ಘೋಷಿಸಿ ಜನರಿಗೆ ಅನುಕೂಲ ಮಾಡಿಕೊಟ್ಟಿತ್ತು ಎಂದರು.

ಪ್ರಸ್ತುತ ಬಿಜೆಪಿಯವರು ಬಡವರು, ಶ್ರೀಮಂತರ ನಡುವೆ ಕಂದಕ ಸೃಷ್ಟಿಸುತ್ತಿದ್ದು, ದೇಶ ಮತ್ತು ರಾಜ್ಯದ ಖಜಾನೆ ಲೂಟಿ ಮಾಡುತ್ತಿದ್ದಾರೆ. ಪೆಟ್ರೋಲ್, ಡೀಸೆಲ್ ಹಾಗೂ ಇತರೆ ಅವಶ್ಯಕ ವಸ್ತುಗಳ ಬೆಲೆ ಏರಿಕೆ ಮಾಡಿ ಸಾರ್ವಜನಿಕರಿಗೆ ಗಾಯದ ಮೇಲೆ ಬರೆ ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ಮಾಜಿ ಶಾಸಕ ಕೆ.ವೆಂಕಟೇಶ್ ಮಾತನಾಡಿ, ರಾಜಕಾರಣದಲ್ಲಿ ರಾಜಕಾರಣಿ ಮತ್ತು ಪಕ್ಷಗಳಿಗೆ ತನ್ನದೇ ಆದ ಬದ್ಧತೆ, ತತ್ವ ಸಿದ್ಧಾಂತ ಇರಬೇಕು. ಯಾವುದೇ ಪಕ್ಷಗಳಿಗೂ ದುಡ್ಡಿನ ರಾಜಕಾರಣ ಒಳ್ಳೆಯದಲ್ಲ. ಜೆಡಿಎಸ್‌ಗೆ ತತ್ವ, ಸಿದ್ಧಾಂತ ಬದ್ಧತೆ ಇಲ್ಲ, ಜೆಡಿಎಸ್ ಪಕ್ಷದವರು ಎಂಎಲ್ಎ, ಎಂಎಲ್ಸಿ ಹಾಗೂ ಇನ್ನಿತರೆ ಚುನಾವಣೆಗಳಲ್ಲಿ ಅವಕಾಶವಾದಿ ರಾಜಕಾರಣ ಮಾಡಿಕೊಂಡು ಒಂದೊಂದು ಬಾರಿ ಒಂದೊಂದು ಪಕ್ಷ ಬೆಂಬಲಿಸಿಕೊಂಡು ಬಂದಿದ್ದಾರೆ. ಇವರು ಯಾವಾಗಲೂ ಕಾಂಗ್ರೆಸ್ ವಿರೋಧಿಸಿ ಬಿಜೆಪಿಗೆ ಹತ್ತಿರವಾಗುತ್ತಿದ್ದಾರೆ. ಈ ಬಾರಿ ಮತದಾರರು ಬಹಳ ಬುದ್ಧಿವಂತರಾಗಿದ್ದು ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಲಿದ್ದಾರೆ ಎಂದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ಎಲ್ಲಾ ಜಾತಿ, ಧರ್ಮದವರ ವಿಶ್ವಾಸಕ್ಕೆ ಗಳಿಸಿ ಕೆಲಸ ಮಾಡಿದ್ದೇನೆ. ಕಾಂಗ್ರೆಸ್ ಸಾಧನೆಗಳನ್ನು ಮನೆ ಮನೆಗೆ ಭೇಟಿ ನೀಡಿ ಕಾರ್ಯಕರ್ತರು ತಿಳಿಸಬೇಕು. ಪ್ರಸ್ತುತ ರಾಜ್ಯಕ್ಕೆ ಕಾಂಗ್ರೆಸ್ ಮತ್ತು ಸಿದ್ದರಾಮಯ್ಯನವರ ಅವಶ್ಯಕತೆ ಇದೆ ಎಂದ ಅವರು ನಾನು ಕೂಡ ಚುನಾವಣೆ ಎದುರಿಸಲು ಸಿದ್ಧನಿದ್ದೇನೆ ಎಂದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಉದ್ಯಮಿ ಸಿ.ಎನ್.ಕುಮಾರ್, ಮುಖಂಡ ಅತಾವುಲ್ಲಾ, ರೆಹಮಾನ್, ಚಿಲ್ಕುಂದ ಗ್ರಾಪಂ ಮಾಜಿ ಅಧ್ಯಕ್ಷೆ ಶೋಭಾ, ಸದಸ್ಯರಾದ ಶಿವಕುಮಾರ್ ವಸಂತಸಿದ್ದೇಶ್, ಸೂರಜ್, ಕುಮಾರ್, ಹಿರಿಕ್ಯಾತನಹಳ್ಳಿ ಗ್ರಾಪಂ ಅಧ್ಯಕ್ಷ ಜವರೇಗೌಡ, ಮುಖಂಡರಾದ ಕೃಷ್ಣೇಗೌಡ, ಮಾದೇಗೌಡ, ಶಿವಣ್ಣೇಗೌಡ, ಕುಮಾರಸ್ವಾಮಿ, ಸೇರಿದಂತೆ ನೂರಾರು ಮಂದಿ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು.

ಸಭೆಯಲ್ಲಿ ಜಿಲ್ಲಾ ಗ್ರಾಮಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಹುಣಸೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಿ.ನಾರಾಯಣ್, ರಮೇಶ್, ತಾಪಂ ಮಾಜಿ ಸದಸ್ಯ ಮಹೇಂದ್ರ ಕುಮಾರ್, ಉದ್ಯಮಿ ಹೆಚ್.ಪಿ.ಅಮರ್‌ನಾಥ್ ಸೇರಿದಂತೆ ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳು, ವಿವಿಧ ಕಾಂಗ್ರೆಸ್ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಸೇರಿದಂತೆ 3 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ಸಂಸ್ಕಾರವಿಲ್ಲದ ಶಿಕ್ಷಣದಿಂದ ಮಾನವೀಯ ಮೌಲ್ಯ ನಾಶ

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಪೀಠಾಧ್ಯಕ್ಷ ಸೋಮನಾಥೇಶ್ವರ ಸ್ವಾಮೀಜಿ



ತಿ.ನರಸೀಪುರ, ಜ.24– ಪ್ರಸ್ತುತ ಶಿಕ್ಷಣ ಸಂಸ್ಥೆಗಳಲ್ಲಿ ಸಂಸ್ಕಾರವಿಲ್ಲದ ಶಿಕ್ಷಣ ಭೋದಿಸುತ್ತಿರುವುದರಿಂದ ಮಾನವೀಯ ಮೌಲ್ಯ ನಾಶವಾಗುತ್ತದೆ ಎಂದು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಪೀಠಾಧ್ಯಕ್ಷ ಸೋಮನಾಥೇಶ್ವರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಬಾಲಜಗತ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 17ನೇ ವಾರ್ಷಿಕೋತ್ಸವದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಹಿಂದಿನ ಗುರುಕುಲ ಪದ್ಧತಿಯಲ್ಲಿ ವಿದ್ಯೆ ಜೊತೆ ಸಂಸ್ಕಾರವನ್ನು ಭೋದಿಸಲಾಗುತ್ತಿತ್ತು. ಹಾಗಾಗಿ ಆ ಕಾಲಘಟ್ಟದಲ್ಲಿ ಜನರ ನಡುವೆ ಅವಿನಾಭಾವ ಸಂಬಂಧ, ಮಾನವೀಯ ಮೌಲ್ಯಗಳು ಇರುತ್ತಿದ್ದವು. ಹಾಗಾಗಿ ಜನರ ನಡುವೆ ಕಲಹಗಳು ಗೌಣವಾಗಿದ್ದವು ಎಂದರು.

ಪ್ರಸ್ತುತ ಜಗತ್ತಿನಲ್ಲಿ ಹೆಚ್ಚು ಕಲಿತ ವ್ಯಕ್ತಿ ಸ್ವಾರ್ಥಿಯಾಗುತ್ತಿದ್ದು, ಸಮಾಜದಿಂದ ವಿಮುಖನಾಗುತ್ತಿದ್ದಾನೆ. ಇದು ಉತ್ತಮ ಸಮಾಜದ ನಿರ್ಮಾಣಕ್ಕೆ ಒಳ್ಳೆಯ ಬೆಳವಣಿಗೆಯಲ್ಲ. ಹಾಗಾಗಿ ಎಲ್ಲ ಶಿಕ್ಷಣ ಸಂಸ್ಥೆಗಳು ನಿಸ್ಸಾರ ಶಿಕ್ಷಣವನ್ನು ಕಲಿಸದೆ ಶಿಕ್ಷಣದ ಜೊತೆ ಸಂಸ್ಕಾರವನ್ನು ಬೋಧಿಸುವ ಕಡೆ ಹೆಚ್ಚು ಗಮನಹರಿಸಬೇಕು ಎಂದರು.

ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಜಯಗಳಿಸಿದ ವಿದ್ಯಾರ್ಥಿಗಳಿಗೆ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿದರು. ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ನೆರೆದಿದ್ದ ಗಣ್ಯರು ಮತ್ತು ಸಭಿಕರನ್ನು ಮಕ್ಕಳು ರಂಜಿಸಿದರು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಸದಸ್ಯೆ ಮಹದೇವಮ್ಮ, ಬಿಆರ್‌ಪಿ ನಾಗೇಶ್, ಬಿಇಓ ಮರಿಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ನಿವೃತ್ತ ಪ್ರಾಂಶುಪಾಲೆ ಇಂದ್ರಮ್ಮ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಸ್ವಾಮಿನಾಥ್, ಮರಿಸ್ವಾಮಿ, ಆದಿಚುಂಚನಗಿರಿ ಮಠದ ವಿಭಾಗೀಯ ವ್ಯವಸ್ಥಾಪಕ ಬಸವರಾಜು, ಸೋಮಣ್ಣ, ಶಿವಪ್ರಸಾದ್, ವಿಜಯಕುಮಾರ್, ಬಸವರಾಜು, ಮಂಜುನಾಥ್, ಶಿಕ್ಷಕ ವರ್ಗದವರು ಇತರರಿದ್ದರು.

> ಆದಿಚುಂಚನಗಿರಿ ಮಠ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಗ್ರಾಮೀಣ ಜನರು ವಿದ್ಯಾವಂತರಾಗಲು ಶ್ರಮಿಸುತ್ತಿದೆ. ಎಲ್ಲಾ ತಾಲೂಕು, ಹೋಬಳಿ ಕೇಂದ್ರಗಳಿಗೂ ಮಠದ ಸಮಾಜಮುಖಿ ಕೈಂಕರ್ಯ ವಿಸ್ತರಿಸಲಿ ಎಂದ ಅವರು, ವಿದ್ಯಾರ್ಥಿಗಳು ಅಂಕ ಗಳಿಸುವ ಯಂತ್ರವಾಗುತ್ತಿದ್ದಾರೆ. ಪೋಷಕರ ಅಭಿಲಾಷೆಯಂತೆ ಹೆಚ್ಚು ಅಂಕ ಗಳಿಸುತ್ತಾರೆ. ಆದರೆ, ಮಾನಸಿಕವಾಗಿ ಸದೃಢತೆ ಹೊಂದಲು ವಿಫಲವಾಗುತ್ತಿದ್ದಾರೆ.
> - ಎಂ.ಅಶ್ವಿನ್ ಕುಮಾರ್, ಶಾಸಕ.

ಕೋಟೆಯಲ್ಲಿ ಪ್ರಜಾಧ್ವನಿ ಸಮಾವೇಶ ಪೂರ್ವಭಾವಿ ಸಭೆ

ಭಾರತ್ ಜೋಡೋ ಒಡೆದ ಮನಸ್ಸನ್ನು ಒಂದುಗೂಡಿಸುವ ಕಾರ್ಯಕ್ರಮ: ಆರ್.ಧ್ರುವನಾರಾಯಣ್



ಹೆಚ್.ಡಿ.ಕೋಟೆ, ಜ.24– ಭಾರತ್ ಜೋಡೋ ಯಾತ್ರೆ ಪಕ್ಷದ ಕಾರ್ಯಕ್ರಮವಲ್ಲ. ದೇಶದಲ್ಲಿ ಒಡೆದ ಮನಸ್ಸುಗಳನ್ನು ಒಂದುಗೂಡಿಸುವ ಕಾರ್ಯಕ್ರಮ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಜ.26ರಂದು ನಡೆಯುವ ಕಾಂಗ್ರೆಸ್ ಪಕ್ಷದ ಪ್ರಜಾಧ್ವನಿ ಯಾತ್ರೆ ಬೃಹತ್ ಸಮಾವೇಶದ ಅಂಗವಾಗಿ ಏರ್ಪಡಿಸಿದ್ದ ಪೂರ್ವಭಾವಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಕೇಂದ್ರದ ಬಿಜೆಪಿ ಸರ್ಕಾರ ಕೆಲ ಧರ್ಮಗಳನ್ನು ಕಡೆಗಣಿಸುವ ಮೂಲಕ ಆ ಧರ್ಮದವರಿಗೆ ಘಾಸಿ ಉಂಟು ಮಾಡುತ್ತಿದೆ. ಹೀಗಾಗಿ ಎಐಸಿಸಿ ಮುಖಂಡ ರಾಹುಲ್ ಗಾಂಧಿ ನೇತೃತ್ವದಲ್ಲಿ ದೇಶದ ಉದ್ದಗಲಕ್ಕೂ ಭಾರತ್ ಜೋಡೋ ಯಾತ್ರೆ ಕೈಗೊಳ್ಳುವ ಮೂಲಕ ಒಡೆದ ಮನಸ್ಸುಗಳನ್ನು ಒಂದುಗೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಕಾಂಗ್ರೆಸ್ ಜಾತ್ಯಾತೀತ, ಧರ್ಮತೀತವಾಗಿ ಎಲ್ಲರನ್ನೂ ಸಮಾನವಾಗಿ ಕಾಣುವ ಪಕ್ಷವಾಗಿದೆ. ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮಾರ್ಗದರ್ಶನದಲ್ಲಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯದಲ್ಲಿ ಪ್ರಜಾಧ್ವನಿ ಕಾರ್ಯಕ್ರಮವನ್ನು 12 ಜಿಲ್ಲೆಗಳಲ್ಲಿ ನಡೆಸಲಾಗಿದೆ. ಜ.26ರಂದು ಚಾಮರಾಜನಗರ ಹಾಗೂ ಮೈಸೂರಲ್ಲಿ ನಡೆಯಲಿದೆ. ಜಿಲ್ಲೆಯಲ್ಲಿ 11 ವಿಧಾನಸಭಾ ಕ್ಷೇತ್ರಗಳಿದ್ದು, ಪ್ರತಿ ಕ್ಷೇತ್ರದಿಂದ 5 ಸಾವಿರ ಮಂದಿ ಭಾಗವಹಿಸಲು ಸೂಚಿಸಲಾಯಿತು.

ಮುಂಬರುವ ಚುನಾವಣೆ ಗಮನದಲ್ಲಿಟ್ಟುಕೊಂಡು ಸಣ್ಣ ಸಮುದಾಯಗಳಾದ ಸವಿತಾ, ಗಾಣಿಗ, ಮಡಿವಾಳ, ಕುಂಬಾರ, ವಿಶ್ವಕರ್ಮರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟಿಸಬೇಕು ಎಂದು ಕಿವಿಮಾತು ಹೇಳಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದರೂ ಸರ್ಕಾರದಿಂದ ಕೋಟ್ಯಾಂತರ ರೂ. ಅನುದಾನ ತರುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಕ್ಷೇತ್ರದಲ್ಲಿ ಪಕ್ಷದ ಹಿರಿಯ ಮುಖಂಡರನ್ನು ಹಾಗೂ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಮತ್ತು ಗ್ರಾಮದ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಕೆಲವು ಸಂದರ್ಭ ನನ್ನ ಗಮನಕ್ಕೆ ಬಾರದೆ ತಪ್ಪುಗಳು ಆಗಿದ್ದಲ್ಲಿ ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸಿಕೊಂಡು ಹೋಗುತ್ತೇನೆ ಎಂದರು.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಯುವ ಕಾಂಗ್ರೆಸ್ ಅಧ್ಯಕ್ಷ ಹೋಂಡಾ ನಯಾಜ್, ಶಿವರಾಜು, ನಂಜನಗೂಡು ಉಸ್ತುವಾರಿ ಸೋಮೇಶ್, ಜಿಪಂ ಮಾಜಿ ಸದಸ್ಯರಾದ ಚಿಕ್ಕವೀರನಾಯಕ, ಹೆಚ್.ಸಿ.ಮಂಜುನಾಥ್, ಭಾಗ್ಯಲಕ್ಷ್ಮಿ, ಪಿ.ರವಿ, ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಮುಖಂಡರಾದ ಬಿ.ಸಿ.ಬಸಪ್ಪ, ಶಂಭುಲಿಂಗ ನಾಯಕ, ಆನಂದ್, ಪ್ರಭುಸ್ವಾಮಿ, ಪ್ರಕಾಶ್, ಮಲ್ಲೇಶ್, ಕೆಂಡಗಣ್ಣಗೌಡ, ಪರಶಿವಮೂರ್ತಿ, ವೀರೇಗೌಡ, ರಾಜು ಇದ್ದರು.

ವಿಜಯ ಸಂಕಲ್ಪ ಅಭಿಯಾನಕ್ಕೆ ಶಾಸಕ ಹರ್ಷವರ್ಧನ್ ಚಾಲನೆ



ಮಲ್ಕುಂಡಿ, ಜ.24– ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳನ್ನು ಪ್ರತಿ ಮತದಾರರಿಗೆ ತಿಳಿಸಲು ಹಾಗೂ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡಲು ಬಿಜೆಪಿ ವಿಜಯ ಸಂಕಲ್ಪ ಅಭಿಯಾನ ಸಹಕಾರಿಯಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಹಲ್ಲರೆ, ಹುರ, ಹಾಡ್ಯ, ಹೆಡಿಯಾಲ ಗ್ರಾಪಂ ವ್ಯಾಪ್ತಿಯಲ್ಲಿ ವಿಜಯ ಸಂಕಲ್ಪ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳನ್ನು ತಿಳಿಸುವ ಮೂಲಕ ಪ್ರಧಾನಿ ಮೋದಿ ಅವರ ಕೈ ಬಲಪಡಿಸಲು ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರಲು ಎಲ್ಲರೂ ಒಗ್ಗಟಿನಿಂದ ಶ್ರಮಿಸಬೇಕು ಎಂದು ಮನವಿ ಮಾಡಿದರು.

ನನ್ನ ಅಧಿಕಾರವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿ ಮಾಡಲು ಪಣ ತೊಟ್ಟಿದ್ದೇನೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ಮುಖ್ಯ ಎಂದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ಗ್ರಾಪಂ ಅಧ್ಯಕ್ಷ ಚಂದ್ರು, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಸಿದ್ದರಾಜು, ಗ್ರಾಪಂ ಸದಸ್ಯ ಕೃಷ್ಣ, ಮುಖಂಡರಾದ ಎಂ.ಪುಟ್ಟಸ್ವಾಮಿ, ಶಿವರುದ್ರ, ರವಿ, ಮಹದೇವಯ್ಯ, ಸಿದ್ದರಾಜು, ಪುಟ್ಟಸ್ವಾಮಿ, ಗಂಗಾಧರ್, ಸೇರಿದಂತೆ ಇತರರಿದ್ದರು.

ಸರಗೂರಲ್ಲಿ ಭತ್ತ, ರಾಗಿ ಖರೀದಿ ಕೇಂದ್ರ ಉದ್ಘಾಟನೆ

ಸರಗೂರು, ಜ.24– ರೈತರ ಅನುಕೂಲಕ್ಕಾಗಿ ಪಟ್ಟಣದ ಎಪಿಎಂಸಿ ಆವರಣದಲ್ಲಿ ಭತ್ತ ರಾಗಿ ಖರೀದಿ ಕೇಂದ್ರ ತೆರೆಯಲಾಗಿದ್ದು, ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಹಸೀಲ್ದಾರ್ ಚಲುವರಾಜು ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಭತ್ತ ಮತ್ತು ರಾಗಿ ಖರೀದಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ ಭತ್ತ, ರಾಗಿ ಖರೀದಿ ಕೇಂದ್ರ ತೆರೆದಿರುವುದು ರೈತರಿಗೆ ಅನುಕೂಲವಾಗಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನ್ಯಾಯಬೆಲೆ ಅಂಗಡಿ ಅಧ್ಯಕ್ಷ ಬಿ.ವಿ.ಬಸವರಾಜು ಮಾತನಾಡಿದರು. ಎಪಿಎಂಸಿ ಕಾರ್ಯದರ್ಶಿ ವಸಂತ ಕುಮಾರ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿ ಅನಸೂಯ, ತಾಪಂ ಮಾಜಿ ಸದಸ್ಯ ಚಂದ್ರೇಗೌಡ, ಆರ್.ಎಂ.ಈರೇಗೌಡ, ರೈತ ಸಂಘದ ಉಪಾಧ್ಯಕ್ಷ ಗಣೇಶ್, ಶಿವಕುಮಾರ್, ರಾಜ್ಯ ಕೃಷಿ ಮಾರಾಟ ಮಂಡಳಿ ಖರೀದಿ ಅಧಿಕಾರಿ ಲೋಕನಾಥ್ ಹಿಂಗನ್‌ಕರ್ ಸೇರಿದಂತೆ ಇತರರಿದ್ದರು.



ಕಿವೀಸ್ ಕಿವಿ ಹಿಂಡಿದ ರೋಹಿತ್ ಪಡೆ; ಸರಣಿ ಕ್ಲೀನ್ ಸ್ವೀಪ್

ಇಂದೋರ್: 3 ಪಂದ್ಯಗಳ ಏಕದಿನ ಸರಣಿಯಲ್ಲಿ ನ್ಯೂಜಿಲೆಂಡ್ ತಂಡವನ್ನು ವೈಟ್‌ವಾಶ್ ಮಾಡಿರುವ ಟೀಂ ಇಂಡಿಯಾ ಏಕದಿನ ಕ್ರಿಕೆಟ್‌ನಲ್ಲಿ ಇತಿಹಾಸ ನಿರ್ಮಿಸಿದೆ. ಮೂರನೇ ಏಕದಿನ ಪಂದ್ಯವನ್ನು 90 ರನ್‌ಗಳಿಂದ ಗೆದ್ದುಕೊಂಡ ಭಾರತ ಈ ಗೆಲುವಿನೊಂದಿಗೆ ಸರಣಿ ಕ್ಲೀನ್‌ಸ್ವೀಪ್ ಮಾಡಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಅವರ ಅಬ್ಬರದ ಶತಕದ ನೆರವಿನಿಂದಾಗಿ 386 ರನ್‌ಗಳ ಬೃಹತ್ ಗುರಿ ಸೆಟ್ ಮಾಡಿತು. ಇದಕ್ಕುತ್ತರವಾಗಿ ಭಾರತದ ದಾಳಿಯ ಮುಂದೆ ತತ್ತರಿಸಿದ ಕಿವೀಸ್ ತಂಡ 41.2 ಓವರ್‌ಗಳಲ್ಲಿ 295 ರನ್‌ಗಳಿಗೆ ಆಲೌಟಾಯಿತು.

ಇದರೊಂದಿಗೆ ಭಾರತ ಏಕದಿನ ಕ್ರಿಕೆಟ್‌ನಲ್ಲಿ ವಿಶ್ವದ ನಂಬರ್ ಒನ್ ತಂಡ ಎನಿಸಿಕೊಂಡಿದೆ.

ಭಾರತಕ್ಕೆ ಬಲಿಷ್ಠ ಆರಂಭ: ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗೆ ಇಳಿದ ಭಾರತ ಉತ್ತಮ ಆರಂಭ ಪಡೆಯಿತು. ರೋಹಿತ್ ಶರ್ಮಾ ಮತ್ತು ಶುಭ್‌ಮನ್ ಗಿಲ್ ಇಬ್ಬರೂ ಶತಕ ಬಾರಿಸುವ ಮೂಲಕ 212 ರನ್‌ಗಳ ಜೊತೆಯಾಟವನ್ನು ಹಂಚಿಕೊಂಡರು. ಶತಕ ಸಿಡಿಸಿದ ನಾಯಕ ರೋಹಿತ್ ರೂಪದಲ್ಲಿ ಭಾರತಕ್ಕೆ ಮೊದಲ ಹೊಡೆತ ಬಿದ್ದರೆ, ನಾಯಕನ ಜೊತೆಗಿನ ಜೊತೆಯಾಟ ಮುರಿದ ತಕ್ಷಣ ಗಿಲ್ ಕೂಡ ಲಯ ಕಳೆದುಕೊಂಡರು. 230 ರನ್ ಗಳಿಸಿದ ಭಾರತಕ್ಕೆ ಗಿಲ್ ರೂಪದಲ್ಲಿ ಎರಡನೇ ಹೊಡೆತ ಬಿದ್ದಿತು. 112 ರನ್‌ಗಳ ಅದ್ಭುತ ಇನ್ನಿಂಗ್ಸ್ ಆಡಿದ ಗಿಲ್ ಔಟಾದ ಬಳಿಕ ಭಾರತದ ಇನ್ನಿಂಗ್ಸ್ ತತ್ತರಿಸಲಾರಂಭಿಸಿತು. ಇಶಾನ್ ಕಿಶನ್ 17 ರನ್, ವಿರಾಟ್ ಕೊಹ್ಲಿ 36 ರನ್, ಸೂರ್ಯಕುಮಾರ್ ಯಾದವ್ 14 ರನ್ ಗಳಿಸಲಷ್ಟೇ ಶಕ್ತರಾದರು.



ಭಾರತಕ್ಕೆ ನೆರವಾದ ಪಾಂಡ್ಯ: ಮಧ್ಯಮ ಕ್ರಮಾಂಕದ ವೈಫಲ್ಯದ ಬಳಿಕ ತಂಡಕ್ಕೆ ನೆರವಾದ ಹಾರ್ದಿಕ್ ಪಾಂಡ್ಯ ಬಿರುಸಿನ ಅರ್ಧಶತಕ ಬಾರಿಸುವ ಮೂಲಕ ತತ್ತರಿಸಿದ ಇನ್ನಿಂಗ್ಸ್ ನಿಭಾಯಿಸಿದರು. 54 ರನ್ ಗಳಿಸಿದ ಪಾಂಡ್ಯ ಹೊರತುಪಡಿಸಿ, ವಾಷಿಂಗ್ಟನ್ ಸುಂದರ್ 9, ಶಾರ್ದೂಲ್ ಠಾಕೂರ್ 25 ಮತ್ತು ಕುಲ್ದೀಪ್ ಯಾದವ್ 3 ರನ್‌ಗಳ ಕೊಡುಗೆ ನೀಡಿದರು.

ಕಿವೀಸ್ ಪರ ಮಿಂಚಿದ ಕಾನ್ವೇ: ಭಾರತ ನೀಡಿದ ಬೃಹತ್ ಟಾರ್ಗೆಟ್ ಬೆನ್ನಟ್ಟಿದ ಕಿವೀಸ್‌ಗೆ ಆರಂಭದಲ್ಲಿ ಆಘಾತ ಎದುರಾಯಿತು. ಆರಂಭಿಕ ಫಿನ್ ಅಲೆನ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಆದರೆ ಮತ್ತೊಬ್ಬ ಆರಂಭಿಕ ಆಟಗಾರ ಡೆವೊನ್ ಕಾನ್ವೆ ಮಾತ್ರ ಏಕಾಂಗಿಯಾಗಿ ಭಾರತದ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು. ತಂಡದ ಪರ ಅಬ್ಬರದ ಶತಕ ಸಿಡಿಸಿದ ಕಾನ್ವೇ ಹೊರತುಪಡಿಸಿ ತಂಡದಿಂದ ಮತ್ಯಾವ ಆಟಗಾರನೂ ಹೇಳಿಕೊಳ್ಳುವಂತಹ ಇನ್ನಿಂಗ್ಸ್ ಆಡಲಿಲ್ಲ. ಇದರಿಂದಾಗಿ ನ್ಯೂಜಿಲೆಂಡ್‌ಗೆ ಪೂರ್ಣ 50 ಓವರ್‌ಗಳನ್ನು ಸಹ ಆಡಲು ಸಾಧ್ಯವಾಗಲಿಲ್ಲ. ಠಾಕೂರ್ ಮತ್ತು ಕುಲ್ದೀಪ್ ತಲಾ 3 ವಿಕೆಟ್ ಪಡೆದರೆ, ಯಜ್ವೇಂದ್ರ ಚಹಾಲ್ 2 ಮತ್ತು ಪಾಂಡ್ಯ ಮತ್ತು ಉಮ್ರಾನ್ ಮಲಿಕ್ ತಲಾ ಒಂದೊಂದು ವಿಕೆಟ್ ಪಡೆದರು. ಶಾರ್ದೂಲ್ ಠಾಕೂರ್ ಪಂದ್ಯಶ್ರೇಷ್ಠ ಪಡೆದರೆ, ಶುಭ್‌ಮನ್ ಗಿಲ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಪಾತ್ರರಾದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪಠಾಣ್ (ಹಿಂ): ಬೆ.9.10ಕ್ಕೆ, ರಾ.7.20ಕ್ಕೆ, ರಾ.10.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಮ.1.30ಕ್ಕೆ, ಪುಸ್ ಇನ್ ಬೂಟ್ಸ್ ದಿ ಲಾಸ್ಟ್ ವಿಶ್ (3ಡಿ)(ಇಂ): ಸಂ.5.10ಕ್ಕೆ.
ಸ್ಕ್ರೀನ್ 2	ವಾರಿಸು (ತ): ರಾ.9.55ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ತುನಿವು (ತ): ಮ.1.05ಕ್ಕೆ, ವಾಲ್ತೆರ್ ವೀರಯ್ಯ (ತೆ): ಸಂ.4ಕ್ಕೆ.
ಸ್ಕ್ರೀನ್ 3	ವೇದ (ಕ): ಬೆ.10ಕ್ಕೆ, ಮ.1.10ಕ್ಕೆ, ತುನಿವು (ತ): ಸಂ.4.10ಕ್ಕೆ, ಆರ್ಕೆಸ್ಟ್ರಾ ಮೈಸೂರು (ಕ): ರಾ.7ಕ್ಕೆ, ನನ್ಪಕಲ್ ನೆರತು ಮಾಯಕ್ಕಲ್ (ಮ): ರಾ.10.15ಕ್ಕೆ.
ಸ್ಕ್ರೀನ್ 4	ಪಠಾಣ್ (ಹಿಂ): ಬೆ.10.15ಕ್ಕೆ, ಮ.1.10ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ವಾಲ್ತೆರ್ ವೀರಯ್ಯ (ತೆ): ಬೆ.10.10ಕ್ಕೆ, ಪುಸ್ ಇನ್ ಬೂಟ್ಸ್ ದಿ ಲಾಸ್ಟ್ ವಿಶ್ (3ಡಿ)(ಇಂ): ಮ.1.30ಕ್ಕೆ, ವಾರಿಸು (ತ): ಮ.3.45ಕ್ಕೆ, ವೇದ (ಕ): ರಾ.7.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ರಾ.10.20ಕ್ಕೆ.
ಸ್ಕ್ರೀನ್ 2	ವಾರಿಸು (ತ): ಬೆ.11ಕ್ಕೆ, ಸಂ.5.35ಕ್ಕೆ, ವೇದ (ಕ): ಮ.2.25ಕ್ಕೆ, ತುನಿವು (ತ): ರಾ.9ಕ್ಕೆ.
ಸ್ಕ್ರೀನ್ 3	ತುನಿವು (ತ): ಬೆ.10ಕ್ಕೆ, ಸಂ.4.15ಕ್ಕೆ, ವಾಲ್ತೆರ್ ವೀರಯ್ಯ (ತೆ): ಮ.1ಕ್ಕೆ, ರಾ.7.15ಕ್ಕೆ, ವಾರಿಸು (ತ): ರಾ.10.30ಕ್ಕೆ.
ಸ್ಕ್ರೀನ್ 4	ಪುಸ್ ಇನ್ ಬೂಟ್ಸ್ ದಿ ಲಾಸ್ಟ್ ವಿಶ್ (3ಡಿ)(ಇಂ): ಬೆ.10.45ಕ್ಕೆ, ಸಂ.4.50ಕ್ಕೆ, ರಾ.7.05ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಮ.1ಕ್ಕೆ, ರಾ.9.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾರಿಸು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೇದ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪಟಾಣ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗಾಡ್ ಫಾದರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಪಟಾಣ್ (ಹಿ)	4 ಪ್ರದರ್ಶನಗಳು
ರಾಜ್‌ಕಮಲ್	
ತುನಿವು (ತ)	4 ಪ್ರದರ್ಶನಗಳು
ಸಂಗಂ	
ವಾಲ್ಟರ್ ವೀರಯ್ಯ (ತೆ)	2 ಪ್ರದರ್ಶನಗಳು
ವಾರಿಸು (ತ)	2 ಪ್ರದರ್ಶನಗಳು
ಲಿಡೋ	
ವೀರಸಿಂಹ ರೆಡ್ಡಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ತುನಿವು (ತ)	4 ಪ್ರದರ್ಶನಗಳು
ಪ್ರಭಾ	
ಪಟಾಣ್ (ಹಿ)	2 ಪ್ರದರ್ಶನಗಳು

ಸಮುದಾಯ ಭವನ ಕಾಮಗಾರಿಗೆ ಗುದ್ದಲಿಪೂಜೆ



ಪಿರಿಯಾಪಟ್ಟಣ, ಜ.24– ಈ ಹಿಂದೆ ನಾನು ಪಪಂ ಅಧ್ಯಕ್ಷನಾಗಿದ್ದ ವೇಳೆ ಪೌರಕಾರ್ಮಿಕರ ಕಾಲೋನಿ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡಿದ್ದೇನೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಪಟ್ಟಣದ ಎಸ್‌ಪಿಆರ್ ಕಾಲೋನಿಯಲ್ಲಿ ಅಮೃತ ನಗರೋತ್ಥಾನ ಯೋಜನೆಯಡಿ 10 ಲಕ್ಷ ರೂ. ವೆಚ್ಚದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ಪೌರಕಾರ್ಮಿಕರಿಗಾಗಿ ನೂತನ ಮಹದೇಶ್ವರ ಬಡಾವಣೆ ನಿರ್ಮಿಸಿ ಅದಕ್ಕೆ ಮೂಲಸೌಕರ್ಯ ಒದಗಿಸಲಾಗಿದೆ. ನಮ್ಮೊಂದಿಗೆ ಎಲ್ಲರೂ ಒಡನಾಡಿಗಳಾಗಿದ್ದು, ಅವರ ಕಷ್ಟ ಸುಖಗಳಿಗೆ ಸ್ಪಂದಿಸಿದ್ದೇನೆ. ಸಮುದಾಯ ಭವನಕ್ಕೆ 10 ಲಕ್ಷ ರೂ. ಅನುದಾನ ನೀಡಿದ್ದು, ಹೆಚ್ಚುವರಿಯಾಗಿ 10 ಲಕ್ಷ ನೀಡಬೇಕಂದು ಮನವಿ ಮಾಡಿದ್ದೀರಾ. ಮುಂಬರುವ ಚುನಾವಣೆಯಲ್ಲಿ ಮತ್ತೊಮ್ಮೆ ನನ್ನನ್ನು ಶಾಸಕನಾಗಿ ಆಯ್ಕೆ ಮಾಡಿದರೆ ಅನುದಾನ ಬಿಡುಗಡೆ ಮಾಡುವುದಾಗಿ ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಮಹೇಂದ್ರ ಮಾತನಾಡಿ, ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ಈಗಾಗಲೇ 8.5 ಕೋಟಿ ರೂ.ಗಳ ಕ್ರಿಯಾ ಯೋಜನೆ ರೂಪಿಸಿದ್ದು, ಇದು 2ನೇ ಹಂತದ ಕ್ರಿಯಾಯೋಜನೆಯಾಗಿದೆ. 10 ಲಕ್ಷ ರೂ. ವೆಚ್ಚದಲ್ಲಿ ಸಮುದಾಯ ಭವನ ನಿರ್ಮಾಣವಾಗಲಿದೆ ಎಂದರು.

ಮುಖಂಡ ಹೆಚ್.ಕೆ.ಮಹೇಶ್ ಮಾತನಾಡಿ, ಮಹದೇಶ್ವರ ಬಡಾವಣೆಗೆ ಶುದ್ಧ ಕುಡಿಯುವ ನೀರಿನ ಘಟಕ ನೀಡಬೇಕು. ಪೌರಕಾರ್ಮಿಕರಿಗೆ ನೀಡಿರುವ ಸ್ಮಶಾನ ಅಭಿವೃದ್ಧಿ ಪಡಿಸಬೇಕು. ಶೇ.24ರ ಅನುದಾನದಲ್ಲಿ ಸಮುದಾಯ ಭವನಗಳಿಗೆ ಸುಣ್ಣಬಣ್ಣ ಹೊಡೆಯಲು ಅನುಕೂಲ ಮಾಡಿಕೊಡಬೇಕು ಎಂದರು.

ಈ ವೇಳೆ ಪುರಸಭಾಧ್ಯಕ್ಷ ಕೆ.ಮಹೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಪಿ.ಸಿ.ಕೃಷ್ಣ, ಮಾಜಿ ಪುರಸಭಾಧ್ಯಕ್ಷ ಮಂಜುನಾಥ್ ಸಿಂಗ್, ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಉಪಾಧ್ಯಕ್ಷೆ ಆಶಾ, ಪುರಸಭಾ ಸದಸ್ಯರಾದ ಪಿ.ಎನ್.ವಿನೋದ್, ನಿರಂಜನ್, ಪ್ರಕಾಶ್‌ಸಿಂಗ್, ಕಸಬಾ ಪಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಕುಮಾರ್, ಮಾಜಿ ಪುರಸಭಾ ಸದಸ್ಯರಾದ ರಾಜಮ್ಮ, ಕಲಾಮಣಿ, ಮುಖಂಡರಾದ ಕೃಷ್ಣಮೂರ್ತಿ, ಉಮೇಶ್, ಸಿ.ರಾಜು, ರಂಗರಾಜು, ರಘು, ಮಹೇಶ್ ಸೇರಿದಂತೆ ಮತ್ತಿತರರಿದ್ದರು.

ಫೆ.1, ಮಡಿವಾಳ ಮಾಚಿದೇವರ ಜಯಂತಿ ಆಚರಣೆ: ಎಡಿಸಿ



ಮೈಸೂರು, ಜ.24– ಅರ್ಥಪೂರ್ಣವಾಗಿ ಮಡಿವಾಳ ಮಾಚಿದೇವರ ಜಯಂತಿಯನ್ನು ಫೆ.1ರಂದು ಜಿಲ್ಲಾಡಳಿತದ ವತಿಯಿಂದ ಕಲಾಮಂದಿರದಲ್ಲಿ ಆಚರಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಡಿವಾಳ ಮಾಚಿದೇವರ ಜಯಂತಿ ಆಚರಣೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11.30 ಗಂಟೆಗೆ ವೇದಿಕೆ ಕಾರ್ಯಕ್ರಮ ಉದ್ಘಾಟನೆ ಮಾಡಲಾಗುವುದು. ಎಲ್ಲಾ ಸಮುದಾಯದವರು ಒಟ್ಟಿಗೆ ಸೇರಿ ಜಯಂತಿಯನ್ನು ಆಚರಣೆ ಮಾಡೋಣ. ಮಡಿವಾಳ ಮಾಚಿದೇವರ ವಚನಗಳ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸೋಣ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಿ.ಎಂ.ಸುದರ್ಶನ್ ಮಾತನಾಡಿ, ಶಿಷ್ಟಾಚಾರದನ್ವಯ ಆಹ್ವಾನ ಪತ್ರಿಕೆ ಮುದ್ರಿಸಿ ಹಂಚಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಗಾಯನ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಸಮುದಾಯದ ಮುಖಂಡರು ಮಾತನಾಡಿ ಸಮುದಾಯದಲ್ಲಿ ಸಾಧನೆ ಮಾಡಿರುವ ವ್ಯಕ್ತಿಗಳಿಗೆ ಸನ್ಮಾನ ಮಾಡಬೇಕು. ಜಯಂತಿಯ ದಿನ ಶಾಲಾ ಕಾಲೇಜುಗಳಲ್ಲಿ ಮಡಿವಾಳ ಮಾಚಿದೇವರ ವಚನಗಳ ಪರಿಚಯ ಹಾಗೂ ಮಹತ್ವವನ್ನು ತಿಳಿಸಬೇಕು. ಜಯಂತಿಯಲ್ಲಿ ಸರ್ಕಾರಿ ಅಧಿಕಾರಿಗಳು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜು, ಮಡಿವಾಳ ಮಾಚಿದೇವರ ಸಂಘದ ಜಿಲ್ಲಾಧ್ಯಕ್ಷ ಎಂ.ರಾಜು, ಪ್ರಧಾನ ಕಾರ್ಯದರ್ಶಿ ಚನ್ನಕೇಶವ, ಉಪಾಧ್ಯಕ್ಷ ಪ್ರಶಾಂತ್, ಮೈಸೂರು ತಾಲೂಕು ಅಧ್ಯಕ್ಷ ಜಯರಾವ್, ಕರ್ನಾಟಕ ರಾಜ್ಯ ಮಡಿವಾಳ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಮಂಜು ಬಿ.ಶೆಟ್ಟಿ ಮಹಿಳಾ ಅಧ್ಯಕ್ಷೆ ರೂಪ ಸೇರಿದಂತೆ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಜ.26, ಗಣರಾಜ್ಯೋತ್ಸವ



ಮೈಸೂರು, ಜ.24– ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ವಿದ್ಯಾಸಂಸ್ಥೆಯ ಆವರಣದಲ್ಲಿ ಜ.26ರ ಗುರುವಾರ ಬೆಳಿಗ್ಗೆ 8.30ಕ್ಕೆ ಗಣರಾಜ್ಯೋತ್ಸವವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ಧ್ವಜಾರೋಹಣ ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿ ಡಾ.ಜಿ. ಹೇಮಂತ ಕುಮಾರ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಬ್ಬರು ಅಪರಿಚಿತರ ಮೃತದೇಹ ಪತ್ತೆ

ಮೈಸೂರು, ಜ.24(ಎಸ್‌ಪಿಎನ್)–ನಗರದ ಎರಡು ಅಪರಿಚಿತ ವ್ಯಕ್ತಿಗಳ ಮೃತದೇಹ ಪತ್ತೆಯಾಗಿರುವ ಕುರಿತು ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ರೈಲ್ವೆ ನಿಲ್ದಾಣದ ಗೇಟ್ ಮುಂಭಾಗ 55 ವರ್ಷದ ಅಪರಿಚಿತ ಗಂಡಸಿನ ಶವದ ಬಗ್ಗೆ ಜ.12ರಂದು ಎಎಸ್ಐ ಎಂ.ಮಹದೇವಯ್ಯ ದೂರಿನ ಮೇರೆಗೆ ಪ್ರಕರಣ ದಾಖಲಿಸಿ, ಮೃತದೇಹವನ್ನು ಕೆ.ಆರ್.ಆಸ್ಪತ್ರೆ ಶವಗಾರದಲ್ಲಿ ಇರಿಸಲಾಗಿದೆ. ಸಂಬಂಧಪಟ್ಟ ವಾರಸುದಾರರು ಮಂಡಿ ಠಾಣೆಯಲ್ಲಿ ಮಾಹಿತಿ ಪಡೆಯಬಹುದು.

ಮತ್ತೊಂದು ಪ್ರಕರಣದಲ್ಲಿ ಗುನ್ನಂಪಾ ಗುಡ್ಡದ ಗೂಡ್ಸ್ ಶೆಡ್ ಲಾರಿ ಸ್ಟ್ಯಾಂಡ್ ಬಳಿಯಿರುವ ದೊಡ್ಡ ಮೋರಿಯಲ್ಲಿ ಜ.22ರಂದು ಬೆಳಗ್ಗೆ 60 ವರ್ಷದ ಅಪರಿಚಿತ ವೃದ್ಧೆಯ ದೇಹ ದೊರೆತಿದೆ. ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸಂಬಂಧಪಟ್ಟವರು ಮೊ.ಸಂ: 98458–62184, 0821–2418513/313/339 ಸಂಪರ್ಕಿಸಿ, ಮಾಹಿತಿ ಪಡೆಯಬಹುದು ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

6ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷ ಸಂದಿಸಿದ್ದು ನಿಮ್ಮ ಆತ್ಮಕ್ಕೆ ಭಗವಂತ ಚಿರಶಾಂತಿ ಕೊಡಲೆಂದು ಪ್ರಾರ್ಥಿಸುತ್ತೇವೆ
ದುಃಖತಪ್ತರು
ತಂದೆ: ನಿಂಗಪ್ಪ, ತಮ್ಮಂದಿರು, ಮಕ್ಕಳು ಮತ್ತು ಕುಟುಂಬವರ್ಗದವರು ಕೆ.ಜಿ.ಕೊಪ್ಪಲು

ಶ್ರೀಮತಿ ವಸಂತ

6ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷ ಸಂದಿಸಿದ್ದು ನಿಮ್ಮ ಆತ್ಮಕ್ಕೆ ಭಗವಂತ ಚಿರಶಾಂತಿ ಕೊಡಲೆಂದು ಪ್ರಾರ್ಥಿಸುತ್ತೇವೆ
ದುಃಖತಪ್ತರು
ತಾತ: ನಿಂಗಪ್ಪ, ತಮ್ಮ & ತಂಗಿ ಮಾವಂದಿರು ಮತ್ತು ಕುಟುಂಬವರ್ಗದವರು ಕೆ.ಜಿ.ಕೊಪ್ಪಲು

ಶ್ರೀ ಲೋಕೇಶ್

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ಷೆಡ್ಯೂಲ್ ಸ್ವತ್ತುಗಳ ಹಾಲಿ ಮಾಲೀಕರುಗಳಾದ, ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ದುದ್ದ ಹೋಬಳಿ, ಶಿವಳ್ಳಿ ಅಂಚೆ, ಮಾರನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ. ಎಂ.ಬಿ. ಬೋರೇಗೌಡ, ಶ್ರೀ. ಎಂ.ಬಿ. ಶಿವರತ್ನ, ಶ್ರೀ. ಎಂ.ಬಿ. ಚನ್ನೇಗೌಡ ಮತ್ತು ಶ್ರೀಮತಿ. ಸಿ.ಕೆ. ಸರಸ್ವತಿ ರವರುಗಳಿಂದ ಶುದ್ಧ ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಯಾವುದೇ ವ್ಯಕ್ತಿ/ ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾಧ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಏಳು (7) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದ ಸರ್ವೆ ನಂಬರ್ 344/2, 344/3, 344/4 ಮತ್ತು 344/5, ಒಟ್ಟು 01 ಎಕರೆ ಜಮೀನಿನಲ್ಲಿ ನಿರ್ಮಿಸಿರುವ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆಗಳು 3, 4, 5, 6 ಮತ್ತು 11.

ದಿನಾಂಕ: 25–01–2023
ಸ್ಥಳ: ಮೈಸೂರು

Manoj B.V / Nagendra Prasad D.G.
India Law Practice – ILP,
Advocates and Attorneys,
No. 663, 1st Floor, 17th Main, Near Poornima Hospital, Saraswathipuram,
Mysuru City – 570009.
Ph : 0821- 4241295/ 4262520
E-mail: manoj@ilplaw.co.in,
nagendra@ilplaw.co.in


ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಸಂಖ್ಯೆ: ಮೈನಪ್ರಾ/ವಿಕ–2/2022–23 ದಿನಾಂಕ : 23.01.2023

ಪತ್ರಿಕಾ ಪ್ರಕಟಣೆ

ಶ್ರೀಮತಿ ದಾಕ್ಷಾಯಿಣಿ, ಮನೆ ನಂ.967, 3ನೇ ಕ್ರಾಸ್, ವಿನೋಬಾ ರಸ್ತೆ, ಮೈಸೂರು ಇವರಿಗೆ ಸರಸ್ವತಿಪುರಂ ಟಿ.ಕೆ.ಲೇಔಟ್ ಬಡಾವಣೆಯ ನಿವೇಶನ ಸಂಖ್ಯೆ–15/ಹೆಚ್, ಅಳತೆ 90x120 ಅಡಿ ನಿವೇಶನವು ದಿನಾಂಕ:30.01.1980ರಂದು ಮಂಜೂರಾಗಿದ್ದು, ಸದರಿ ನಿವೇಶನದ ಸುತ್ತಿಗೆ [illegible] ಅಳತೆ ಮತ್ತು [illegible] ವ್ಯಾಜ್ಯವಿರುವುದರಿಂದ ಬದಲಿ ನಿವೇಶನ ಕೋರಿರುತ್ತಾರೆ. ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 11571/2022 ರಂತೆ ಪ್ರಕರಣ ದಾಖಲಿಸಿದ್ದು, ಈ ಸಂಬಂಧ ಘನ ನ್ಯಾಯಾಲಯವು ಪ್ರಸ್ತಾಪಿತ ನಿವೇಶನಕ್ಕೆ 90 ದಿನಗಳೊಳಗಾಗಿ ಕ್ರಯಪತ್ರ ನೀಡುವಂತೆ ದಿನಾಂಕ:11.07.2022ರಂದು ತೀರ್ಪು ನೀಡಿ ಆದೇಶಿಸಿರುತ್ತದೆ. ಅರ್ಜಿದಾರರು ದಿನಾಂಕ: 16.08.2022ರಂದು ಸದರಿ ತೀರ್ಪಿನ ದೃಢೀಕೃತ ಪ್ರತಿಯನ್ನು ಸಲ್ಲಿಸಿ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸದರಿ ನಿವೇಶನಕ್ಕೆ ಕ್ರಯಪತ್ರ ನೀಡುವಂತೆ ಕೋರಿರುತ್ತಾರೆ. ಘನ ನ್ಯಾಯಾಲಯದ ತೀರ್ಪಿನನ್ವಯ ಶ್ರೀಮತಿ ದಾಕ್ಷಾಯಿಣಿ ಕೋಂ ಲೇಟ್ ಬಾಲಕೃಷ್ಣ ರವರಿಗೆ ಸರಸ್ವತಿಪುರಂ, ಟಿ.ಕೆ.ಲೇಔಟ್ ಬಡಾವಣೆಯ ನಿವೇಶನ ಸಂಖ್ಯೆ–15/ಹೆಚ್, ವಿಸ್ತೀರ್ಣ 90x120 ಅಡಿಗಳ ನಿವೇಶನಕ್ಕೆ ಅದೇ ಅಳತೆಯ ಬದಲಿ ನಿವೇಶನವನ್ನು ಮಂಜೂರು ಮಾಡುವಂತೆ ಮಾನ್ಯ ಆಯುಕ್ತರವರು ದಿನಾಂಕ: 09.11.2022ರಲ್ಲಿ ಆದೇಶಿಸಿರುತ್ತಾರೆ. ಸದರಿ ನಿವೇಶನಕ್ಕೆ ಬದಲಿ ನಿವೇಶನ ಮಂಜೂರು ಮಾಡುವ ಹಂತದಲ್ಲಿ ಮಂಜೂರಾತಿದಾರರಾದ ಶ್ರೀಮತಿ ದಾಕ್ಷಾಯಿಣಿ ರವರು ದಿನಾಂಕ 14.12.2022ರಂದು ಮರಣ ಹೊಂದಿರುವುದಾಗಿ ಮೈಸೂರು ತಾಲ್ಲೂಕು, ಮೈಸೂರು ನಗರ ಕಛೇರಿಯಿಂದ ಪಡೆದ ನೋಂದಣಿ ಸಂಖ್ಯೆ: 803194/T/D/2022/011961ರ ಮರಣ ಪ್ರಮಾಣ ಪತ್ರವನ್ನು ಹಾಗೂ ಉಪ–ತಹಸೀಲ್ದಾರ್, ಕಸಬಾ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ ರವರ ಕಛೇರಿಯಿಂದ ಪಡೆದ ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ಸಂಖ್ಯೆ: RD5018882742777 ಅನ್ನು ಸಲ್ಲಿಸಿ ಶ್ರೀಮತಿ ಸುಷ್ಮ ಧ್ರುವ ಕೋಂ ಶ್ರೀ ಧ್ರುವಜ್ಯೋತಿ ಆರ್.ಎ.ಎಸ್ ರವರು ದಿನಾಂಕ:12.01.2023 ರಂದು ಪೌತಿ ಆಧಾರದ ಮೇರೆಗೆ ಬದಲಿ ನಿವೇಶನ ಮಂಜೂರಾತಿ ಪತ್ರ, ವರ್ಗಾವಣೆ ಮತ್ತು ಕ್ರಯಪತ್ರ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. (ಪ್ರಸ್ತುತ ವಿಳಾಸ: # ಸಿಹೆಚ್.28, ಬಾಲಕೃಷ್ಣರಾವ್ ರಸ್ತೆ, ಚಾಮರಾಜಪುರಂ, ಮೈಸೂರು) ಮೃತರ ವಾರಸುದಾರರಾದ ಶ್ರೀಮತಿ ಸುಷ್ಮ ಧ್ರುವ ರವರು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, ವಾರಸುದಾರರಾದ ತಮಗೆ ಮಂಜೂರಾತಿ ಮಾಡಿ ಮತ್ತು ಕ್ರಯಪತ್ರ ನೀಡುವಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ನಿವೇಶನದ ಮಂಜೂರಾತಿ ಮಾಡಿ ಕ್ರಯಪತ್ರ ಕೋರಿರುವ ಬಗ್ಗೆ, ಈ ಪ್ರಕಟಣೆ ಹೊರಡಿಸಿದ ಹದಿನೈದು ದಿನಗಳೊಳಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ಸಲ್ಲಿಸುವುದು. ನಿಗದಿತ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸದಿದ್ದಲ್ಲಿ, ಆಕ್ಷೇಪಣೆ ಏನೂ ಇಲ್ಲವೆಂದು ಭಾವಿಸಿ ಕಾನೂನಿನ ರೀತ್ಯಾ ಮುಂದಿನ ಕ್ರಮವಹಿಸಲಾಗುವುದು.

ವಿಶೇಷ ತಹಸೀಲ್ದಾರ್,
ವಲಯ ಕಛೇರಿ–2,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.



ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ




ಇವರು ದಿ: 15.01.2023 ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 25.01.2023 ಬುಧವಾರ ಮಧ್ಯಾಹ್ನ 01 ಗಂಟೆಗೆ ಮೃತರ ಸ್ವಗೃಹ #2/1, 2ನೇ ಕ್ರಾಸ್, 1ನೇ ಮೇನ್, "ಇ" ಬ್ಲಾಕ್ ರಾಮಕೃಷ್ಣನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಗೌರಮ್ಮ ಬಸವರಾಜು, ಶ್ರೀಮತಿ ಸೌಮ್ಯ ಮತ್ತು ಶ್ರೀ ಸುನೀಲ್, ಸಹೋದರರು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ಶ್ರೀ ಬಸವರಾಜು

1ನೇ ವರ್ಷದ ಸವಿನೆನಪು



ರಾಮೇಗೌಡ (ಮಾರಿಗುಡಿ)
ಲಕ್ಷ್ಮೀಪುರ, ಸಾಲಿಗ್ರಾಮ (ತಾ||)
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ಕುಟುಂಬವರ್ಗ



ಎರಡನೇ ವರ್ಷದ ಪುಣ್ಯಸ್ಮರಣೆ



ಶ್ರೀ ಚಂದ್ರೇಗೌಡರವರು

ಮಾಜಿ ತಾ.ಪಂ. ಸದಸ್ಯರು, PWD ಕಂಟ್ರಾಕ್ಟರ್, ಮಾಜಿ ನಿರ್ದೇಶಕರು, ಹಾಪ್‌ಕಾಮ್ಸ್, ಲಾಲ್‌ಬಾಗ್, ಬೆಂಗಳೂರು. ಮಾಲೀಕರು, ಶ್ರೀ ಚಾಮುಂಡೇಶ್ವರಿ ಬಾರ್ ಅಂಡ್ ರೆಸ್ಟೋರೆಂಟ್

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷವಾದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ

ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ:
ಶ್ರೀಮತಿ ರಾಧಮಣಿ ಚಂದ್ರೇಗೌಡ್ರು
ಶ್ರೀಮತಿ ಸಹನಾ (ವಿಷ್ಣು) ಕೃಷ್ಣಕುಮಾರ್.ಸಿ B.E., M.Tech,
ಶ್ರೀಮತಿ ಮಣಿಯಮ್ಮ ಶಿವೇಗೌಡ್ರು, ಹೆಣ್ಣುಮಕ್ಕಳು, ಅಳಿಯಂದಿರು, ಕುಟುಂಬವರ್ಗದವರು ಹಾಗೂ ಗ್ರಾಮಸ್ಥರು, ಚಿಕ್ಕೇಗೌಡನ ಕೊಪ್ಪಲು, ಇಲವಾಲ, ಮೈಸೂರು